सत्यमेव जयते

ಭಾರತ ಸರ್ಕಾರ

ಕಾನೂನು ಮತ್ತು ನ್ಯಾಯ ಮಂತ್ರಾಲಯ

# ಬಹು–ರಾಜ್ಯ ಸಹಕಾರಿ ಸೊಸೈಟಿಗಳ ಅಧಿನಿಯಮ, 2002

(2002ರ ಅಧಿನಿಯಮ ಸಂಖ್ಯೆ 39)

[1ನೇ ಮೇ, 2011 ರಂದು ಜಾರಿಯಲ್ಲಿದ್ದಂತೆ]

# THE MULTI-STATE CO-OPERATIVE SOCIETIES ACT, 2002

(Act No. 39 OF 2002)

[As on 1st May, 2011]

# ಮುನ್ನುಡಿ

1ನೇ ಮೇ, 2011 ರಂದು ಜಾರಿಯಲ್ಲಿದ್ದಂತೆ, ದಿ ಮಲ್ಟಿ ಸ್ಟೇಟ್ ಕೋ–ಆಪರೇಟಿವ್ ಸೊಸೈಟೀಸ್ ಆ್ಯಕ್ಟ್, 2002 (2002ರ 39) – ಇದರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ ಮತ್ತು ಇದನ್ನು 06.04.2012 ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 48ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 63 ರಿಂದ 146 ರವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಕನ್ನಡದ ಈ ಪಾಠವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಪ್ರಕಟಿಸಲಾಗಿತ್ತು. ಅಂಥ ಪ್ರಕಟಣೆಯ ತರುವಾಯ ಇದು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವಾಗಿರುತ್ತದೆ.

ನವದೆಹಲಿ

**ವಿ.ಕೆ. ಭಸೀನ್**
ಕಾರ್ಯದರ್ಶಿ
ಭಾರತ ಸರ್ಕಾರ

# PREFACE

This edition of the Multi-State Co-operative Societies Act, 2002 (39 of 2002) as on the 1st May, 2011 contains the authoritative text of that Act in Kannada which was published in the Gazette of India Extraordinary, Part IX, Section 1, No. 1, Vol. 48, dated 06.04.2012 on pages . 63 to 146.

This Kannada text was published under the authority of the President under clause (a) of Section 2 of the Authoritative Texts (Central Laws) Act, 1973 and on such publication it became the authoritative text of that Act in Kannada.

New Delhi

**V.K. BHASIN**
Secretary
Government of India

# ಬಹು-ರಾಜ್ಯ ಸಹಕಾರಿ ಸೊಸೈಟಿಗಳ ಅಧಿನಿಯಮ, 2002

## ಪ್ರಕರಣಗಳ ಅನುಕ್ರಮಣಿಕೆ


ಪ್ರಕರಣಗಳು: ಪುಟಗಳು

ಅಧ್ಯಾಯ – I

ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ 1
2. ಅನ್ವಯ 1
3. ಪರಿಭಾಷೆಗಳು 2

ಅಧ್ಯಾಯ – II

ಕೇಂದ್ರ ರಿಜಿಸ್ಟ್ರಾರರು ಮತ್ತು ಬಹು-ರಾಜ್ಯ ಸಹಕಾರಿ ಸೊಸೈಟಿಗಳ ನೋಂದಣಿ

4. ಕೇಂದ್ರ ರಿಜಿಸ್ಟ್ರಾರ್ 4
5. ನೋಂದಾಯಿಸಬಹುದಾದಂಥ ಬಹು-ರಾಜ್ಯ ಸಹಕಾರಿ ಸೊಸೈಟಿಗಳು 4
6. ನೋಂದಣಿಗಾಗಿ ಅರ್ಜಿ 5
7. ನೋಂದಣಿ 6
8. ನೋಂದಣಿ ಪ್ರಮಾಣ ಪತ್ರ 7
9. ಬಹು-ರಾಜ್ಯ ಸಹಕಾರಿ ಸೊಸೈಟಿಯು ನಿಗಮಿತ ನಿಕಾಯವಾಗಿರತಕ್ಕದ್ದು 7
10. ಬಹು-ರಾಜ್ಯ ಸಹಕಾರಿ ಸೊಸೈಟಿಗಳ ಉಪ-ವಿಧಿಗಳು 7
11. ಬಹು-ರಾಜ್ಯ ಸಹಕಾರಿ ಸೊಸೈಟಿಯ ಉಪ-ವಿಧಿಗಳಿಗೆ ತಿದ್ದುಪಡಿ 9
12. ಉಪ-ವಿಧಿಗಳ ತಿದ್ದುಪಡಿ ಯಾವಾಗ ಜಾರಿಗೆ ಬರುತ್ತದೆ 12
13. ಹೆಸರಿನ ಬದಲಾವಣೆ 12
14. ವಿಳಾಸದ ಬದಲಾವಣೆ 12
15. ಬಹು-ರಾಜ್ಯ ಸಹಕಾರಿ ಸೊಸೈಟಿಯು ತನ್ನ ಹೆಸರನ್ನು ಪ್ರಕಟಿಸುವುದು 12
16. ಹೊಣೆಗಾರಿಕೆ 13
17. ಬಹು-ರಾಜ್ಯ ಸಹಕಾರಿ ಸೊಸೈಟಿಯ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ವಿಲೀನ ಅಥವಾ ವರ್ಗಾವಣೆ ಅಥವಾ ವಿಭಜನೆ 14
18. ಕೇಂದ್ರ ರಿಜಿಸ್ಟ್ರಾರನು ಕೆಲವು ಸಂದರ್ಭಗಳಲ್ಲಿ ಸಹಕಾರಿ ಬ್ಯಾಂಕಿನ ವಿಲೀನ ಅಥವಾ ಪುನರ್ ರಚನೆಯ ಯೋಜನೆಯನ್ನು ಸಿದ್ಧಪಡಿಸುವುದು 15
19. ಸಹಾಯಕ ಸಂಸ್ಥೆಗೆ ಉತ್ತೇಜನ 15

20. ಠೇವಣಿ ವಿಮಾ ಮತ್ತು ಸಾಲ ಖಾತರಿ ನಿಗಮಕ್ಕೆ ಸಹಕಾರಿ ಬ್ಯಾಂಕಿನ ಹೊಣೆಗಾರಿಕೆ 16

21. ಕೆಲವು ಸಂದರ್ಭಗಳಲ್ಲಿ ಬಹು-ರಾಜ್ಯ ಸಹಕಾರಿ ಸೊಸೈಟಿಗಳ ನೋಂದಣಿ ಪ್ರಮಾಣ ಪತ್ರವನ್ನು ರದ್ದುಗೊಳಿಸುವುದು 16

22. ಸಹಕಾರಿ ಸೊಸೈಟಿಯನ್ನು ಬಹು-ರಾಜ್ಯ ಸಹಕಾರಿ ಸೊಸೈಟಿಯನ್ನಾಗಿ ಪರಿವರ್ತಿಸುವುದು 17

**ಅಧ್ಯಾಯ – III**

**ಸಹಕಾರಿ ಮಹಾ ಮಂಡಳದ ನೋಂದಣಿ ಮತ್ತು ಪ್ರಕಾರ್ಯಗಳು**

23. ಸಹಕಾರಿ ಮಹಾಮಂಡಳದ ನೋಂದಣಿ 19

24. ಸಹಕಾರಿ ಮಹಾಮಂಡಳದ ಪ್ರಕಾರ್ಯಗಳು 19

**ಅಧ್ಯಾಯ – IV**

**ಬಹು-ರಾಜ್ಯ ಸಹಕಾರಿ ಸೊಸೈಟಿಗಳ ಸದಸ್ಯರು ಮತ್ತು ಅವರ ಕರ್ತವ್ಯಗಳು, ಹಕ್ಕುಗಳು ಮತ್ತು ಹೊಣೆಗಾರಿಕೆಗಳು**

25. ಯಾವ ವ್ಯಕ್ತಿಗಳು ಸದಸ್ಯರಾಗಬಹುದು 20

26. ಸೊಸೈಟಿಯ ನಾಮಮಾತ್ರ ಅಥವಾ ಸಹ-ಸದಸ್ಯ 21

27. ಸದಸ್ಯರಿಗೆ ಶೈಕ್ಷಣಿಕ ತರಗತಿಗಳು 21

28. ಸದಸ್ಯರು ಬಾಕಿಯಿರುವ ಸಂದಾಯವನ್ನು ಮಾಡುವವರೆಗೆ ಹಕ್ಕನ್ನು ಚಲಾಯಿಸತಕ್ಕದ್ದಲ್ಲ 22

29. ಬಹು-ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯನ ಅನರ್ಹತೆಗಳು 22

30. ಸದಸ್ಯರ ಉಚ್ಚಾಟನೆ 22

31. ಸದಸ್ಯರ ಮತ 22

32. ಮತ ಚಲಾಯಿಸುವ ರೀತಿ 23

33. ಷೇರುಗಳನ್ನು ಹೊಂದುವುದರ ಮೇಲೆ ನಿರ್ಬಂಧ 23

34. ಷೇರುಗಳ ಅಥವಾ ಹಿತಾಸಕ್ತಿಯ ವರ್ಗಾವಣೆಯ ಮೇಲೆ ನಿರ್ಬಂಧ 24

35. ಷೇರುಗಳನ್ನು ವಾಪಸ್ಸು ತೆಗೆದುಕೊಳ್ಳುವುದು 24

36. ಸದಸ್ಯರ ಮರಣಾನಂತರ ಹಿತಾಸಕ್ತಿಯ ವರ್ಗಾವಣೆ 24

37. ಹಿಂದಿನ ಸದಸ್ಯನ ಹೊಣೆಗಾರಿಕೆಗಳು ಮತ್ತು ಮೃತ ಸದಸ್ಯನ ಸಂಪದ 24

**ಅಧ್ಯಾಯ –V**

**ಬಹು-ರಾಜ್ಯ ಸಹಕಾರಿ ಸೊಸೈಟಿಗಳ ನಿರ್ದೇಶನ ಮತ್ತು ವ್ಯವಸ್ಥಾಪನೆ**

38. ಸರ್ವ ಸದಸ್ಯರ ಮಂಡಳಿಯ ರಚನೆ, ಅಧಿಕಾರಗಳು ಮತ್ತು ಪ್ರಕಾರ್ಯಗಳು 25

39. ಸರ್ವ ಸದಸ್ಯರ ಮಂಡಳಿಯ ವಾರ್ಷಿಕ ಸಾಮಾನ್ಯ ಸಭೆ 26

40. ಸರ್ವ ಸದಸ್ಯರ ವಿಶೇಷ ಸಾಮಾನ್ಯ ಸಭೆ 27

41. ನಿರ್ದೇಶಕರ ಮಂಡಲಿ 27

42. ಆಡಳಿತಾತ್ಮಕ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ನೌಕರರು ಪಾಲ್ಗೊಳ್ಳುವುದು 28

43. ಮಂಡಲಿಯ ಸದಸ್ಯನಾಗಿರಲು ಅನರ್ಹತೆಗಳು 28

44. ಕೆಲವು ಸಂದರ್ಭಗಳಲ್ಲಿ ಚೇರ್‌ಪರ್ಸನ್ ಅಥವಾ ಅಧ್ಯಕ್ಷನ ಅಥವಾ ವೈಸ್ ಚೇರ್‌ಪರ್ಸನ್ ಅಥವಾ ಉಪಾಧ್ಯಕ್ಷನ ಪದವನ್ನು ಧಾರಣ ಮಾಡುವುದಕ್ಕೆ ನಿಷೇಧ 30

45. ಮಂಡಲಿಯ ಸದಸ್ಯರ ಚುನಾವಣೆಗಳು 31

46. ಸಹಕಾರಿ ಸೊಸೈಟಿಯಲ್ಲಿ ಪದವನ್ನು ಧಾರಣ ಮಾಡುವುದು 32

47. ಸರ್ವ ಸದಸ್ಯರ ಸಭೆಯು ಚುನಾಯಿತ ಸದಸ್ಯರನ್ನು ತೆಗೆದುಹಾಕುವುದು 32

48. ಮಂಡಲಿಯಲ್ಲಿ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ನಾಮನಿರ್ದೇಶಿತ 32

49. ಮಂಡಲಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು 33

50. ಮಂಡಲಿಯ ಸಭೆ 34

51. ಮುಖ್ಯ ಕಾರ್ಯ ನಿರ್ವಾಹಕ 34

52. ಮುಖ್ಯ ಕಾರ್ಯನಿರ್ವಾಹಕನ ಅಧಿಕಾರಗಳು ಮತ್ತು ಪ್ರಕಾರ್ಯಗಳು 35

53. ಮಂಡಲಿಯ ಸಮಿತಿಗಳು 36

54. ದಾಖಲೆಗಳ ಸ್ವಾಧೀನವನ್ನು ಪಡೆಯುವುದು, ಇತ್ಯಾದಿ 36

**ಅಧ್ಯಾಯ –VI**

**ಬಹು–ರಾಜ್ಯ ಸಹಕಾರಿ ಸೊಸೈಟಿಗಳ ವಿಶೇಷಾಧಿಕಾರ**

55. ಸದಸ್ಯರ ಷೇರು ಅಥವಾ ವಂತಿಗೆ ಅಥವಾ ಹಿತಾಸಕ್ತಿಗೆ ಸಂಬಂಧಿಸಿದಂತೆ ಋಣಭಾರ ಮತ್ತು ವಜಾವಟ್ಟು 37

56. ಷೇರು ಅಥವಾ ವಂತಿಗೆಯು ಅಥವಾ ಹಿತಾಸಕ್ತಿಯು ಜಪ್ತಿಗೆ ಗುರಿಯಾಗುವುದಿಲ್ಲ 37

57. ಸದಸ್ಯರ ರಿಜಿಸ್ಟರು 37

58. ನಮೂದಿನ ಪ್ರತಿಯನ್ನು ಸಾಕ್ಷ್ಯವಾಗಿ ಅಂಗೀಕರಿಸುವುದು 38

59. ಲಿಖಿತಗಳಿಗೆ ಕಡ್ಡಾಯ ನೋಂದಣಿಯಿಂದ ವಿನಾಯಿತಿ 38

60. ಕೆಲವು ಸಂದರ್ಭಗಳಲ್ಲಿ ಬಹು–ರಾಜ್ಯ ಸಹಕಾರಿ ಸೊಸೈಟಿಯ ಕ್ಲೇಮನ್ನು ಈಡೇರಿಸಲು ಸಂಬಳದಲ್ಲಿ ಕಡಿತ 39

61. ಬಹು–ರಾಜ್ಯ ಸಹಕಾರಿ ಸೊಸೈಟಿಗಳಿಗೆ ಸರ್ಕಾರದ ನೆರವು 39

**ಅಧ್ಯಾಯ – VII**

**ಬಹು–ರಾಜ್ಯ ಸಹಕಾರಿ ಸೊಸೈಟಿಗಳ ಸ್ವತ್ತುಗಳು ಮತ್ತು ನಿಧಿಗಳು**

62. ನಿಧಿಗಳನ್ನು ಲಾಭದ ರೂಪದಲ್ಲಿ ವಿಭಾಗಿಸತಕ್ಕದ್ದಲ್ಲ 40

63. ನಿವ್ವಳ ಲಾಭಗಳ ವಿಲೆ 41

64. ನಿಧಿಗಳ ಹೂಡಿಕೆ 42

65. ವಂತಿಗೆ ಮೇಲೆ ನಿರ್ಬಂಧ 42

66. ಸಾಲಗಳ ನೀಡಿಕೆ ಮೇಲಿನ ನಿರ್ಬಂಧ 43

67. ಸಾಲ ಪಡೆಯುವುದಕ್ಕೆ ನಿರ್ಬಂಧ 43

68. ಸದಸ್ಯೇತರರೊಂದಿಗೆ ನಡೆಸುವ ಇತರ ವ್ಯವಹಾರಗಳ ಮೇಲೆ ನಿರ್ಬಂಧ 43

69. ವಂತಿಗೆ ಭವಿಷ್ಯ ನಿಧಿ 43

## ಅಧ್ಯಾಯ – VIII

## ಲೆಕ್ಕ ಪರಿಶೋಧನೆ, ವಿಚಾರಣೆ, ಪರಿಶೀಲನೆ ಮತ್ತು ಸರ್ ಚಾರ್ಜ್

70. ಲೆಕ್ಕಪರಿಶೋಧಕರ ನೇಮಕ ಮತ್ತು ಅವರ ಸಂಭಾವನೆ 44

71. ಲೆಕ್ಕಪರಿಶೋಧಕರನ್ನು ನೇಮಕ ಮಾಡುವ ಅಥವಾ ತೆಗೆದುಹಾಕುವ ಠರಾವುಗಳ ಬಗ್ಗೆ ಉಪಬಂಧ 46

72. ಲೆಕ್ಕಪರಿಶೋಧಕರ ಅರ್ಹತೆಗಳು ಮತ್ತು ಅನರ್ಹತೆಗಳು 47

73. ಲೆಕ್ಕಪರಿಶೋಧಕರ ಅಧಿಕಾರಗಳು ಮತ್ತು ಕರ್ತವ್ಯಗಳು 47

74. ಲೆಕ್ಕಪರಿಶೋಧನಾ ವರದಿ, ಇತ್ಯಾದಿಗೆ ಸಹಿ 49

75. ಲೆಕ್ಕಪರಿಶೋಧಕರ ವರದಿಯನ್ನು ಓದುವುದು ಮತ್ತು ಪರಿಶೀಲಿಸುವುದು 49

76. ಸಾಮಾನ್ಯ ಸಭೆಗೆ ಹಾಜರಾಗುವುದಕ್ಕೆ ಲೆಕ್ಕಪರಿಶೋಧಕನಿಗೆ ಇರುವ ಹಕ್ಕು 49

77. ಕೆಲವು ಸಂದರ್ಭಗಳಲ್ಲಿ ವಿಶೇಷ ಲೆಕ್ಕಪರಿಶೋಧನೆ ಮಾಡುವಂತೆ ನಿರ್ದೇಶನ ನೀಡಲು ಕೇಂದ್ರ ಸರ್ಕಾರದ ಅಧಿಕಾರ 50

78. ಕೇಂದ್ರ ರಿಜಿಸ್ಟ್ರಾರನಿಂದ ವಿಚಾರಣೆ 51

79. ಬಹು–ರಾಜ್ಯ ಸಹಕಾರಿ ಸೊಸೈಟಿಗಳ ತಪಾಸಣೆ 53

80. ಋಣಿಯಾಗಿರುವ ಬಹು–ರಾಜ್ಯ ಸಹಕಾರಿ ಸೊಸೈಟಿಗಳ ಪುಸ್ತಕಗಳ ತಪಾಸಣೆ 53

81. ವಿಚಾರಣೆ ಮತ್ತು ತಪಾಸಣೆಯ ವೆಚ್ಚಗಳು 54

82. ವೆಚ್ಚಗಳ ವಸೂಲಿ 54

83. ಮರು ಸಂದಾಯ, ಇತ್ಯಾದಿ 54

## ಅಧ್ಯಾಯ – IX

## ವಿವಾದಗಳ ಇತ್ಯರ್ಥ

84. ವಿವಾದಗಳ ಉಲ್ಲೇಖ 55

85. ಕಾಲಪರಿಮಿತಿ 57

## ಅಧ್ಯಾಯ –X

### ಬಹು–ರಾಜ್ಯ ಸಹಕಾರಿ ಸೊಸೈಟಿಯ ಪರಿಸಮಾಪನ


86. ಬಹು–ರಾಜ್ಯ ಸಹಕಾರಿ ಸೊಸೈಟಿಗಳ ಪರಿಸಮಾಪನ 58

87. ರಿಸರ್ವ್ ಬ್ಯಾಂಕಿನ ನಿರ್ದೇಶನದ ಮೇರೆಗೆ ಸಹಕಾರಿ ಬ್ಯಾಂಕಿನ ಪರಿಸಮಾಪನ 59

88. ಸಮಾಪಕನು ಠೇವಣಿ ವಿಮಾ ನಿಗಮಕ್ಕೆ ತುಂಬಿಕೊಡುವುದು 59

89. ಸಮಾಪಕ 59

90. ಸಮಾಪಕನ ಅಧಿಕಾರಗಳು 60

91. ಹೆಚ್ಚುವರಿ ಆಸ್ತಿಗಳ ವಿಲೆ 62

92. ಸಮಾಪಕನು ನಿರ್ಧರಿಸಿದ ವಂತಿಗೆಗಳ ಆದ್ಯತೆ 62

93. ಬಹು–ರಾಜ್ಯ ಸಹಕಾರ ಸೊಸೈಟಿಯ ನೋಂದಣಿಯನ್ನು ರದ್ದುಗೊಳಿಸುವುದಕ್ಕೆ ಕೇಂದ್ರ ರಿಜಿಸ್ಟ್ರಾರನ ಅಧಿಕಾರ 62


## ಅಧ್ಯಾಯ – XI

### ಡಿಕ್ರಿಗಳನ್ನು, ಆದೇಶಗಳನ್ನು ಮತ್ತು ತೀರ್ಮಾನಗಳನ್ನು ಜಾರಿಗೊಳಿಸುವುದು


94. ತೀರ್ಮಾನಗಳು ಇತ್ಯಾದಿಗಳನ್ನು ಜಾರಿಗೊಳಿಸುವುದು 62

95. ಸಮಾಪಕನ ಆದೇಶಗಳನ್ನು ಜಾರಿಗೊಳಿಸುವುದು 63

96. ಐತೀರ್ಪಿಗೆ ಮುಂಚೆ ಜಪ್ತಿ 63

97. ಕೇಂದ್ರ ರಿಜಿಸ್ಟ್ರಾರನು ಅಥವಾ ಮಧ್ಯಸ್ಥಿಕೆದಾರನು ಅಥವಾ ಅಧಿಕೃತಗೊಂಡ ವ್ಯಕ್ತಿಯು ಕೆಲವು ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯವಾಗಿರತಕ್ಕದ್ದು 64

98. ಸರ್ಕಾರಕ್ಕೆ ಬರಬೇಕಾದ ಮೊಬಲಗಿನ ವಸೂಲಿ 64


## ಅಧ್ಯಾಯ –XII

### ಅಪೀಲುಗಳು ಮತ್ತು ಪುನರವಲೋಕನ


99. ಅಪೀಲುಗಳು 65

100. ಕೆಲವು ಪ್ರಕರಣಗಳಲ್ಲಿ ಅಪೀಲಿಗೆ ಅವಕಾಶವಿಲ್ಲ 66

101. ಪುನರವಲೋಕನ 66

102. ವಾದಕಾಲೀನ ಆದೇಶಗಳು 66


## ಅಧ್ಯಾಯ–XIII

### ರಾಜ್ಯಗಳ ಪುನರ್ ವಿಂಗಡಣೆಯ ಪರಿಣಾಮವಾಗಿ ಬಹು–ರಾಜ್ಯ ಸಹಕಾರಿ ಸೊಸೈಟಿಗಳಾಗುವ ಸೊಸೈಟಿಗಳು


103. ರಾಜ್ಯಗಳ ಪುನರ್ ವಿಂಗಡಣೆಯ ನಿಕಟಪೂರ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಹಕಾರಿ ಸೊಸೈಟಿಗಳು 67

## ಅಧ್ಯಾಯ – XIV

## ಅಪರಾಧಗಳು ಮತ್ತು ದಂಡನೆಗಳು

104. ಅಪರಾಧಗಳು ಮತ್ತು ದಂಡನೆಗಳು 68

105. ಅಪರಾಧಗಳ ಸಂಜ್ಞೇಯತೆ 70

## ಅಧ್ಯಾಯ – XV

## ಸಂಕೀರ್ಣ

106. ಉಪವಿಧಿಗಳ ಪ್ರತಿಗಳು, ಇತ್ಯಾದಿಗಳು ಪರಿಶೀಲನೆಗೆ ಮುಕ್ತವಾಗಿರತಕ್ಕದ್ದು 70

107. ರಿಜಿಸ್ಟರುಗಳನ್ನು ಮತ್ತು ವಿವರ ಪಟ್ಟಿಕೆಗಳನ್ನು ರಕ್ಷಿಸಿ ಇಡುವ ಮತ್ತು ಪರಿಶೀಲಿಸುವ ಸ್ಥಳ 71

108. ಬಹು–ರಾಜ್ಯ ಸಹಕಾರಿ ಸೊಸೈಟಿಯ ಲೆಕ್ಕದ ಪುಸ್ತಕ, ಇತ್ಯಾದಿಗಳ ಪರಿಶೀಲನೆ 71

109. ವಾರ್ಷಿಕ ಲೆಕ್ಕಪತ್ರಗಳು ಮತ್ತು ಜಮಾ–ಖರ್ಚು ಪಟ್ಟಿ 72

110. ಸಾಮಾನ್ಯ ಸಭೆಗಳ ಮತ್ತು ಮಂಡಳಿಯ ಮತ್ತು ಇತರ ಸಭೆಗಳ ವ್ಯವಹರಣೆಗಳ ನಡವಳಿಗಳು 73

111. ನಡವಳಿಗಳು ಸಾಕ್ಷ್ಯವಾಗಿರತಕ್ಕದ್ದು 74

112. ಕ್ರಮಬದ್ಧವಾಗಿ ಬರೆದ ಮತ್ತು ಸಹಿ ಮಾಡಿದ ನಡವಳಿಗಳ ಸಂದರ್ಭದಲ್ಲಿ ಪೂರ್ವಭಾವನೆ ಮಾಡುವುದು 74

113. ಸಾಮಾನ್ಯ ಸಭೆಗಳ ನಡವಳಿ ಪುಸ್ತಕದ ಪರಿಶೀಲನೆ 74

114. ಸಮಾಪಕನು ಲೋಕ ನೌಕರನಾಗಿರುವುದು 74

115. ದಾವೆಗಳ ಸಂದರ್ಭದಲ್ಲಿ ನೋಟೀಸು ಅವಶ್ಯಕ 75

116. ಎರಡನೇ ಅನುಸೂಚಿಯನ್ನು ತಿದ್ದುಪಡಿ ಮಾಡಲು ಅಧಿಕಾರ 75

117. ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯ ಪ್ರತಿಷೇಧ 75

118. ರಕ್ಷಣೆ 76

119. ಶಾಖೆಗಳನ್ನು ತೆರೆಯುವುದು 76

120. ವಿವರಪಟ್ಟಿಕೆಗಳನ್ನು ಸಲ್ಲಿಸುವುದು 76

121. ಕೆಲವು ಅಧಿನಿಯಮಗಳು ಅನ್ವಯವಾಗುವುದಿಲ್ಲ 76

122. ನಿರ್ದಿಷ್ಟಪಡಿಸಿದ ಬಹು–ರಾಜ್ಯ ಸಹಕಾರಿ ಸೊಸೈಟಿಗಳಿಗೆ ಸಾರ್ವಜನಿಕ ಹಿತ ದೃಷ್ಟಿಯಿಂದ ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ 76

123. ನಿರ್ದಿಷ್ಟಪಡಿಸಿದ ಬಹು–ರಾಜ್ಯ ಸಹಕಾರಿ ಸೊಸೈಟಿಯ ಮಂಡಲಿಯ ರದ್ದತಿ 77

124. ನಿಯಮಗಳನ್ನು ರಚಿಸಲು ಅಧಿಕಾರ 78

125. ತೊಂದರೆಗಳನ್ನು ನಿವಾರಿಸಲು ಅಧಿಕಾರ 81

126. ನಿರಸನ ಮತ್ತು ಉಳಿಸುವಿಕೆ 81

**ಅನುಸೂಚಿಗಳು** 82–84

# ಬಹು-ರಾಜ್ಯ ಸಹಕಾರಿ ಸೊಸೈಟಿಗಳ ಅಧಿನಿಯಮ, 2002

## (2002ರ ಅಧಿನಿಯಮ ಸಂಖ್ಯೆ. 39)

**[ಜುಲೈ 3, 2002]**

ಒಂದು ರಾಜ್ಯಕ್ಕೆ ಸೀಮಿತಗೊಳ್ಳದ ಮತ್ತು ಒಂದಕ್ಕಿಂತ ಹೆಚ್ಚು ರಾಜ್ಯಗಳಲ್ಲಿನ ಸದಸ್ಯರ ಹಿತಾಸಕ್ತಿಗಳನ್ನು ರಕ್ಷಿಸುವ ಉದ್ದೇಶಗಳಿಂದ ಸ್ವ-ಸಹಾಯ ಮತ್ತು ಪರಸ್ಪರ ಸಹಾಯವನ್ನು ಆಧರಿಸಿದ ಜನರ ಸಂಸ್ಥೆಗಳಾಗಿ ಸಹಕಾರಿ ಸೊಸೈಟಿಗಳ ಸ್ವಯಂ-ರಚನೆ ಮತ್ತು ಪ್ರಜಾಸತ್ತಾತ್ಮಕವಾಗಿ ಕಾರ್ಯನಿರ್ವಹಿಸುವುದಕ್ಕೆ ಅನುಕೂಲ ಕಲ್ಪಿಸಲು ಮತ್ತು ಅವುಗಳ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ವೃದ್ಧಿಸಿಕೊಳ್ಳಲು ಅವುಗಳಿಗೆ ಸಾಧ್ಯವಾಗುವಂತೆ ಮಾಡಲು ಮತ್ತು ಅವುಗಳಿಗೆ ಕಾರ್ಯನಿರ್ವಹಣೆಯ ಸ್ವಾಯತ್ತತೆಯನ್ನು ಕಲ್ಪಿಸಲು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಸಹಕಾರಿ ಸೊಸೈಟಿಗಳಿಗೆ ಸಂಬಂಧಿಸಿದ ಕಾನೂನನ್ನು ಕ್ರೋಡೀಕರಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಐವತ್ತೂರನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

### ಅಧ್ಯಾಯ - I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಬಹುರಾಜ್ಯ ಸಹಕಾರಿ ಸೊಸೈಟಿಗಳ ಅಧಿನಿಯಮ, 2002 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಯಾವುದೇ ಅಂಥ ಉಪಬಂಧದಲ್ಲಿ ಈ ಅಧಿನಿಯಮದ ಪ್ರಾರಂಭಕ್ಕೆ ಮಾಡಿದ ಯಾವುದೇ ಉಲ್ಲೇಖವನ್ನು ಆ ಉಪಬಂಧವು ಜಾರಿಗೆ ಬಂದಿರುವುದಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**2. ಅನ್ವಯ.-** ಈ ಅಧಿನಿಯಮವು,-

(ಎ) (i) ಸಹಕಾರಿ ಸೊಸೈಟಿಗಳ ಅಧಿನಿಯಮ, 1912 (1912ರ 2)ರ ಮೇರೆಗೆ; ಅಥವಾ

(ii) ಯಾವುದೇ ರಾಜ್ಯದಲ್ಲಿ ಜಾರಿಯಲ್ಲಿರುವ ಸಹಕಾರಿ ಸೊಸೈಟಿಗಳಿಗೆ ಸಂಬಂಧಿಸಿದ ಯಾವುದೇ ಇತರ ಕಾನೂನಿನ ಮೇರೆಗೆ ಅಥವಾ ಬಹು-ಘಟಕ ಸಹಕಾರಿ ಸೊಸೈಟಿಗಳ ಅಧಿನಿಯಮ, 1942 (1942ರ 6) ಅಥವಾ ಬಹು-ರಾಜ್ಯ ಸಹಕಾರಿ ಸೊಸೈಟಿಗಳ ಅಧಿನಿಯಮ, 1984ರ (1984ರ 51) ಅನುಸರಣೆಯಲ್ಲಿ ಈ ಅಧಿನಿಯಮವು ಪ್ರಾರಂಭವಾಗುವುದಕ್ಕಿಂತ ಮುಂಚೆ ನಿಗಮಿತವಾದ, ಒಂದು ರಾಜ್ಯಕ್ಕೆ

ಸೀಮಿತವಾಗದ ಉದ್ದೇಶಗಳನ್ನೊಳಗೊಂಡ ಮತ್ತು ಅಂಥ ಪ್ರಾರಂಭಕ್ಕೆ ಮುಂಚೆ ನೋಂದಣಿಯು ರದ್ದುಗೊಂಡಿರದ ಎಲ್ಲ ಸಹಕಾರಿ ಸೊಸೈಟಿಗಳಿಗೆ; ಮತ್ತು

ಬಿ) ಎಲ್ಲಾ ಬಹು-ರಾಜ್ಯ ಸಹಕಾರಿ ಸೊಸೈಟಿಗಳಿಗೆ

- ಅನ್ವಯವಾಗತಕ್ಕದ್ದು.

**3. ಪರಿಭಾಷೆಗಳು.- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-**

(ಎ) "ಕಾರ್ಯಾಚರಣೆಯ ಪ್ರದೇಶ" ಎಂದರೆ ಯಾವ ಪ್ರದೇಶದಿಂದ ವ್ಯಕ್ತಿಗಳನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಲಾಗಿದೆಯೋ ಆ ಪ್ರದೇಶ ಎಂದು ಅರ್ಥ;

(ಬಿ) "ಮಂಡಳಿ" ಎಂದರೆ ಸೊಸೈಟಿಯ ವ್ಯವಹಾರಗಳ ವ್ಯವಸ್ಥಾಪನೆಯ ನಿರ್ದೇಶನವನ್ನು ಮತ್ತು ನಿಯಂತ್ರಣವನ್ನು ವಹಿಸಿಕೊಡಲಾಗಿರುವ ಯಾವುದೇ ಹೆಸರಿನಿಂದ ಕರೆಯಲಾಗುವ, ಬಹು-ರಾಜ್ಯ ಸಹಕಾರಿ ಸೊಸೈಟಿಗಳ ನಿರ್ದೇಶಕರ ಮಂಡಳಿ ಅಥವಾ ಆಡಳಿತ ಮಂಡಳಿ ಎಂದು ಅರ್ಥ;

(ಸಿ) "ಉಪವಿಧಿಗಳು" ಎಂದರೆ ಈ ಅಧಿನಿಯಮದ ಮೇರೆಗೆ ಯುಕ್ತವಾಗಿ ನೋಂದಾಯಿಸಲಾಗಿರುವ ಅಥವಾ ನೋಂದಾಯಿಸಲಾಗಿದೆ ಎಂದು ಭಾವಿಸಲಾದ ತತ್ಕಾಲದಲ್ಲಿ ಜಾರಿಯಲ್ಲಿರುವ ಉಪವಿಧಿಗಳು ಎಂದು ಅರ್ಥ ಮತ್ತು ಅವುಗಳಿಗೆ ಮಾಡಿದ ಯಾವ ತಿದ್ದುಪಡಿಗಳನ್ನು ಈ ಅಧಿನಿಯಮದ ಮೇರೆಗೆ ಯುಕ್ತವಾಗಿ ನೋಂದಾಯಿಸಲಾಗಿದೆಯೋ ಅಥವಾ ನೋಂದಾಯಿಸಲಾಗಿದೆ ಎಂದು ಭಾವಿಸಲಾಗಿದೆಯೋ ಆ ತಿದ್ದುಪಡಿಗಳನ್ನು ಅವು ಒಳಗೊಳ್ಳುತ್ತವೆ.

(ಡಿ) "ಕೇಂದ್ರ ರಿಜಿಸ್ಟ್ರಾರ್" ಎಂದರೆ 4ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಸಹಕಾರಿ ಸೊಸೈಟಿಗಳ ಕೇಂದ್ರ ರಿಜಿಸ್ಟ್ರಾರ್ ಎಂದು ಅರ್ಥ ಮತ್ತು ಅದು ಆ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಕೇಂದ್ರ ರಿಜಿಸ್ಟ್ರಾರ್‌ನ ಅಧಿಕಾರಗಳನ್ನು ಚಲಾಯಿಸಲು ಅಧಿಕಾರ ಪಡೆದ ಯಾರೇ ಅಧಿಕಾರಿಯನ್ನು ಒಳಗೊಳ್ಳುತ್ತದೆ;

(ಇ) "ಮುಖ್ಯ ಕಾರ್ಯನಿರ್ವಾಹಕ" ಎಂದರೆ 51ನೇ ಪ್ರಕರಣದ ಮೇರೆಗೆ ನೇಮಕಗೊಂಡ, ಬಹು-ರಾಜ್ಯ ಸಹಕಾರಿ ಸೊಸೈಟಿಯ ಒಬ್ಬ ಮುಖ್ಯ ಕಾರ್ಯನಿರ್ವಾಹಕ ಎಂದು ಅರ್ಥ;

(ಎಫ್) "ಸಹಕಾರಿ ಬ್ಯಾಂಕ್" ಎಂದರೆ ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸುವ ಬಹು-ರಾಜ್ಯ ಸಹಕಾರಿ ಸೊಸೈಟಿ ಎಂದು ಅರ್ಥ;

(ಜಿ) "ಸಹಕಾರಿ ತತ್ವಗಳು" ಎಂದರೆ ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಸಹಕಾರಿ ತತ್ವಗಳು ಎಂದು ಅರ್ಥ;

(ಎಚ್) "ಸಹಕಾರಿ ಸೊಸೈಟಿ" ಎಂದರೆ ಯಾವುದೇ ರಾಜ್ಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಸಹಕಾರಿ ಸೊಸೈಟಿಗಳಿಗೆ ಸಂಬಂಧಿಸಿದ ಯಾವುದೇ ಕಾನೂನಿನ ಮೇರೆಗೆ ನೋಂದಾಯಿತವಾದ ಅಥವಾ ನೋಂದಾಯಿತವಾಗಿದೆ ಎಂದು ಭಾವಿಸಲಾದ ಸೊಸೈಟಿ ಎಂದು ಅರ್ಥ;

(ಐ) ಯಾವುದೇ ಬಹು-ರಾಜ್ಯ ಸಹಕಾರಿ ಸೊಸೈಟಿಯ ಅಥವಾ ಅಂಥ ಸೊಸೈಟಿಗಳ ವರ್ಗದ ಸಂಬಂಧದಲ್ಲಿ "ಸಹಕಾರಿ ವರ್ಷ" ಎಂದರೆ ಒಂದು ವರ್ಷದ ಮಾರ್ಚ್ 31ನೇ ದಿನಾಂಕದಂದು ಕೊನೆಗೊಳ್ಳುವ ವರ್ಷ ಮತ್ತು ಅಂಥ ಸೊಸೈಟಿಯ ಅಥವಾ ಅಂಥ ಸೊಸೈಟಿಗಳ ವರ್ಗದ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಕೇಂದ್ರ ರಿಜಿಸ್ಟ್ರಾರ್‌ನ ಪೂರ್ವ ಮಂಜೂರಾತಿಪಡೆದು ಆ ದಿವಸದಂದು ಕೊನೆಗೊಳ್ಳುವ ವರ್ಷದ ಯಾವುದೇ ಇತರ ದಿನದಂದು ಜಮಾ-ಖರ್ಚು ಪಟ್ಟಿ ತಯಾರಿಸಿದ ದಿನ ಎಂದು ಅರ್ಥ;

(ಜೆ) "ಠೇವಣಿ ವಿಮಾ ನಿಗಮ" ಎಂದರೆ ಠೇವಣಿ ವಿಮಾ ನಿಗಮ ಅಧಿನಿಯಮ, 1961ರ (1961ರ 47) 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಠೇವಣಿ ವಿಮಾ ಮತ್ತು ಸಾಲ ಖಾತರಿ ನಿಗಮ ಎಂದು ಅರ್ಥ;

(ಕೆ) "ಸಹಕಾರಿ ಮಹಾಮಂಡಳ" ಎಂದರೆ ಈ ಅಧಿನಿಯಮದ ಮೇರೆಗೆ ನೋಂದಾಯಿತವಾದ ಮತ್ತು ಸಹಕಾರಿ ಸೊಸೈಟಿಗೆ ಅಥವಾ ಬಹು-ರಾಜ್ಯ ಸಹಕಾರಿ ಸೊಸೈಟಿಗೆ ಮಾತ್ರ ಸದಸ್ಯತ್ವವು ಲಭ್ಯವಿರುವ ಸಹಕಾರಿ ಸೊಸೈಟಿಗಳ ಮಹಾಮಂಡಳಿ ಎಂದು ಅರ್ಥ;

(ಎಲ್) ಬಹು-ರಾಜ್ಯ ಸಹಕಾರಿ ಸೊಸೈಟಿಯ ಸಂಬಂಧದಲ್ಲಿ "ಸರ್ವ ಸದಸ್ಯರು" ಎಂದರೆ ಆ ಸೊಸೈಟಿಯ ಎಲ್ಲಾ ಸದಸ್ಯರು ಎಂದು ಅರ್ಥ ಮತ್ತು ರಾಷ್ಟ್ರೀಯ ಸಹಕಾರಿ ಸೊಸೈಟಿಯ ಅಥವಾ ಸಹಕಾರಿ ಮಹಾ ಮಂಡಳಿಯ ಸಂಬಂಧದಲ್ಲಿ "ಸರ್ವ ಸದಸ್ಯರು" ಎಂದರೆ ಸದಸ್ಯ ಸಹಕಾರಿ ಸೊಸೈಟಿಗಳ ಎಲ್ಲಾ ಪ್ರತಿನಿಧಿಗಳು ಅಥವಾ ಬಹು-ರಾಜ್ಯ ಸಹಕಾರಿ ಸೊಸೈಟಿಗಳ ಪ್ರತಿನಿಧಿಗಳು ಎಂದು ಅರ್ಥ ಮತ್ತು 38ನೇ ಪ್ರಕರಣದ (1)ನೇ ಉಪಪ್ರಕರಣದ ಮೊದಲನೇ ಪರಂತುಕದ ಮೇರೆಗೆ ರಚಿಸಲಾದ ನಿಕಾಯವನ್ನು ಅದು ಒಳಗೊಳ್ಳುತ್ತದೆ;

(ಎಂ) "ಸಾಮಾನ್ಯ ಸಭೆ" ಎಂದರೆ ಬಹು-ರಾಜ್ಯ ಸಹಕಾರಿ ಸೊಸೈಟಿಯ ಸರ್ವ ಸದಸ್ಯರ ಸಭೆ ಎಂದು ಅರ್ಥ ಮತ್ತು ಅದು ವಿಶೇಷ ಸಾಮಾನ್ಯ ಸಭೆಯನ್ನು ಒಳಗೊಳ್ಳುತ್ತದೆ;

(ಎನ್) "ಸದಸ್ಯ" ಎಂದರೆ ಬಹು-ರಾಜ್ಯ ಸಹಕಾರಿ ಸೊಸೈಟಿಯ ನೋಂದಣಿಗಾಗಿ ಸಲ್ಲಿಸಿದ ಅರ್ಜಿಯಲ್ಲಿ ಸೇರಿದ ಸದಸ್ಯ ಎಂದು ಅರ್ಥ ಮತ್ತು ಅಂಥ ನೋಂದಣಿಯ ನಂತರ ಈ ಅಧಿನಿಯಮ, ನಿಯಮಗಳು ಮತ್ತು ಉಪ ವಿಧಿಗಳ ಉಪಬಂಧಗಳಿಗನುಸಾರವಾಗಿ ಸದಸ್ಯತ್ವಕ್ಕೆ ಅಂಗೀಕರಿಸಲಾದ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(ಓ) "ಸದಸ್ಯ ಸಹಕಾರಿ ಸೊಸೈಟಿ" ಎಂದರೆ ಸಹಕಾರಿ ಮಹಾಮಂಡಳದ ಸದಸ್ಯರಾಗಿರುವಂಥ ಸಹಕಾರಿ ಸೊಸೈಟಿ ಅಥವಾ ಬಹು-ರಾಜ್ಯ ಸಹಕಾರಿ ಸೊಸೈಟಿ ಎಂದು ಅರ್ಥ;

(ಪಿ) "ಬಹು-ರಾಜ್ಯ ಸಹಕಾರಿ ಸೊಸೈಟಿ" ಎಂದರೆ ಈ ಅಧಿನಿಯಮದ ಮೇರೆಗೆ ನೋಂದಾಯಿತವಾದ ಅಥವಾ ನೋಂದಾಯಿತವಾಗಿದೆ ಎಂದು ಭಾವಿಸಲಾದ ಸೊಸೈಟಿ ಎಂದು ಅರ್ಥ ಮತ್ತು ಅದು ರಾಷ್ಟ್ರೀಯ ಸಹಕಾರಿ ಸೊಸೈಟಿಯನ್ನು ಮತ್ತು ಸಹಕಾರಿ ಮಹಾ ಮಂಡಳವನ್ನು ಒಳಗೊಳ್ಳುತ್ತದೆ;

(ಕ್ಯೂ) "ಸೀಮಿತ ಹೊಣೆಗಾರಿಕೆಯುಳ್ಳ ಬಹು-ರಾಜ್ಯ ಸಹಕಾರಿ ಸೊಸೈಟಿ" ಎಂದರೆ ಅನುಕ್ರಮವಾಗಿ ಸದಸ್ಯರು ಹೊಂದಿದ ಷೇರುಗಳ ಮೇಲೆ ಸಂದಾಯ ಮಾಡದಿರುವ ಮೊಬಲಗು ಯಾವುದಾದರೂ ಇದ್ದಲ್ಲಿ, ಆ ಮೊಬಲಗಿಗೆ ಅಥವಾ ಸೊಸೈಟಿಯು ಸಮಾಪನಗೊಂಡ ಸಂದರ್ಭದಲ್ಲಿ ಅದರ ಆಸ್ತಿಗಳಿಗೆ ಅನುಕ್ರಮವಾಗಿ ಆ ಮೂಲಕ ವಂತಿಗೆ ನೀಡಬೇಕಾದಂಥ ಮೊಬಲಗಿಗೆ ಅದರ ಉಪವಿಧಿಗಳ ಮೂಲಕ ಸೀಮಿಗೊಳಿಸಿದ ಅದರ ಸದಸ್ಯರ ಬಾಧ್ಯತೆಯನ್ನು ಹೊಂದಿರುವ ಸೊಸೈಟಿ ಎಂದು ಅರ್ಥ;

(ಆರ್) “ರಾಷ್ಟ್ರೀಯ ಸಹಕಾರಿ ಸೊಸೈಟಿ” ಎಂದರೆ ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಬಹು-ರಾಜ್ಯ ಸಹಕಾರಿ ಸೊಸೈಟಿ ಎಂದು ಅರ್ಥ;

(ಎಸ್) ಅಧಿಸೂಚನೆ ಎಂದರೆ ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ ಎಂದು ಅರ್ಥ;

(ಟಿ) “ಅಧಿಕಾರಿ” ಎಂದರೆ ಅಧ್ಯಕ್ಷ, ಉಪಾಧ್ಯಕ್ಷ, ಚೇರ್‌ಪರ್ಸನ್, ವೈಸ್ ಚೇರ್‌ಪರ್ಸನ್, ವ್ಯವಸ್ಥಾಪಕ ನಿರ್ದೇಶಕ, ಕಾರ್ಯದರ್ಶಿ, ವ್ಯವಸ್ಥಾಪಕ ಮಂಡಳಿಯ ಸದಸ್ಯ, ಖಜಾಂಚಿ, ಸಮಾಪಕ, 123ನೇ ಪ್ರಕರಣದ ಮೇರೆಗೆ ನೇಮಕಗೊಂಡ ಆಡಳಿತಗಾರ ಎಂದು ಅರ್ಥ ಮತ್ತು ಅದು ಈ ಅಧಿನಿಯಮದ ಅಥವಾ ನಿಯಮಗಳ ಅಥವಾ ಉಪ ವಿಧಿಗಳ ಮೇರೆಗೆ ಬಹು-ರಾಜ್ಯ ಸಹಕಾರಿ ಸೊಸೈಟಿಯ ವ್ಯವಹಾರಕ್ಕೆ ಸಂಬಂಧಿಸಿದಂತೆ ನಿರ್ದೇಶನಗಳನ್ನು ನೀಡಲು ಅಧಿಕಾರವನ್ನು ಹೊಂದಿರುವ ಯಾರೇ ಇತರ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(ಯು) “ನಿಯಮಿಸಿದ” ಎಂದರೆ ಈ ನಿಯಮಗಳ ಮೇರೆಗೆ ನಿಯಮಿಸಲಾದುದು ಎಂದು ಅರ್ಥ;

(ವಿ) “ರಿಸರ್ವ್ ಬ್ಯಾಂಕ್” ಎಂದರೆ ಭಾರತದ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934ರ 2)ರ ಮೇರೆಗೆ ಸ್ಥಾಪಿತವಾದ ಭಾರತದ ರಿಸರ್ವ್ ಬ್ಯಾಂಕ್ ಎಂದು ಅರ್ಥ;

(ಡಬ್ಲ್ಯು) ‘ನಿಯಮಗಳು’ ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳು ಎಂದು ಅರ್ಥ;

## ಅಧ್ಯಾಯ - II

### ಕೇಂದ್ರ ರಿಜಿಸ್ಟ್ರಾರರು ಮತ್ತು ಬಹು-ರಾಜ್ಯ ಸಹಕಾರಿ ಸೊಸೈಟಿಗಳ ನೋಂದಣಿ.

**4. ಕೇಂದ್ರ ರಿಜಿಸ್ಟ್ರಾರ್.-** (1) ಕೇಂದ್ರ ಸರ್ಕಾರವು ಒಬ್ಬ ವ್ಯಕ್ತಿಯನ್ನು ಸಹಕಾರಿ ಸೊಸೈಟಿಗಳ ಕೇಂದ್ರ ರಿಜಿಸ್ಟ್ರಾರನನ್ನಾಗಿ ನೇಮಕ ಮಾಡಬಹುದು ಮತ್ತು ಕೇಂದ್ರ ರಿಜಿಸ್ಟ್ರಾರನಿಗೆ ಸಹಾಯ ನೀಡುವುದಕ್ಕಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ಇತರ ವ್ಯಕ್ತಿಗಳನ್ನು ನೇಮಕ ಮಾಡಬಹುದು.

(2) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಈ ಅಧಿನಿಯಮದ ಮೇರೆಗೆ ಕೇಂದ್ರ ರಿಜಿಸ್ಟ್ರಾರನು (ಬಹು-ರಾಜ್ಯ ಸಹಕಾರಿ ಸೊಸೈಟಿಯನ್ನು ನೋಂದಾಯಿಸುವ ಅಧಿಕಾರವನ್ನು ಹೊರತುಪಡಿಸಿ) ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು ಮತ್ತು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ವಿಷಯಗಳ ಸಂಬಂಧದಲ್ಲಿ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಕೇಂದ್ರ ಸರ್ಕಾರವು ಅಧಿಕೃತಗೊಳಿಸಬಹುದಾದಂಥ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಯಾರೇ ಇತರ ಅಧಿಕಾರಿಯು ಸಹ ಚಲಾಯಿಸಬಹುದಾದುದು ಆಗಿರತಕ್ಕದ್ದು ಎಂದು ನಿರ್ದೇಶಿಸಬಹುದು:

ಪರಂತು, ರಾಷ್ಟ್ರೀಯ ಸಹಕಾರಿ ಸೊಸೈಟಿಯ ಸಂಬಂಧದಲ್ಲಿ ರಾಜ್ಯ ಸರ್ಕಾರದ ಅಧಿಕಾರಿಗೆ ಅಂಥ ಅಧಿಕಾರವನ್ನು ಚಲಾಯಿಸುವುದಕ್ಕೆ ಅಧಿಕಾರ ನೀಡತಕ್ಕದ್ದಲ್ಲ.

**5. ನೋಂದಾಯಿಸಬಹುದಾದಂಥ ಬಹು-ರಾಜ್ಯ ಸಹಕಾರಿ ಸೊಸೈಟಿಗಳು.-** (1) ಯಾವುದೇ ಬಹು-ರಾಜ್ಯ ಸಹಕಾರಿ ಸೊಸೈಟಿಯನ್ನು,-

(ಎ) ಒಂದಕ್ಕಿಂತ ಹೆಚ್ಚು ರಾಜ್ಯಗಳಲ್ಲಿನ ಸದಸ್ಯರ ಹಿತಾಸಕ್ತಿಗಳನ್ನು ಕಾಪಾಡುವುದು ಅದರ ಮುಖ್ಯ ಉದ್ದೇಶವಾಗಿದ್ದ ಹೊರತು; ಮತ್ತು

(ಬಿ) ಸಹಕಾರಿ ತತ್ವಗಳಿಗೆ ಅನುಸಾರವಾಗಿ ಸ್ವಸಹಾಯದ ಮತ್ತು ಪರಸ್ಪರ ನೆರವಿನ ಮೂಲಕ ತನ್ನ ಸದಸ್ಯರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಅದರ ಉಪವಿಧಿಗಳು ಉಪಬಂಧ ಕಲ್ಪಿಸಿರುವ ಹೊರತು

– ಈ ಅಧಿನಿಯಮದ ಮೇರೆಗೆ ನೋಂದಣಿ ಮಾಡತಕ್ಕದ್ದಲ್ಲ.

(2) ಯಾವುದೇ ಭಾರತೀಯ ಭಾಷೆಯಲ್ಲಿ "ನಿಯಮಿತ" ಪದ ಅಥವಾ ಅದರ ಸಮನಾರ್ಥಕ ಪದವನ್ನು ಈ ಅಧಿನಿಯಮದ ಮೇರೆಗೆ ನೋಂದಾಯಿತವಾದ ಪ್ರತಿಯೊಂದು ಬಹು-ರಾಜ್ಯ ಸಹಕಾರಿ ಸೊಸೈಟಿಯ ಹೆಸರಿನ ನಂತರ ಸೀಮಿತ ಬಾಧ್ಯತೆಯೊಂದಿಗೆ ಸೇರಿಸತಕ್ಕದ್ದು.

**6. ನೋಂದಣಿಗಾಗಿ ಅರ್ಜಿ.–** (1) ಈ ಅಧಿನಿಯಮದ ಮೇರೆಗೆ ಬಹು-ರಾಜ್ಯ ಸಹಕಾರಿ ಸೊಸೈಟಿಯನ್ನು ನೋಂದಣಿ ಮಾಡುವ ಉದ್ದೇಶಗಳಿಗಾಗಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ವಿವರಗಳೊಂದಿಗೆ ಕೇಂದ್ರ ರಿಜಿಸ್ಟ್ರಾರನಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) ಅರ್ಜಿಗೆ,–

(ಎ) ಎಲ್ಲ ಸದಸ್ಯರು ವ್ಯಕ್ತಿಗಳಾಗಿರುವ ಒಂದು ಬಹು-ರಾಜ್ಯ ಸಹಕಾರಿ ಸೊಸೈಟಿಯ ಸಂದರ್ಭದಲ್ಲಿ, ಸಂಬಂಧಪಟ್ಟ ಪ್ರತಿಯೊಂದು ರಾಜ್ಯದಿಂದ ಕೊನೆಯ ಪಕ್ಷ ಐವತ್ತು ವ್ಯಕ್ತಿಗಳು ಸಹಿ ಮಾಡತಕ್ಕದ್ದು;

(ಬಿ) ಸದಸ್ಯರು ಸಹಕಾರಿ ಸೊಸೈಟಿಗಳಾಗಿರುವ ಒಂದು ಬಹುರಾಜ್ಯ ಸಹಕಾರಿ ಸೊಸೈಟಿಯ ಸಂದರ್ಭದಲ್ಲಿ, ಅದೇ ರಾಜ್ಯದಲ್ಲಿ ನೋಂದಣಿಯಾಗದಿರುವ ಕೊನೆಯ ಪಕ್ಷ ಅಂಥ ಐದು ಸಹಕಾರಿ ಸೊಸೈಟಿಗಳ ಪರವಾಗಿ ಯುಕ್ತವಾಗಿ ಅಧಿಕೃತಗೊಂಡ ಪ್ರತಿನಿಧಿಗಳು ಸಹಿ ಮಾಡತಕ್ಕದ್ದು; ಮತ್ತು

(ಸಿ) ಯಾವ ಬಹು-ರಾಜ್ಯ ಸಹಕಾರಿ ಸೊಸೈಟಿಗೆ ಇನ್ನೊಂದು ಬಹು-ರಾಜ್ಯ ಸಹಕಾರಿ ಸೊಸೈಟಿಯು ಮತ್ತು ಇತರ ಸಹಕಾರಿ ಸೊಸೈಟಿಗಳು ಸದಸ್ಯರಾಗಿರುವವೋ ಆ ಬಹು-ರಾಜ್ಯ ಸಹಕಾರಿ ಸೊಸೈಟಿಯ ಸಂದರ್ಭದಲ್ಲಿ ಅಂಥ ಪ್ರತಿಯೊಂದು ಸಹಕಾರಿ ಸೊಸೈಟಿಯಿಂದ ಯುಕ್ತವಾಗಿ ಅಧಿಕೃತಗೊಂಡ ಪ್ರತಿನಿಧಿಗಳು ಸಹಿ ಮಾಡತಕ್ಕದ್ದು:

ಪರಂತು, ಈ ಖಂಡದಲ್ಲಿ ಉಲ್ಲೇಖಿಸಿದ ಸಹಕಾರಿ ಸೊಸೈಟಿಗಳ ಪೈಕಿ ಎರಡಕ್ಕಿಂತ ಕಡಿಮೆಯಲ್ಲದಷ್ಟು ಸಹಕಾರಿ ಸೊಸೈಟಿಗಳು ಅದೇ ರಾಜ್ಯದಲ್ಲಿ ಹಾಗೆಂದು ನೋಂದಣಿಯಾಗಿರದ ಸಹಕಾರಿ ಸೊಸೈಟಿಗಳು ಆಗಿರತಕ್ಕದ್ದು.

(ಡಿ) ಯಾವ ಬಹು-ರಾಜ್ಯ ಸಹಕಾರಿ ಸೊಸೈಟಿಗೆ ಸಹಕಾರಿ ಸೊಸೈಟಿಗಳು ಅಥವಾ ಬಹು-ರಾಜ್ಯ ಸಹಕಾರಿ ಸೊಸೈಟಿಗಳು ಮತ್ತು ವ್ಯಕ್ತಿಗಳು ಸದಸ್ಯರಾಗಿರುವರೋ ಆ ಬಹುರಾಜ್ಯ ಸಹಕಾರಿ ಸೊಸೈಟಿಯ ಸಂದರ್ಭದಲ್ಲಿ,–

(i) ಪ್ರತಿ ಎರಡು ಅಥವಾ ಹೆಚ್ಚು ರಾಜ್ಯಗಳಿಂದ ಕೊನೇಪಕ್ಷ ಐವತ್ತು ಸದಸ್ಯ ವ್ಯಕ್ತಿಗಳು ಸಹಿ ಮಾಡತಕ್ಕದ್ದು; ಮತ್ತು

(ii) ಪ್ರತಿ ಎರಡು ಅಥವಾ ಹೆಚ್ಚು ರಾಜ್ಯಗಳಿಂದ ಕೊನೇಪಕ್ಷ ಒಂದು ಸಹಕಾರಿ ಸೊಸೈಟಿಯು ಅಥವಾ ಒಂದು ಬಹು-ರಾಜ್ಯ ಸಹಕಾರಿ ಸೊಸೈಟಿಯು ಸಹಿ ಮಾಡತಕ್ಕದ್ದು.

(3) ಬಹು-ರಾಜ್ಯ ಸಹಕಾರಿ ಸೊಸೈಟಿಯ ಉದ್ದೇಶಿತ ಉಪವಿಧಿಯ ನಾಲ್ಕು ಪ್ರತಿಗಳನ್ನು ಅರ್ಜಿಯೊಂದಿಗೆ ಇರಿಸತಕ್ಕದ್ದು ಮತ್ತು ಅಂಥ ಅರ್ಜಿಗಳನ್ನು ಯಾರು ಸಲ್ಲಿಸಿದ್ದಾರೆಯೋ ಅಥವಾ ಯಾರ ಪರವಾಗಿ ಸಲ್ಲಿಸಲಾಗಿದೆಯೋ ಆ ವ್ಯಕ್ತಿಗಳು, ಸೊಸೈಟಿಗೆ ಸಂಬಂಧಿಸಿದಂತೆ ಕೇಂದ್ರ ರಿಜಿಸ್ಟ್ರಾರನು ಅಗತ್ಯಪಡಿಸಬಹುದಾದಂಥ ಮಾಹಿತಿಯನ್ನು ಒದಗಿಸತಕ್ಕದ್ದು.

7. **ನೋಂದಣಿ.-** (1) ಕೇಂದ್ರ ರಿಜಿಸ್ಟ್ರಾರನಿಗೆ,-

(ಎ) ಅರ್ಜಿಯಲ್ಲಿ ಈ ಅಧಿನಿಯಮದ ಮತ್ತು ನಿಯಮಗಳ ಉಪಬಂಧಗಳನ್ನು ಪಾಲಿಸಲಾಗಿದೆಯೆಂದು;

(ಬಿ) ಉದ್ದೇಶಿತ ಬಹು-ರಾಜ್ಯ ಸಹಕಾರಿ ಸೊಸೈಟಿಯು ಒಂದು ರಾಜ್ಯಕ್ಕಿಂತ ಹೆಚ್ಚು ರಾಜ್ಯಗಳಲ್ಲಿನ ಸದಸ್ಯರ ಹಿತಾಸಕ್ತಿಯನ್ನು ಕಾಪಾಡುವುದು ಅದರ ಉದ್ದೇಶವಾಗಿದೆಯೆಂಬ ಮೂಲ ಅಗತ್ಯತೆಗಳನ್ನು ಈಡೇರಿಸಿದೆಯೆಂದು;

(ಸಿ) ಸಹಕಾರಿ ತತ್ತ್ವಗಳ ಅನುಸಾರವಾಗಿ ಸ್ವಸಹಾಯದ ಮತ್ತು ಪರಸ್ಪರ ನೆರವಿನ ಮೂಲಕ ಅದರ ಸದಸ್ಯರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಅದರ ಉಪ ವಿಧಿಗಳು ಉಪಬಂಧ ಕಲ್ಪಿಸುತ್ತವೆಯೆಂದು;

(ಡಿ) ಉದ್ದೇಶಿತ ಉಪ-ವಿಧಿಗಳು ಈ ಅಧಿನಿಯಮದ ಮತ್ತು ನಿಯಮಗಳ ಉಪಬಂಧಗಳಿಗೆ ವಿರುದ್ಧವಾಗಿಲ್ಲವೆಂದು

- ಮನದಟ್ಟಾದರೆ, ಅವನು ಬಹು-ರಾಜ್ಯ ಸಹಕಾರಿ ಸೊಸೈಟಿಯನ್ನು ಮತ್ತು ಅದರ ಉಪವಿಧಿಗಳನ್ನು ನೋಂದಣಿ ಮಾಡಬಹುದು.

(2) ಕೇಂದ್ರ ರಿಜಿಸ್ಟ್ರಾರನು ನೋಂದಣಿಗಾಗಿ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ನಾಲ್ಕು ತಿಂಗಳುಗಳ ಅವಧಿಯೊಳಗಾಗಿ ಅವನು ಅದನ್ನು ವಿಲೆ ಮಾಡತಕ್ಕದ್ದು.

(3) ಕೇಂದ್ರ ರಿಜಿಸ್ಟ್ರಾರನು ಬಹು-ರಾಜ್ಯ ಸಹಕಾರಿ ಸೊಸೈಟಿಯನ್ನು ನೋಂದಣಿ ಮಾಡಲು ನಿರಾಕರಿಸಿದರೆ ನೋಂದಣಿಗಾಗಿ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ನಾಲ್ಕು ತಿಂಗಳ ಅವಧಿಯೊಳಗಾಗಿ, ಸಂದರ್ಭಾನುಸಾರ, ಅರ್ಜಿದಾರನಿಗೆ ಅಥವಾ ಅರ್ಜಿದಾರರಿಗೆ ನಿರಾಕರಿಸಿದ ಆದೇಶವನ್ನು ಕಾರಣಗಳ ಸಹಿತ ತಿಳಿಸತಕ್ಕದ್ದು:

ಪರಂತು, ಅರ್ಜಿದಾರರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ಹೊರತು ನಿರಾಕರಣೆಯ ಆದೇಶವನ್ನು ಮಾಡತಕ್ಕದ್ದಲ್ಲ:

ಮತ್ತೂ ಪರಂತು, ನೋಂದಣಿಗಾಗಿ ಬಂದ ಅರ್ಜಿಯನ್ನು (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ನಾಲ್ಕು ತಿಂಗಳ ಅವಧಿಯೊಳಗಾಗಿ ವಿಲೇ ಮಾಡದಿದ್ದರೆ ಅಥವಾ ಕೇಂದ್ರ ರಿಜಿಸ್ಟ್ರಾರನು ಆ ಅವಧಿಯೊಳಗಾಗಿ ನಿರಾಕರಣೆಯ ಆದೇಶವನ್ನು ತಿಳಿಸಲು ವಿಫಲನಾದರೆ, ಅರ್ಜಿಯನ್ನು ನೋಂದಣಿಗಾಗಿ ಅಂಗೀಕರಿಸಲಾಗಿದೆ ಎಂಬುದಾಗಿ ಭಾವಿಸತಕ್ಕದ್ದು ಮತ್ತು ಕೇಂದ್ರ ರಿಜಿಸ್ಟ್ರಾರನು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳ ಅನುಸಾರವಾಗಿ ನೋಂದಣಿ ಪ್ರಮಾಣ ಪತ್ರವನ್ನು ನೀಡತಕ್ಕದ್ದು.

**8. ನೋಂದಣಿ ಪ್ರಮಾಣ ಪತ್ರ.–** ಬಹು–ರಾಜ್ಯ ಸಹಕಾರಿ ಸೊಸೈಟಿಯನ್ನು ಈ ಅಧಿನಿಯಮದ ಮೇರೆಗೆ ನೋಂದಣಿ ಮಾಡಲಾಗಿದ್ದರೆ, ಕೇಂದ್ರ ರಿಜಿಸ್ಟ್ರಾರನು, ತಾನು ಸಹಿ ಮಾಡಿದ ನೋಂದಣಿ ಪ್ರಮಾಣ ಪತ್ರವನ್ನು ನೀಡತಕ್ಕದ್ದು, ಸೊಸೈಟಿಯ ನೋಂದಣಿಯನ್ನು ರದ್ದುಮಾಡಲಾಗಿದೆ ಎಂದು ರುಜುವಾತುಪಡಿಸಿದ ಹೊರತು, ಅದರಲ್ಲಿ ನಮೂದಿಸಿದ ಸೊಸೈಟಿಯನ್ನು ಈ ಅಧಿನಿಯಮದ ಮೇರೆಗೆ ಯುಕ್ತವಾಗಿ ನೋಂದಣಿ ಮಾಡಲಾಗಿದೆ ಎಂಬುದಕ್ಕೆ ಅದು ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.

**9. ಬಹು–ರಾಜ್ಯ ಸಹಕಾರಿ ಸೊಸೈಟಿಯು ನಿಗಮಿತ ನಿಕಾಯವಾಗಿರತಕ್ಕದ್ದು.–** (1) ಬಹು–ರಾಜ್ಯ ಸಹಕಾರಿ ಸೊಸೈಟಿಯ ನೋಂದಣಿಯು, ಆ ಸೊಸೈಟಿಯನ್ನು ಯಾವ ಹೆಸರಿನಿಂದ ನೋಂದಾಯಿಸಲಾಗಿದೆಯೋ ಆ ಹೆಸರಿನಲ್ಲಿ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಮತ್ತು ಚರಾಸ್ತಿ ಮತ್ತು ಸ್ಥಿರಾಸ್ತಿಗಳೆರಡನ್ನೂ ಆರ್ಜಿಸುವ, ಧಾರಣ ಮಾಡುವ ಮತ್ತು ವಿಲೇ ಮಾಡುವ, ಕರಾರು ಮಾಡಿಕೊಳ್ಳುವ, ದಾವೆಗಳನ್ನು ಮತ್ತು ಇತರೆ ಕಾನೂನು ವ್ಯವಹರಣೆಗಳನ್ನು ಹೂಡುವ ಮತ್ತು ಅವುಗಳಲ್ಲಿ ಪ್ರತಿವಾದ ಮಂಡಿಸುವ ಮತ್ತು ಅದು ಯಾವ ಉದ್ದೇಶಕ್ಕಾಗಿ ರಚಿತವಾಗಿದೆಯೋ ಆ ಉದ್ದೇಶಗಳಿಗಾಗಿ ಅವಶ್ಯಕವಾದ ಎಲ್ಲಾ ಕಾರ್ಯಗಳನ್ನು ಮಾಡುವ ಅಧಿಕಾರವನ್ನು ಹೊಂದಿರುವ ನಿಗಮಿತ ನಿಕಾಯವನ್ನಾಗಿಸತಕ್ಕದ್ದು ಮತ್ತು ಅದು ಸದರಿ ಹೆಸರಿನಲ್ಲಿ ದಾವೆ ಹೂಡತಕ್ಕದ್ದು ಅಥವಾ ದಾವೆಗೆ ಗುರಿಯಾಗತಕ್ಕದ್ದು.

(2) ಬಹು–ರಾಜ್ಯ ಸಹಕಾರಿ ಸೊಸೈಟಿಯ ನೋಂದಣಿಗೆ ಮುಂಚಿತವಾಗಿ ಸದ್ಭಾವನೆಯಿಂದ ಮಾಡಿಕೊಂಡಿರುವ ಎಲ್ಲ ವ್ಯವಹಾರಗಳನ್ನು ನೋಂದಣಿಯ ಉದ್ದೇಶಗಳ ಮುಂದುವರಿಕೆಗಾಗಿ ನೋಂದಣಿಯ ನಂತರ ಮಾಡಿಕೊಂಡ ಅದರ ವ್ಯವಹಾರಗಳು ಎಂಬುದಾಗಿ ಭಾವಿಸತಕ್ಕದ್ದು.

**10. ಬಹು–ರಾಜ್ಯ ಸಹಕಾರಿ ಸೊಸೈಟಿಗಳ ಉಪ–ವಿಧಿಗಳು.–** (1) ಪ್ರತಿಯೊಂದು ಬಹು–ರಾಜ್ಯ ಸಹಕಾರಿ ಸೊಸೈಟಿಯೂ, ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಸುಸಂಗತವಾಗಿರುವಂತೆ ತನ್ನ ಉಪ–ವಿಧಿಗಳನ್ನು ರಚಿಸಬಹುದು.

(2) ವಿಶೇಷವಾಗಿ, ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ಉಪ–ವಿಧಿಗಳು ಈ ಮುಂದಿನ ಎಲ್ಲಾ ಅಥವಾ ಯಾವುವೇ ವಿಷಯಗಳಿಗಾಗಿ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) ಸೊಸೈಟಿಯ ಹೆಸರು, ವಿಳಾಸ ಮತ್ತು ಕಾರ್ಯಾಚರಣೆಯ ಪ್ರದೇಶ;

(ಬಿ) ಸೊಸೈಟಿಯ ಉದ್ದೇಶಗಳು;

(ಸಿ) ಅದರ ಸದಸ್ಯರಿಗೆ ಒದಗಿಸಬೇಕಾದ ಸೇವೆಗಳು;

(ಡಿ) ಸದಸ್ಯತ್ವ ಪಡೆಯುವುದಕ್ಕಾಗಿ ಅರ್ಹತೆ;

(ಇ) ಸದಸ್ಯತ್ವ ಪಡೆಯುವುದಕ್ಕಾಗಿ ಪ್ರಕ್ರಿಯೆ;

(ಎಫ್) ಸದಸ್ಯನಾಗಿ ಮುಂದುವರಿಯಲು ಷರತ್ತುಗಳು;

(ಜಿ) ಸದಸ್ಯತ್ವ ಹಿಂತೆಗೆದುಕೊಳ್ಳಲು ಪ್ರಕ್ರಿಯೆ;

(ಎಚ್) ಸದಸ್ಯತ್ವ ವರ್ಗಾವಣೆ;

(ಐ) ಸದಸ್ಯತ್ವದಿಂದ ತೆಗೆದುಹಾಕುವುದಕ್ಕಾಗಿ ಪ್ರಕ್ರಿಯೆ;

(ಜೆ) ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳು;

(ಕೆ) ಸೊಸೈಟಿಯ ಬಂಡವಾಳದ ಸ್ವರೂಪ ಮತ್ತು ಮೊತ್ತ;

(ಎಲ್) ಒಬ್ಬ ಸದಸ್ಯನು ಬಂಡವಾಳಕ್ಕೆ ಯಾವ ರೀತಿಯಲ್ಲಿ ಗರಿಷ್ಠ ವಂತಿಗೆ ಸಲ್ಲಿಸಬಹುದೋ ಆ ರೀತಿ;

(ಎಂ) ಬಹು–ರಾಜ್ಯ ಸಹಕಾರಿ ಸೊಸೈಟಿಯ ನಿಧಿಗಳನ್ನು ಯಾವ ಮೂಲಗಳಿಂದ ಎತ್ತಬಹುದೋ ಆ ಮೂಲಗಳು;

(ಎನ್) ನಿಧಿಗಳನ್ನು ಯಾವ ಉದ್ದೇಶಕ್ಕಾಗಿ ವಿನಿಯೋಗಿಸಬಹುದೋ ಆ ಉದ್ದೇಶ;

(ಓ) ಬಹು–ರಾಜ್ಯ ಸಹಕಾರಿ ಸೊಸೈಟಿಯ ನಿವ್ವಳ ಲಾಭಗಳ ಹಂಚಿಕೆ ಮತ್ತು ವಿತರಣೆಯ ರೀತಿ;

(ಪಿ) ವಿವಿಧ ಮೀಸಲು ನಿಧಿಗಳ ರಚನೆ;

(ಕ್ಯೂ) ಈ ಅಧಿನಿಯಮದ ಮೇರೆಗೆ ಉಪಬಂಧಿಸಲಾಗಿರುವುದನ್ನು ಹೊರತುಪಡಿಸಿ ಸಾಮಾನ್ಯ ಸಭೆಗಳನ್ನು ನಡೆಸುವ ರೀತಿ ಮತ್ತು ಅದಕ್ಕೆ ಇರಬೇಕಾದ ಕೋರಂ;

(ಆರ್) ಸಾಮಾನ್ಯ ಮತ್ತು ಇತರ ಸಭೆಗಳಲ್ಲಿ ನೋಟೀಸು ನೀಡುವ ಪ್ರಕ್ರಿಯೆ ಮತ್ತು ಮತದಾನದ ರೀತಿ;

(ಎಸ್) ಉಪ–ವಿಧಿಗಳನ್ನು ತಿದ್ದುಪಡಿ ಮಾಡಲು ಪ್ರಕ್ರಿಯೆ;

(ಟಿ) ಮಂಡಳಿಯ ಸದಸ್ಯರ ಸಂಖ್ಯೆ ಇಪ್ಪತ್ತೊಂದನ್ನು ಮೀರದಿರುವುದು;

(ಯು) ಸೊಸೈಟಿಯ ನಿರ್ದೇಶಕರ, ಅಧ್ಯಕ್ಷರ ಮತ್ತು ಇತರ ಪದಾಧಿಕಾರಿಗಳ ಅವಧಿಯು ಐದು ವರ್ಷಗಳನ್ನು ಮೀರದಿರುವುದು;

(ವಿ) ಮಂಡಳಿಯ ಸದಸ್ಯರನ್ನು ತೆಗೆದುಹಾಕುವುದಕ್ಕಾಗಿ ಮತ್ತು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದಕ್ಕಾಗಿ ಪ್ರಕ್ರಿಯೆ;

(ಡಬ್ಲ್ಯು) ಮಂಡಳಿಯ ಸಭೆಗಳನ್ನು ನಡೆಸುವ ರೀತಿ, ಅದರ ಕೋರಂ, ಒಂದು ವರ್ಷದಲ್ಲಿ ನಡೆಸಬೇಕಾದ ಸಭೆಗಳ ಸಂಖ್ಯೆ ಮತ್ತು ಸಭೆಗಳನ್ನು ನಡೆಸುವ ಸ್ಥಳ;

(ಎಕ್ಸ್) ಮಂಡಳಿಯ ಸಭೆಗಳ ನಡುವಿನ ಅಂತರ;

(ವೈ) 52ನೇ ಪ್ರಕರಣದ ಮೇರೆಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ನೀಡಿರುವ ಅಧಿಕಾರಗಳು ಮತ್ತು ಪ್ರಕಾರ್ಯಗಳ ಜೊತೆಗೆ ಹೆಚ್ಚಿನ ಅಧಿಕಾರಗಳು ಮತ್ತು ಪ್ರಕಾರ್ಯಗಳು;

(ಝಡ್) ದಂಡನೆಯನ್ನು ವಿಧಿಸುವ ರೀತಿ;

(ಝಡ್ಎ) ಲೆಕ್ಕಪರಿಶೋಧಕರ ನೇಮಕ, ಹಕ್ಕುಗಳು ಮತ್ತು ಕರ್ತವ್ಯಗಳು ಮತ್ತು ಲೆಕ್ಕಪರಿಶೋಧನೆ ನಡೆಸುವ ಪ್ರಕ್ರಿಯೆ;

(ಝಡ್ಬಿ) ಸೊಸೈಟಿಯ ಪರವಾಗಿ ದಸ್ತಾವೇಜುಗಳಿಗೆ ಸಹಿ ಮಾಡಲು ಮತ್ತು ದಾವೆಯನ್ನು ಮತ್ತು ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಮತ್ತು ಸಮರ್ಥಿಸಿಕೊಳ್ಳಲು ಅಧಿಕಾರಿಗಳಿಗೆ ಅಧಿಕಾರ ನೀಡುವುದು;

(ಝಡ್ಸಿ) ಬಹು-ರಾಜ್ಯ ಸಹಕಾರಿ ಸೊಸೈಟಿಯು, ಸೊಸೈಟಿಯ ಸದಸ್ಯರಲ್ಲದ ವ್ಯಕ್ತಿಗಳೊಂದಿಗೆ ಯಾವ ನಿಬಂಧನೆಗಳ ಮೇಲೆ ವ್ಯವಹರಿಸಬಹುದೋ ಆ ನಿಬಂಧನೆಗಳು;

(ಝಡ್ಡಿ) ಬಹು-ರಾಜ್ಯ ಸಹಕಾರಿ ಸೊಸೈಟಿಯು ಇತರ ಸಹಕಾರಿ ಸೊಸೈಟಿಗಳೊಂದಿಗೆ ಯಾವ ನಿಬಂಧನೆಗಳ ಮೇಲೆ ಸೇರಿಕೊಳ್ಳಬಹುದೋ ಆ ನಿಬಂಧನೆಗಳು;

(ಝಡ್ಇ) ಬಹು-ರಾಜ್ಯ ಸಹಕಾರಿ ಸೊಸೈಟಿಯು ಸಹಕಾರಿ ಸೊಸೈಟಿಗಳಲ್ಲದ ಇತರ ಸಂಸ್ಥೆಗಳೊಂದಿಗೆ ಯಾವ ನಿಬಂಧನೆಗಳ ಮೇಲೆ ವ್ಯವಹರಿಸಬಹುದೋ ಆ ನಿಬಂಧನೆಗಳು;

(ಝಡ್ಎಫ್) ಬಹು-ರಾಜ್ಯ ಸಹಕಾರಿ ಸೊಸೈಟಿಯು ಯಾವುದೇ ಇತರ ಬಹು-ರಾಜ್ಯ ಸಹಕಾರಿ ಸೊಸೈಟಿಗೆ ಅಥವಾ ಸಹಕಾರಿ ಮಹಾ ಮಂಡಳಕ್ಕೆ ಪ್ರದಾನ ಮಾಡಬಹುದಾದ ಹಕ್ಕುಗಳು ಯಾವುವಾದರೂ ಇದ್ದರೆ ಆ ಹಕ್ಕುಗಳು ಮತ್ತು ಯಾವ ಸಂದರ್ಭಗಳ ಮೇರೆಗೆ ಸಹಕಾರಿ ಮಹಾ ಮಂಡಳವು ಅಂಥ ಹಕ್ಕುಗಳನ್ನು ಚಲಾಯಿಸಬಹುದೋ ಆ ಸಂದರ್ಭ;

(ಝಡ್ಜಿ) ಸದಸ್ಯನ ಮರಣದ ಸಂದರ್ಭದಲ್ಲಿ ನಾಮನಿರ್ದೇಶಿತನ ಹೆಸರಿಗೆ ಷೇರುಗಳನ್ನು ಮತ್ತು ಬಡ್ಡಿಯನ್ನು ವರ್ಗಾವಣೆ ಮಾಡಲು ಪ್ರಕ್ರಿಯೆ ಮತ್ತು ರೀತಿ;

(ಝಡ್ಹೆಚ್) ಬಹು-ರಾಜ್ಯ ಸಹಕಾರಿ ಸೊಸೈಟಿಯು ನಡೆಸಬೇಕಾದ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮಗಳು;

(ಝಡ್ಐ) ಬಹು-ರಾಜ್ಯ ಸಹಕಾರಿ ಸೊಸೈಟಿಯ ವ್ಯವಹಾರಗಳ ಪ್ರಧಾನ ಸ್ಥಳ ಮತ್ತು ಇತರ ಸ್ಥಳಗಳು;

(ಝಡ್ಜೆ) ಅದರ ಸದಸ್ಯರುಗಳು ಉಪಯೋಗಿಸಿಕೊಳ್ಳಬೇಕಾದ ಸೇವೆಗಳ ಕನಿಷ್ಠ ಮಟ್ಟ; ಮತ್ತು

(ಝಡ್ ಕೆ) ನಿಯಮಿಸಬಹುದಾದ ಯಾವುವೇ ಇತರ ವಿಷಯಗಳು.

**11. ಬಹು-ರಾಜ್ಯ ಸಹಕಾರಿ ಸೊಸೈಟಿಯ ಉಪ-ವಿಧಿಗಳಿಗೆ ತಿದ್ದುಪಡಿ.-** (1) ಬಹು-ರಾಜ್ಯ ಸಹಕಾರಿ ಸೊಸೈಟಿಯ ಯಾವುದೇ ಉಪ-ವಿಧಿಗೆ ಮಾಡಿದ ಯಾವುದೇ ತಿದ್ದುಪಡಿಯು, ಅಂಥ ತಿದ್ದುಪಡಿಯನ್ನು ಈ ಅಧಿನಿಯಮದ ಮೇರೆಗೆ ನೋಂದಣಿ ಮಾಡಿರುವ ಹೊರತು ಅದು ಸಿಂಧುವಾಗಿರತಕ್ಕದ್ದಲ್ಲ.

(2) ಬಹು–ರಾಜ್ಯ ಸಹಕಾರಿ ಸೊಸೈಟಿಯ ಉಪ–ವಿಧಿಗೆ ತಿದ್ದುಪಡಿಯನ್ನು ಸೊಸೈಟಿಯ ಸಾಮಾನ್ಯ ಸಭೆಯಲ್ಲಿ ಹಾಜರಿರುವ ಮತ್ತು ಮತ ನೀಡುವ ಸದಸ್ಯರ ಮೂರನೇ ಎರಡರಷ್ಟು ಸದಸ್ಯರ ಬಹುಮತದಿಂದ ನಿರ್ಣಯವನ್ನು ಅಂಗೀಕರಿಸುವ ಮೂಲಕ ಮಾಡತಕ್ಕದ್ದು.

(3) ಪ್ರಸ್ತಾವಿತ ತಿದ್ದುಪಡಿಯ ನೋಟೀಸನ್ನು ಪೂರ್ಣ ಹದಿನೈದು ದಿವಸಗಳ ಮುಂಚಿತವಾಗಿ ಸದಸ್ಯರಿಗೆ ನೀಡಿದ ಹೊರತು ಅಂಥ ನಿರ್ಣಯವು ಸಿಂಧುವಾಗತಕ್ಕದ್ದಲ್ಲ.

(4) ಬಹು–ರಾಜ್ಯ ಸಹಕಾರಿ ಸೊಸೈಟಿಯು ಅದರ ಉಪ–ವಿಧಿಗಳಿಗೆ ತಿದ್ದುಪಡಿ ಮಾಡಲು ಉದ್ದೇಶಿಸಿದ ಪ್ರತಿಯೊಂದು ಸಂದರ್ಭದಲ್ಲಿಯೂ, ಅಂಥ ತಿದ್ದುಪಡಿಗಳನ್ನು ನೋಂದಾಯಿಸಲು ಈ ಕೆಳಗಿನವುಗಳೊಂದಿಗೆ ಅರ್ಜಿಯನ್ನು ಕೇಂದ್ರ ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದ್ದು,–

(ಎ) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ನಿರ್ಣಯದ ಪ್ರತಿ;

(ಬಿ) ಈ ಕೆಳಗೆ ಹೇಳಿರುವ ವಿವರಗಳನ್ನೊಳಗೊಂಡ ವಿವರಣ ಪತ್ರ,–

(i) ಉಪ–ವಿಧಿಗಳಿಗೆ ಸಾಮಾನ್ಯ ಸಭೆಯಲ್ಲಿ ಯಾವ ದಿನಾಂಕದಂದು ತಿದ್ದುಪಡಿಗಳನ್ನು ಮಾಡಲಾಯಿತೋ ಆ ದಿನಾಂಕ;

(ii) ಸಾಮಾನ್ಯ ಸಭೆಯನ್ನು ಕರೆಯಲು ಎಷ್ಟು ದಿನಗಳ ನೋಟೀಸನ್ನು ನೀಡಿಲಾಯಿತೋ ಆ ದಿನಗಳ ಸಂಖ್ಯೆ;

(iii) ಬಹು–ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯರ ಒಟ್ಟು ಸಂಖ್ಯೆ;

(iv) ಅಂಥ ಸಭೆಗೆ ಅಗತ್ಯವಿರುವ ಕೋರಂ;

(v) ಸಭೆಯಲ್ಲಿ ಹಾಜರಿದ್ದ ಸದಸ್ಯರ ಸಂಖ್ಯೆ;

(vi) ಅಂಥ ಸಭೆಯಲ್ಲಿ ಮತದಾನ ಮಾಡಿದ ಸದಸ್ಯರ ಸಂಖ್ಯೆ;

(vii) ಉಪ–ವಿಧಿಗಳಿಗೆ ಅಂಥ ತಿದ್ದುಪಡಿಗಳ ಪರವಾಗಿ ಮತ ಚಲಾಯಿಸಿದ ಸದಸ್ಯರ ಸಂಖ್ಯೆ;

(ಸಿ) ಮಾಡಲು ಉದ್ದೇಶಿಸಿದ ತಿದ್ದುಪಡಿಗಳೊಂದಿಗೆ, ಅಂಥ ತಿದ್ದುಪಡಿಗಳನ್ನು ಸಮರ್ಥಿಸುವ ಕಾರಣಗಳ ಸಮೇತ ಜಾರಿಯಲ್ಲಿರುವ ಸಂಬಂಧಪಟ್ಟ ಉಪ–ವಿಧಿಗಳ ಒಂದು ಪ್ರತಿ;

(ಡಿ) ಸಾಮಾನ್ಯ ಸಭೆಯು ಈ ಬಗ್ಗೆ ಯಥೋಚಿತವಾಗಿ ಅಧಿಕೃತಗೊಳಿಸಿದ ಅಧಿಕಾರಿಯು ಸಹಿ ಮಾಡಿದ ಪ್ರಸ್ತಾವಿತ ತಿದ್ದುಪಡಿಗಳನ್ನು ಅದರಲ್ಲಿ ಸೇರಿಸಿರುವ ಆ ಉಪ–ವಿಧಿಗಳ ಪಾಠದ ನಾಲ್ಕು ಪ್ರತಿಗಳು;

(ಇ) ಸದಸ್ಯರಿಗೆ ನೀಡಿದ ನೋಟೀಸಿನ ಮತ್ತು ಉಪ–ವಿಧಿಗಳನ್ನು ತಿದ್ದುಪಡಿ ಮಾಡುವ ಪ್ರಸ್ತಾವದ ಒಂದು ಪ್ರತಿ;

(ಎಫ್) (2) ಮತ್ತು (3)ನೇ ಉಪಪ್ರಕರಣಗಳಲ್ಲಿ ಮತ್ತು ಉಪ–ವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯನ್ನು ಅನುಸರಿಸಲಾಗಿದೆ ಎಂದು ಪ್ರಮಾಣೀಕರಿಸಿ ಸಾಮಾನ್ಯ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ವ್ಯಕ್ತಿಯು ಸಹಿ ಮಾಡಿದ ಪ್ರಮಾಣ ಪತ್ರ;

(ಜಿ) ಕೇಂದ್ರ ರಿಜಿಸ್ಟ್ರಾರನು ಈ ಬಗ್ಗೆ ಅಗತ್ಯಪಡಿಸಬಹುದಾದಂಥ ಯಾವುದೇ ಇತರ ವಿವರ.

(5) ಉಪ-ವಿಧಿಗಳಿಗೆ ಅಂಥ ತಿದ್ದುಪಡಿಯನ್ನು ಯಾವ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಲಾಯಿತೋ ಆ ಸಾಮಾನ್ಯ ಸಭೆಯ ದಿನಾಂಕದಿಂದ ಅರವತ್ತು ದಿವಸಗಳೊಳಗಾಗಿ ಅಂಥ ಪ್ರತಿಯೊಂದು ಅರ್ಜಿಯನ್ನು ಸಲ್ಲಿಸತಕ್ಕದ್ದು.

(6) ಈ ಪ್ರಕರಣದ (2) ರಿಂದ (5)ರ ವರೆಗಿನ ಉಪಪ್ರಕರಣಗಳಲ್ಲಿ ಹೇಳಲಾದ ಕಾರ್ಯವಿಧಾನವು, 22ನೇ ಪ್ರಕರಣದ ಉಪಬಂಧಗಳ ಅನುಸಾರವಾಗಿ ಬಹು-ರಾಜ್ಯ ಸಹಕಾರಿ ಸೊಸೈಟಿಯಾಗಿ ಸ್ವತಃ ಪರಿವರ್ತನೆಗೊಳ್ಳಲು ಇಚ್ಛಿಸುವ ಸಹಕಾರಿ ಸೊಸೈಟಿಯು ಉಪ-ವಿಧಿಗಳ ತಿದ್ದುಪಡಿಗೆ ಅನ್ವಯವಾಗತಕ್ಕದ್ದು.

(7) (5)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ನಂತರ ಕೇಂದ್ರ ರಿಜಿಸ್ಟ್ರಾರನಿಗೆ ಆ ಪ್ರಸ್ತಾವಿತ ತಿದ್ದುಪಡಿಯು,-

(ಎ) ಈ ಅಧಿನಿಯಮದ ಅಥವಾ ನಿಯಮಗಳ ಉಪಬಂಧಗಳಿಗೆ ವಿರುದ್ಧವಾಗಿಲ್ಲವೆಂದು;

(ಬಿ) ಸಹಕಾರಿ ತತ್ವಗಳಿಗೆ ವಿರುದ್ಧವಾಗಿಲ್ಲವೆಂದು; ಮತ್ತು

(ಸಿ) ಬಹು-ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯರ ಆರ್ಥಿಕ ಹಿತಾಸಕ್ತಿಗಳನ್ನು ವೃದ್ಧಿಗೊಳಿಸುವುದೆಂದು ಮನದಟ್ಟಾದರೆ

- ಅವನು ಅದನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ತಿದ್ದುಪಡಿಯನ್ನು ನೋಂದಾಯಿಸಬಹುದು.

(8) ಕೇಂದ್ರ ರಿಜಿಸ್ಟ್ರಾರನು, ನೋಂದಾಯಿತ ತಿದ್ದುಪಡಿಯ ಪ್ರತಿಯನ್ನು ತಾನು ಸಹಿ ಮಾಡಿದ ಪ್ರಮಾಣಪತ್ರದ ಸಮೇತ ಅದನ್ನು ನೋಂದಣಿ ಮಾಡಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗಾಗಿ ಒಂದು ಪ್ರತಿಯನ್ನು ಬಹು-ರಾಜ್ಯ ಸಹಕಾರಿ ಸೊಸೈಟಿಗೆ ಕಳುಹಿಸತಕ್ಕದ್ದು ಮತ್ತು ಆ ಪ್ರಮಾಣಪತ್ರವು ತಿದ್ದುಪಡಿಯನ್ನು ವಿಧ್ಯುಕ್ತವಾಗಿ ನೋಂದಣಿ ಮಾಡಲಾಗಿದೆ ಎಂಬುದಕ್ಕೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.

(9) ಕೇಂದ್ರ ರಿಜಿಸ್ಟ್ರಾರನು, ಬಹು-ರಾಜ್ಯ ಸಹಕಾರಿ ಸೊಸೈಟಿಯ ಉಪ-ವಿಧಿಗಳ ತಿದ್ದುಪಡಿಯನ್ನು ನೋಂದಣಿ ಮಾಡಲು ನಿರಾಕರಿಸಿದಲ್ಲಿ ಅವನು, ನಿರಾಕರಣೆಯ ಆದೇಶವನ್ನು ಅದರ ಕಾರಣಗಳೊಂದಿಗೆ ಅಂಥ ನಿರಾಕರಣೆಯ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ನಿಯಮಿಸಲಾದ ರೀತಿಯಲ್ಲಿ ಸೊಸೈಟಿಯ ಮುಖ್ಯ ಕಾರ್ಯನಿರ್ವಾಹಕನಿಗೆ ತಿಳಿಸತಕ್ಕದ್ದು:

ಪರಂತು, ನೋಂದಣಿಗಾಗಿ ಬಂದ ಅರ್ಜಿಯನ್ನು (7)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಮೂರು ತಿಂಗಳ ಅವಧಿಯೊಳಗಾಗಿ ವಿಲೆ ಮಾಡದಿದ್ದರೆ ಅಥವಾ ಕೇಂದ್ರ ರಿಜಿಸ್ಟ್ರಾರನು ನಿರಾಕರಣೆಯ ಆ ಆದೇಶವನ್ನು ಆ ಅವಧಿಯೊಳಗಾಗಿ ತಿಳಿಸಲು ವಿಫಲನಾದರೆ, ಅಂಥ ಅರ್ಜಿಯನ್ನು ನೋಂದಣಿಗಾಗಿ ಅಂಗೀಕರಿಸಲಾಗಿದೆ ಎಂಬುದಾಗಿ ಭಾವಿಸತಕ್ಕದ್ದು ಮತ್ತು ಕೇಂದ್ರ ರಿಜಿಸ್ಟ್ರಾರನು ಈ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ನೋಂದಣಿ ಪ್ರಮಾಣಪತ್ರವನ್ನು ನೀಡತಕ್ಕದ್ದು.

**12. ಉಪ-ವಿಧಿಗಳ ತಿದ್ದುಪಡಿ ಯಾವಾಗ ಜಾರಿಗೆ ಬರುತ್ತದೆ.–** ಬಹು-ರಾಜ್ಯ ಸಹಕಾರಿ ಸೊಸೈಟಿಯ ಉಪ-ವಿಧಿಗಳ ತಿದ್ದುಪಡಿಯು ನಿರ್ದಿಷ್ಟ ದಿನದಂದು ಜಾರಿಗೆ ಬರುತ್ತದೆಂದು ವ್ಯಕ್ತಪಡಿಸಿದ್ದ ಹೊರತು, ಅದು ನೋಂದಣಿ ಮಾಡಿದ ದಿನಾಂಕದಂದು ಜಾರಿಗೆ ಬರತಕ್ಕದ್ದು.

**13. ಹೆಸರಿನ ಬದಲಾವಣೆ.–** (1) ಬಹು-ರಾಜ್ಯ ಸಹಕಾರಿ ಸೊಸೈಟಿಯು ಅದರ ಉಪ-ವಿಧಿಗಳ ತಿದ್ದುಪಡಿಯ ಮೂಲಕ ಅದರ ಹೆಸರನ್ನು ಬದಲಾವಣೆ ಮಾಡಿಕೊಳ್ಳಬಹುದು ಆದರೆ ಅಂಥ ಬದಲಾವಣೆಯು ಬಹು-ರಾಜ್ಯ ಸಹಕಾರಿ ಸೊಸೈಟಿಯ ಅಥವಾ ಅದರ ಯಾರೇ ಸದಸ್ಯರ ಅಥವಾ ಅದರ ಹಿಂದಿನ ಸದಸ್ಯರ ಯಾವುದೇ ಹಕ್ಕಿಗೆ ಅಥವಾ ಬಾಧ್ಯತೆಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ ಮತ್ತು ಅದರ ಹಿಂದಿನ ಹೆಸರಿನಿಂದ ಬಹು-ರಾಜ್ಯ ಸಹಕಾರಿ ಸೊಸೈಟಿಯು ಅಥವಾ ಅದರ ವಿರುದ್ಧ ಮುಂದುವರಿಸಬಹುದಾಗಿದ್ದಂಥ ಅಥವಾ ಪ್ರಾರಂಭಿಸಬಹುದಾಗಿದ್ದಂಥ ಯಾವುವೇ ಕಾನೂನು ವ್ಯವಹರಣೆಗಳನ್ನು ಅದರ ಹೊಸ ಹೆಸರಿನಲ್ಲಿ ಅದು ಅಥವಾ ಅದರ ವಿರುದ್ಧ ಮುಂದುವರಿಸಬಹುದು ಅಥವಾ ಪ್ರಾರಂಭಿಸಬಹುದು.

(2) ಬಹು-ರಾಜ್ಯ ಸಹಕಾರಿ ಸೊಸೈಟಿಯು ತನ್ನ ಹೆಸರನ್ನು ಬದಲಾವಣೆ ಮಾಡಿಕೊಂಡಿದ್ದಲ್ಲಿ, ಕೇಂದ್ರ ರಿಜಿಸ್ಟ್ರಾರನು ಬಹು-ರಾಜ್ಯ ಸಹಕಾರಿ ಸೊಸೈಟಿಯ ರಿಜಿಸ್ಟರಿನಲ್ಲಿ ಅದರ ಹಿಂದಿನ ಹೆಸರಿರುವ ಸ್ಥಳದಲ್ಲಿ ಹೊಸ ಹೆಸರನ್ನು ನಮೂದಿಸತಕ್ಕದ್ದು ಮತ್ತು ತದನುಸಾರವಾಗಿ ನೋಂದಣಿಯ ಪ್ರಮಾಣಪತ್ರವನ್ನು ತಿದ್ದುಪಡಿ ಮಾಡತಕ್ಕದ್ದು.

**14. ವಿಳಾಸದ ಬದಲಾವಣೆ.–** ಪ್ರತಿಯೊಂದು ಬಹು-ರಾಜ್ಯ ಸಹಕಾರಿ ಸೊಸೈಟಿಯು, ವ್ಯವಹಾರದ ಒಂದು ಪ್ರಧಾನ ಸ್ಥಳವನ್ನು ಮತ್ತು ನಿಯಮಿಸಿದ ರೀತಿಯಲ್ಲಿ ನೋಂದಣಿಯಾದ ಯಾವ ವಿಳಾಸಕ್ಕೆ ಎಲ್ಲ ನೋಟೀಸುಗಳನ್ನು ಕಳುಹಿಸಬೇಕೋ ಮತ್ತು ಪತ್ರ ವ್ಯವಹಾರವನ್ನು ಮಾಡಬೇಕೋ ಆ ವಿಳಾಸವನ್ನು ಹೊಂದಿರತಕ್ಕದ್ದು.

**15. ಬಹು-ರಾಜ್ಯ ಸಹಕಾರಿ ಸೊಸೈಟಿಯು ತನ್ನ ಹೆಸರನ್ನು ಪ್ರಕಟಿಸುವುದು.–** ಪ್ರತಿಯೊಂದು ಬಹು-ರಾಜ್ಯ ಸಹಕಾರಿ ಸೊಸೈಟಿಯು,–

(ಎ) ತನ್ನ ಹೆಸರನ್ನು ಮತ್ತು ತನ್ನ ನೋಂದಾಯಿತ ಕಚೇರಿಯ ವಿಳಾಸವನ್ನು ಸುಲಭವಾಗಿ ಓದಬಹುದಾದ ಅಕ್ಷರಗಳಲ್ಲಿ ಬಣ್ಣದಲ್ಲಿ ಬರೆಯತಕ್ಕದ್ದು ಅಥವಾ ಅಂಟಿಸತಕ್ಕದ್ದು ಮತ್ತು ಅದನ್ನು ಯಾವ ಕಚೇರಿಯಲ್ಲಿ ಅಥವಾ ಸ್ಥಳದಲ್ಲಿ ಅದರ ವ್ಯವಹಾರ ನಡೆಯುತ್ತಿದೆಯೋ ಆ ಪ್ರತಿಯೊಂದು ಕಚೇರಿಯ ಅಥವಾ ಸ್ಥಳದ ಹೊರಗೆ ಎದ್ದುಕಾಣುವ ಸ್ಥಳದಲ್ಲಿ ಬಣ್ಣದಲ್ಲಿ ಬರೆಸಿಡತಕ್ಕದ್ದು ಅಥವಾ ಅಂಟಿಸಿಡತಕ್ಕದ್ದು ಮತ್ತು ಅದಕ್ಕೆ ಉಪಯೋಗಿಸಿದ ಲಿಪಿಯು ಆ ಪ್ರದೇಶದಲ್ಲಿ ಸಾಮಾನ್ಯವಾಗಿ ಬಳಸುವ ಭಾಷೆಯದ್ದಾಗಿರದಿದ್ದರೆ ಅಥವಾ ಬಳಸುವ ಭಾಷೆಗಳ ಪೈಕಿ ಒಂದು ಭಾಷೆಯದ್ದಾಗಿರದಿದ್ದರೆ ಆ ಭಾಷೆಯ ಅಥವಾ ಆ ಭಾಷೆಗಳ ಪೈಕಿ ಒಂದು ಭಾಷೆಯ ಲಿಪಿಯಲ್ಲಿ ಕೂಡ, ಬಣ್ಣದಲ್ಲಿ ಬರೆಯತಕ್ಕದ್ದು ಮತ್ತು ಅಂಟಿಸತಕ್ಕದ್ದು;

(ಬಿ) ಅದರ ಹೆಸರನ್ನು ಅದರ ಮೊಹರಿನಲ್ಲಿ ಸ್ಫುಟವಾದ ಲಿಪಿಯಲ್ಲಿ ಕೆತ್ತಿಸತಕ್ಕದ್ದು; ಮತ್ತು

(ಸಿ) ಅದರ ನೋಂದಾಯಿತ ಕಚೇರಿಯ ಹೆಸರು ಮತ್ತು ವಿಳಾಸವನ್ನು ಅದರ ಎಲ್ಲ ವ್ಯವಹಾರಪತ್ರಗಳಲ್ಲಿ, ಅದರ ಎಲ್ಲ ಬಿಲ್ಲುಗಳ ಶೀರ್ಷಿಕೆಗಳಲ್ಲಿ ಮತ್ತು ಲೆಟರ್ ಪೇಪರ್‌ಗಳಲ್ಲಿ ಮತ್ತು ಅದರ ಎಲ್ಲ ನೋಟೀಸುಗಳಲ್ಲಿ ಮತ್ತು ಇತರ ಅಧಿಕೃತ ಪ್ರಕಟಣೆಗಳಲ್ಲಿ ಸುಲಭವಾಗಿ ಓದಬಹುದಾದಂತೆ ಸ್ಪಷ್ಟವಾಗಿ

ನಮೂದಿಸತಕ್ಕದ್ದು; ಮತ್ತು ಬಹು-ರಾಜ್ಯ ಸಹಕಾರಿ ಸೊಸೈಟಿಯು ಅಥವಾ ಅದರ ಪರವಾಗಿ ಸಹಿ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಎಲ್ಲ ವಿನಿಮಯ ಬಿಲ್ಲುಗಳಲ್ಲಿ, ಹುಂಡಿಗಳಲ್ಲಿ, ಪ್ರಾಮಿಸರಿ ನೋಟುಗಳಲ್ಲಿ, ಹಿಂಬರಹಗಳಲ್ಲಿ, ಚೆಕ್‌ಗಳಲ್ಲಿ ಮತ್ತು ಹಣಕ್ಕಾಗಿ ಅಥವಾ ಸರಕುಗಳಿಗಾಗಿ ಮಾಡುವ ಆದೇಶಗಳಲ್ಲಿ ಮತ್ತು ಬಹು-ರಾಜ್ಯ ಸಹಕಾರಿ ಸೊಸೈಟಿಯ ಎಲ್ಲ ಪಾರ್ಸೆಲ್ ಬಿಲ್ಲುಗಳಲ್ಲಿ, ಖರೀದಿ ಪಟ್ಟಿಗಳಲ್ಲಿ, ರಸೀದಿಗಳಲ್ಲಿ ಮತ್ತು ಸಾಲ-ಪತ್ರಗಳಲ್ಲಿ ಸಹ ಅದರ ಹೆಸರನ್ನು ನಮೂದಿಸಿರತಕ್ಕದ್ದು.

**16. ಹೊಣೆಗಾರಿಕೆ.-** (1) ಈ ಅಧಿನಿಯಮದ ಪ್ರಾರಂಭದ ನಂತರ ಸೀಮಿತವಲ್ಲದ ಹೊಣೆಗಾರಿಕೆಯಿರುವ ಯಾವುದೇ ಬಹು-ರಾಜ್ಯ ಸಹಕಾರಿ ಸೊಸೈಟಿಯನ್ನು ನೋಂದಣಿ ಮಾಡತಕ್ಕದ್ದಲ್ಲ:

ಪರಂತು, ಸೀಮಿತವಲ್ಲದ ಹೊಣೆಗಾರಿಕೆಯಿರುವ ಬಹು-ರಾಜ್ಯ ಸಹಕಾರಿ ಸೊಸೈಟಿಯು ಈ ಅಧಿನಿಯಮದ ಪ್ರಾರಂಭಕ್ಕಿಂತ ಮುಂಚಿತವಾಗಿ ಕಾರ್ಯನಿರ್ವಹಿಸುತ್ತಿದ್ದಲ್ಲಿ, ಅಂಥ ಸೊಸೈಟಿಯು ಅಂಥ ಪ್ರಾರಂಭದಿಂದ ಒಂದು ವರ್ಷದೊಳಗಾಗಿ ಹಾಗೆಯೇ ಕಾರ್ಯವನ್ನು ಮುಂದುವರಿಸುವ ಅಥವಾ (2) ರಿಂದ (4)ರ ವರೆಗಿನ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ಕಾರ್ಯವಿಧಾನಗಳನ್ನು ಅನುಸರಿಸುವ ಮೂಲಕ ಸೀಮಿತ ಹೊಣೆಗಾರಿಕೆಯುಳ್ಳ ಬಹು-ರಾಜ್ಯ ಸಹಕಾರಿ ಸೊಸೈಟಿಯಾಗಿ ಸ್ವತಃ ಪರಿವರ್ತನೆಗೊಳ್ಳುವ ಆಯ್ಕೆಯನ್ನು ಚಲಾಯಿಸತಕ್ಕದ್ದು.

(2) ಈ ಅಧಿನಿಯಮದ ಮತ್ತು ನಿಯಮಗಳ ಉಪಬಂಧಗಳಿಗೊಳಪಟ್ಟು, ಬಹು-ರಾಜ್ಯ ಸಹಕಾರಿ ಸೊಸೈಟಿಯು ಅದರ ಉಪ-ವಿಧಿಗಳನ್ನು ತಿದ್ದುಪಡಿ ಮಾಡುವ ಮೂಲಕ ಅದರ ಹೊಣೆಗಾರಿಕೆಯ ವ್ಯಾಪ್ತಿಯನ್ನು ಬದಲಾಯಿಸಬಹುದು.

(3) ಬಹು-ರಾಜ್ಯ ಸಹಕಾರಿ ಸೊಸೈಟಿಯು ಅದರ ಹೊಣೆಗಾರಿಕೆಯ ವ್ಯಾಪ್ತಿಯಲ್ಲಿ ಬದಲಾವಣೆ ಮಾಡಲು ಒಂದು ನಿರ್ಣಯವನ್ನು ಅಂಗೀಕರಿಸಿರುವಾಗ ಅದರ ಎಲ್ಲ ಸದಸ್ಯರಿಗೆ ಮತ್ತು ಸಾಲಗಾರರಿಗೆ ಲಿಖಿತದಲ್ಲಿ ಆ ಬಗ್ಗೆ ನೋಟೀಸನ್ನು ನೀಡತಕ್ಕದ್ದು ಮತ್ತು ಆ ಉಪ ವಿಧಿಗಳಲ್ಲಿ ಅಥವಾ ಕರಾರಿನಲ್ಲಿ ವಿರುದ್ಧವಾದುದು ಏನೇ ಒಳಗೊಂಡಿದ್ದರೂ, ಯಾರೇ ಸದಸ್ಯನು ಅಥವಾ ಸಾಲಗಾರನು ತನಗೆ ನೋಟೀಸನ್ನು ಜಾರಿಗೊಳಿಸಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗಾಗಿ, ಸಂದರ್ಭಾನುಸಾರ ತನ್ನ ಷೇರುಗಳನ್ನು, ಠೇವಣಿಗಳನ್ನು ಅಥವಾ ಸಾಲಗಳನ್ನು ಹಿಂತೆಗೆದುಕೊಳ್ಳುವ ಆಯ್ಕೆಯನ್ನು ಹೊಂದಿರತಕ್ಕದ್ದು.

(4) (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ತನ್ನ ಆಯ್ಕೆಯನ್ನು ಚಲಾಯಿಸದಿರುವ ಯಾರೇ ಸದಸ್ಯನು ಅಥವಾ ಸಾಲಗಾರನು ಅಂಥ ಬದಲಾವಣೆಗೆ ಸಮ್ಮತಿಸಿದ್ದಾನೆಂದು ಭಾವಿಸತಕ್ಕದ್ದು.

(5) ಬಹು-ರಾಜ್ಯ ಸಹಕಾರಿ ಸೊಸೈಟಿಯ ಹೊಣೆಗಾರಿಕೆಯ ವ್ಯಾಪ್ತಿಯನ್ನು ಬದಲಾಯಿಸುವ ಅದರ ಉಪ-ವಿಧಿಯ ತಿದ್ದುಪಡಿಯನ್ನು,-

(ಎ) ಅದಕ್ಕೆ ಎಲ್ಲ ಸದಸ್ಯರ ಮತ್ತು ಸಾಲಗಾರರ ಸಮ್ಮತಿಯನ್ನು ಪಡೆಯುವವರೆಗೆ; ಅಥವಾ

(ಬಿ) (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಆಯ್ಕೆಯನ್ನು ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ಚಲಾಯಿಸುವ ಎಲ್ಲ ಸದಸ್ಯರ ಮತ್ತು ಸಾಲಗಾರರ ಎಲ್ಲ ಕ್ಲೇಮುಗಳನ್ನು ಪೂರ್ಣವಾಗಿ ಈಡೇರಿಸುವವರೆಗೆ ಅಥವಾ ಅನ್ಯಥಾ ನೆರವೇರಿಸುವವರೆಗೆ

– ನೋಂದಣಿ ಮಾಡತಕ್ಕದ್ದಲ್ಲ ಅಥವಾ ಅದನ್ನು ಜಾರಿಗೆ ತರತಕ್ಕದ್ದಲ್ಲ.

**17. ಬಹು-ರಾಜ್ಯ ಸಹಕಾರಿ ಸೊಸೈಟಿಯ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ವಿಲೀನ ಅಥವಾ ವರ್ಗಾವಣೆ ಅಥವಾ ವಿಭಜನೆ.-** (1) ಬಹು-ರಾಜ್ಯ ಸಹಕಾರಿ ಸೊಸೈಟಿಯು ಈ ಕೆಳಕಂಡವುಗಳ ಉದ್ದೇಶಕ್ಕಾಗಿ ನಡೆದ ಸೊಸೈಟಿಯ ಸಾಮಾನ್ಯ ಸಭೆಯಲ್ಲಿ ಹಾಜರಿರುವ ಮತ್ತು ಮತ ನೀಡುವ ಸದಸ್ಯರ ಮೂರನೇ ಎರಡರಷ್ಟಕ್ಕಿಂತ ಕಡಿಮೆ ಇಲ್ಲದ ಸದಸ್ಯರ ಬಹುಮತದ ಮೂಲಕ ಅಂಗೀಕರಿಸಿದ ನಿರ್ಣಯದ ಮೂಲಕ,-

(ಎ) ಯಾವುದೇ ಇತರ ಬಹು-ರಾಜ್ಯ ಸಹಕಾರಿ ಸೊಸೈಟಿಗೆ ಅಥವಾ ಸಹಕಾರಿ ಸೊಸೈಟಿಗೆ ಪೂರ್ಣವಾಗಿ ಅಥವಾ ಭಾಗಶಃ ಅದರ ಆಸ್ತಿಗಳನ್ನು ಮತ್ತು ಹೊಣೆಗಾರಿಕೆಗಳನ್ನು ವರ್ಗಾಯಿಸಬಹುದು.

(ಬಿ) ಎರಡು ಅಥವಾ ಹೆಚ್ಚು ಬಹು-ರಾಜ್ಯ ಸಹಕಾರಿ ಸೊಸೈಟಿಗಳಾಗಿ ಸ್ವತಃ ವಿಭಜಿಸಿಕೊಳ್ಳಬಹುದು;

(ಸಿ) ಎರಡು ಅಥವಾ ಹೆಚ್ಚು ಸಹಕಾರಿ ಸೊಸೈಟಿಗಳಾಗಿ ಸ್ವತಃ ವಿಭಜಿಸಿಕೊಳ್ಳಬಹುದು.

(2) ಯಾವುದೇ ಎರಡು ಅಥವಾ ಹೆಚ್ಚು ಬಹು-ರಾಜ್ಯ ಸಹಕಾರಿ ಸೊಸೈಟಿಗಳು ಪ್ರತಿಯೊಂದು ಅಂಥ ಸಹಕಾರಿ ಸೊಸೈಟಿಯ ಸಾಮಾನ್ಯ ಸಭೆಯಲ್ಲಿ ಹಾಜರಿರುವ ಮತ್ತು ಮತ ನೀಡುವ ಸದಸ್ಯರ ಮೂರನೇ ಎರಡರಷ್ಟಕ್ಕಿಂತ ಕಡಿಮೆ ಇಲ್ಲದ ಬಹುಮತದಿಂದ ನಿರ್ಣಯವನ್ನು ಅಂಗೀಕರಿಸುವ ಮೂಲಕ ಸ್ವತಃ ವಿಲೀನಗೊಳ್ಳಬಹುದು ಮತ್ತು ಹೊಸ ಬಹು-ರಾಜ್ಯ ಸಹಕಾರಿ ಸೊಸೈಟಿಯೊಂದನ್ನು ರಚಿಸಬಹುದು.

(3) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ಒಂದು ಬಹು-ರಾಜ್ಯ ಸಹಕಾರಿ ಸೊಸೈಟಿಯ ನಿರ್ಣಯವು, ಸಂದರ್ಭಾನುಸಾರ ವರ್ಗಾವಣೆಯ ಅಥವಾ ವಿಭಜನೆಯ ಅಥವಾ ವಿಲೀನದ ಎಲ್ಲ ವಿವರಗಳನ್ನು ಒಳಗೊಂಡಿರತಕ್ಕದ್ದು.

(4) ಬಹು-ರಾಜ್ಯ ಸಹಕಾರಿ ಸೊಸೈಟಿಯು (1)ನೇ ಉಪಪ್ರಕರಣದಲ್ಲಿ ಅಥವಾ (2)ನೇ ಉಪಪ್ರಕರಣದ ಮೇರೆಗೆ ನಿರ್ಣಯವನ್ನು ಅಂಗೀಕರಿಸಿರುವಲ್ಲಿ, ಅದರ ಎಲ್ಲ ಸದಸ್ಯರಿಗೆ ಮತ್ತು ಸಾಲಗಾರರಿಗೆ ಲಿಖಿತದಲ್ಲಿ ಆ ಬಗ್ಗೆ ನೋಟೀಸನ್ನು ನೀಡತಕ್ಕದ್ದು ಮತ್ತು ಉಪ ವಿಧಿಗಳಲ್ಲಿ ಅಥವಾ ಕರಾರಿನಲ್ಲಿ ವಿರುದ್ಧವಾದುದು ಏನೇ ಒಳಗೊಂಡಿದ್ದರೂ ಯಾರೇ ಸದಸ್ಯನು ಅಥವಾ ಸಾಲಗಾರನು ತನಗೆ ನೋಟೀಸನ್ನು ಜಾರಿಗೊಳಿಸಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗಾಗಿ, ಸಂದರ್ಭಾನುಸಾರ, ತನ್ನ ಷೇರುಗಳನ್ನು, ಠೇವಣಿಗಳನ್ನು ಅಥವಾ ಸಾಲಗಳನ್ನು ಹಿಂತೆಗೆದುಕೊಳ್ಳುವ ಆಯ್ಕೆಯನ್ನು ಹೊಂದಿರತಕ್ಕದ್ದು.

(5) (4)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ತನ್ನ ಆಯ್ಕೆಯನ್ನು ಚಲಾಯಿಸದಿರುವ ಯಾರೇ ಸದಸ್ಯನು ಅಥವಾ ಸಾಲಗಾರನು ನಿರ್ಣಯದಲ್ಲಿ ಒಳಗೊಂಡಿರುವ ಪ್ರಸ್ತಾವನೆಗಳಿಗೆ ಸಮ್ಮತಿಸಿದ್ದಾನೆಂದು ಭಾವಿಸತಕ್ಕದ್ದು.

(6) (ಎ) ಈ ಪ್ರಕರಣದ ಮೇರೆಗೆ ಬಹು-ರಾಜ್ಯ ಸಹಕಾರಿ ಸೊಸೈಟಿಯು ಅಂಗೀಕರಿಸಿದ ನಿರ್ಣಯವು ಎಲ್ಲ ಸದಸ್ಯರು ಮತ್ತು ಸಾಲಗಾರರು ಅದಕ್ಕೆ ಸಮ್ಮತಿಸುವವರೆಗೆ ಜಾರಿಗೆ ಬರತಕ್ಕದ್ದಲ್ಲ.

(ಬಿ) ಬಹು-ರಾಜ್ಯ ಸಹಕಾರಿ ಸೊಸೈಟಿಯು, (4)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಆಯ್ಕೆಯನ್ನು ಚಲಾಯಿಸಿದ ಸದಸ್ಯರ ಮತ್ತು ಸಾಲಗಾರರ ಎಲ್ಲ ಕ್ಲೇಮುಗಳನ್ನು ಸಂಪೂರ್ಣವಾಗಿ ಈಡೇರಿಸಲು ಅಥವಾ ಅನ್ಯಥಾ ನೆರವೇರಿಸಲು ವ್ಯವಸ್ಥೆ ಮಾಡತಕ್ಕದ್ದು.

(7) (1)ನೇ ಉಪಪ್ರಕರಣದ ಮೇರೆಗೆ ಅಂಗೀಕರಿಸಿದ ನಿರ್ಣಯದ ಅನುಸಾರವಾಗಿ ವಿಭಜನೆಯಿಂದ ರಚಿಸಲಾದ ಹೊಸ ಸೊಸೈಟಿಗಳ ಅಥವಾ (2)ನೇ ಉಪಪ್ರಕರಣದ ಮೇರೆಗೆ ಅಂಗೀಕರಿಸಿದ ನಿರ್ಣಯದ ಅನುಸಾರವಾಗಿ ವಿಲೀನದಿಂದ ರಚಿಸಲಾದ ಹೊಸ ಸೊಸೈಟಿಯ ನೋಂದಣಿಗಾಗಿ ಅರ್ಜಿಯನ್ನು ಸ್ವೀಕರಿಸಿದ ನಂತರ, ಕೇಂದ್ರ ರಿಜಿಸ್ಟ್ರಾರನು, (6)ನೇ ಉಪಪ್ರಕರಣದ ಮೇರೆಗೆ ನಿರ್ಣಯವು ಜಾರಿಗೆ ಬಂದಿದೆ ಎಂಬುದನ್ನು ಮನದಟ್ಟು ಮಾಡಿಕೊಂಡ ನಂತರ, ಹಾಗೆ ನಿರಾಕರಿಸುವುದಕ್ಕೆ ಅವನು ಸೂಕ್ತವೆಂದು ಭಾವಿಸಿದಂಥ ಕಾರಣಗಳನ್ನು ಲಿಖಿತದಲ್ಲಿ ದಾಖಲು ಮಾಡಿದ ಹೊರತು, ಸಂದರ್ಭಾನುಸಾರ ಹೊಸ ಸೊಸೈಟಿ ಅಥವಾ ಸೊಸೈಟಿಗಳನ್ನು ಮತ್ತು ಅವುಗಳ ಉಪ-ವಿಧಿಗಳನ್ನು ನೋಂದಾಯಿಸತಕ್ಕದ್ದು.

(8) (7)ನೇ ಉಪಪ್ರಕರಣದ ಮೇರೆಗಿನ ಆದೇಶವನ್ನು ಹೊರಡಿಸಿದ ಮೇಲೆ, 21ನೇ ಪ್ರಕರಣದ ಉಪಬಂಧಗಳು, ಹಾಗೆ ವಿಭಜನೆಗೊಂಡ ಬಹು–ರಾಜ್ಯ ಸಹಕಾರಿ ಸೊಸೈಟಿಗೆ ಅಥವಾ ಹಾಗೆ ವಿಲೀನಗೊಂಡ ಬಹು–ರಾಜ್ಯ ಸಹಕಾರಿ ಸೊಸೈಟಿಗಳಿಗೆ ಸಾಧ್ಯವಾದಷ್ಟು ಮಟ್ಟಿಗೆ ಅನ್ವಯವಾಗತಕ್ಕದ್ದು.

(9) ಈ ಪ್ರಕರಣದ ಮೇರೆಗೆ ಒಂದು ಬಹು–ರಾಜ್ಯ ಸಹಕಾರಿ ಸೊಸೈಟಿಯು ಅಂಗೀಕರಿಸಿದ ನಿರ್ಣಯವು ಯಾವುದೇ ಆಸ್ತಿ ಮತ್ತು ಹೊಣೆಗಾರಿಕೆಗಳ ವರ್ಗಾವಣೆಯನ್ನು ಒಳಗೊಂಡಿದ್ದರೆ, ಅದು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಯಾವುದೇ ಮತ್ತಷ್ಟು ಆಶ್ವಾಸನೆ ಇಲ್ಲದೆ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ವರ್ಗಾವಣೆ ಪಡೆದವನಲ್ಲಿ ನಿಹಿತಗೊಳಿಸುವ ಒಂದು ಪರ್ಯಾಪ್ತ ಹಸ್ತಾಂತರಣವಾಗಿರತಕ್ಕದ್ದು.

**18. ಕೇಂದ್ರ ರಿಜಿಸ್ಟ್ರಾರನು, ಕೆಲವು ಸಂದರ್ಭಗಳಲ್ಲಿ, ಸಹಕಾರಿ ಬ್ಯಾಂಕಿನ ವಿಲೀನ ಅಥವಾ ಪುನರ್ ರಚನೆಯ ಯೋಜನೆಯನ್ನು ಸಿದ್ಧಪಡಿಸುವುದು.–** ಕೇಂದ್ರ ಸರ್ಕಾರವು, ಒಂದು ಸಹಕಾರಿ ಬ್ಯಾಂಕಿನ ಸಂಬಂಧದಲ್ಲಿ, ಬ್ಯಾಂಕುಗಳ ವಿನಿಯಮನ ಅಧಿನಿಯಮ, 1949ರ (1949ರ 10) 45ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಕೇಂದ್ರ ರಿಜಿಸ್ಟ್ರಾರನು ರಿಸರ್ವ್ ಬ್ಯಾಂಕಿನ ಲಿಖಿತ ಪೂರ್ವ ಅನುಮೋದನೆಯನ್ನು ಪಡೆದು ಸ್ಥಗಿತಗೊಳಿಸುವ ಆದೇಶವನ್ನು ಮಾಡಿರುವಲ್ಲಿ, ಸ್ಥಗಿತಗೊಳಿಸಿದ ಅವಧಿಯಲ್ಲಿ,–

(ಎ) ಸಹಕಾರಿ ಬ್ಯಾಂಕನ್ನು ಯಾವುದೇ ಇತರ ಸಹಕಾರಿ ಬ್ಯಾಂಕಿನೊಂದಿಗೆ ವಿಲೀನಗೊಳಿಸುವುದಕ್ಕಾಗಿ; ಅಥವಾ

(ಬಿ) ಸಹಕಾರಿ ಬ್ಯಾಂಕನ್ನು ಪುನರ್ ರಚಿಸುವುದಕ್ಕಾಗಿ

– ಯೋಜನೆಯನ್ನು ಸಿದ್ಧಪಡಿಸಬಹುದು.

**19. ಸಹಾಯಕ ಸಂಸ್ಥೆಗೆ ಉತ್ತೇಜನ.–** (1) ಯಾವುದೇ ಬಹು–ರಾಜ್ಯ ಸಹಕಾರಿ ಸೊಸೈಟಿಯು ಸಾಮಾನ್ಯ ಸಭೆಯಲ್ಲಿ ಹಾಜರಿರುವ ಮತ್ತು ಮತ ನೀಡುವ ಸದಸ್ಯರ ಬಹುಮತದಿಂದ ಅಂಗೀಕರಿಸಿದ ನಿರ್ಣಯದ ಮೂಲಕ, ತನ್ನ ನಿರೂಪಿತ ಉದ್ದೇಶಗಳ ಮುಂದುವರಿಕೆಗಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ನೋಂದಾಯಿಸಬಹುದಾದಂಥ ಒಂದು ಅಥವಾ ಹೆಚ್ಚು ಸಹಾಯಕ ಸಂಸ್ಥೆಗಳಿಗೆ ಉತ್ತೇಜನ ನೀಡಬಹುದು.

(2) ಬಹು–ರಾಜ್ಯ ಸಹಕಾರಿ ಸೊಸೈಟಿಯ ಸಾಮಾನ್ಯ ಸಭೆಯು, (1)ನೇ ಉಪಪ್ರಕರಣದ ಮೇರೆಗೆ ಉತ್ತೇಜಿಸಲಾದ ಯಾವುದೇ ಸಹಾಯಕ ಸಂಸ್ಥೆಯು, ಅಸ್ತಿತ್ವದಲ್ಲಿರುವುದು ಅಗತ್ಯವೆಂದು ಭಾವಿಸುವವರೆಗೆ ಮಾತ್ರ ಅದು ಅಸ್ತಿತ್ವದಲ್ಲಿರತಕ್ಕದ್ದು:

ಪರಂತು, ಅಂಥ ಸಹಾಯಕ ಸಂಸ್ಥೆಗೆ ಉತ್ತೇಜನ ನೀಡುವಾಗ ಬಹು-ರಾಜ್ಯ ಸಹಕಾರಿ ಸೊಸೈಟಿಯು, ತನ್ನ ನಿರೂಪಿತ ಉದ್ದೇಶಗಳ ಮುಂದುವರಿಕೆಗಾಗಿ ಕೈಗೊಳ್ಳಲಾದ ಅದರ ವ್ಯವಹಾರಗಳ ಅಥವಾ ಚಟುವಟಿಕೆಗಳ ಮುಖ್ಯ ಭಾಗವನ್ನು ವರ್ಗಾವಣೆ ಮಾಡತಕ್ಕದ್ದಲ್ಲ ಅಥವಾ ವಹಿಸಿಕೊಡತಕ್ಕದ್ದಲ್ಲ.

**ವಿವರಣೆ.-** ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) ಬಹು-ರಾಜ್ಯ ಸಹಕಾರಿ ಸೊಸೈಟಿಯು,-

(i) ಅಂಥ ಸಂಸ್ಥೆಯ ವ್ಯವಸ್ಥಾಪನೆಯನ್ನು ಅಥವಾ ನಿರ್ದೇಶಕ ಮಂಡಳಿಯನ್ನು ಅಥವಾ ಆಡಳಿತ ಮಂಡಳಿಯ ಸದಸ್ಯರನ್ನು ನಿಯಂತ್ರಿಸುತ್ತಿದ್ದರೆ; ಅಥವಾ

(ii) ಅಂಥ ಸಂಸ್ಥೆಗಳ ಈಕ್ವಿಟಿ ಷೇರುಗಳ ನಾಮಮಾತ್ರದ ಮೌಲ್ಯದಲ್ಲಿ ಅರ್ಧಕ್ಕಿಂತ ಹೆಚ್ಚು ಈಕ್ವಿಟಿ ಷೇರುಗಳನ್ನು ಹೊಂದಿದ್ದರೆ; ಅಥವಾ

(iii) ಅಂಥ ಬಹು-ರಾಜ್ಯ ಸಹಕಾರಿ ಸೊಸೈಟಿಯ ಒಬ್ಬ ಅಥವಾ ಹೆಚ್ಚು ಸದಸ್ಯರು ಆ ಸಂಸ್ಥೆಯಲ್ಲಿನ ಬಹುಪಾಲು ಈಕ್ವಿಟಿ ಷೇರುಗಳನ್ನು ಸಂದರ್ಭಾನುಸಾರ ತಾವೇ ಸ್ವತಃ ಅಥವಾ ಸಹಾಯಕ ಸಂಸ್ಥೆಯೊಂದಿಗೆ ಅಥವಾ ಅವರ ಸಂಬಂಧಿಕರೊಂದಿಗೆ ಹೊಂದಿದ್ದರೆ

- ಅಂಥ ಸಂಸ್ಥೆಯನ್ನು ಸಹಾಯಕ ಸಂಸ್ಥೆ ಎಂಬುದಾಗಿ ಭಾವಿಸತಕ್ಕದ್ದು.

(ಬಿ) ಸಹಾಯಕ ಸಂಸ್ಥೆಯು ಪಾಲುಗಾರಿಕೆ ಫರ್ಮನ್ನು ಒಳಗೊಳ್ಳತಕ್ಕದ್ದಲ್ಲ.

(3) ಅಂಥ ಯಾವುದೇ ಸಹಾಯಕ ಸಂಸ್ಥೆಯ ವಾರ್ಷಿಕ ವರದಿಗಳನ್ನು ಮತ್ತು ಲೆಕ್ಕಪತ್ರಗಳನ್ನು, ಉತ್ತೇಜನ ನೀಡುವ ಬಹು-ರಾಜ್ಯ ಸಹಕಾರಿ ಸೊಸೈಟಿಯ ಸಾಮಾನ್ಯ ಸಭೆಯ ಮುಂದೆ ಪ್ರತಿವರ್ಷ ಮಂಡಿಸತಕ್ಕದ್ದು.

**20. ಠೇವಣಿ ವಿಮಾ ಮತ್ತು ಸಾಲ ಖಾತರಿ ನಿಗಮಕ್ಕೆ ಸಹಕಾರಿ ಬ್ಯಾಂಕಿನ ಹೊಣೆಗಾರಿಕೆ.-** ಈ ಅಧಿನಿಯಮದ 17ನೇ ಪ್ರಕರಣದಲ್ಲಿ ಅಥವಾ ಯಾವುದೇ ಇತರ ಉಪಬಂಧದಲ್ಲಿ ಏನೇ ಒಳಗೊಂಡಿದ್ದರೂ ಠೇವಣಿ ವಿಮಾ ಮತ್ತು ಸಾಲ ಖಾತರಿ ನಿಗಮ ಅಧಿನಿಯಮ 1961ರ (1961ರ 47) ಅರ್ಥವ್ಯಾಪ್ತಿಯಲ್ಲಿ ವಿಮೆಗೆ ಒಳಗಾದ ಬ್ಯಾಂಕ್ ಆಗಿರುವ ಸಹಕಾರಿ ಬ್ಯಾಂಕನ್ನು ವಿಲೀನಗೊಳಿಸಿದ್ದರೆ ಅಥವಾ ಪುನರಚಿಸಿದ್ದರೆ ಮತ್ತು ಠೇವಣಿ ವಿಮಾ ನಿಗಮವು, ಆ ಅಧಿನಿಯಮದ 16ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ವಿಮೆಗೆ ಒಳಗಾದ ಬ್ಯಾಂಕಿನ ಠೇವಣಿದಾರರಿಗೆ ಪಾವತಿ ಮಾಡುವುದಕ್ಕೆ ಹೊಣೆಗಾರನಾಗಿದ್ದರೆ ವಿಮೆಗೆ ಒಳಗಾದ ಬ್ಯಾಂಕ್ ಯಾವ ಬ್ಯಾಂಕಿನೊಂದಿಗೆ ಅದು ವಿಲೀನಗೊಂಡಿದೆಯೋ ಆ ಬ್ಯಾಂಕ್ ಅಥವಾ ಹಾಗೇ ವಿಲೀನಗೊಂಡ ನಂತರ ರಚಿಸಿದ ಹೊಸ ಸಹಕಾರಿ ಬ್ಯಾಂಕ್ ಅಥವಾ ಸಂದರ್ಭಾನುಸಾರ ವಿಮೆಗೆ ಒಳಗಾದ ಬ್ಯಾಂಕ್ ಅಥವಾ ವರ್ಗಾವಣೆ ಪಡೆದ ಬ್ಯಾಂಕ್, ಠೇವಣಿ ವಿಮಾ ಮತ್ತು ಸಾಲ ಖಾತರಿ ನಿಗಮ ಅಧಿನಿಯಮ, 1961ರ 21ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಸನ್ನಿವೇಶಗಳಲ್ಲಿ ಅಷ್ಟರಮಟ್ಟಿಗೆ ಮತ್ತು ಆ ರೀತಿಯಲ್ಲಿ ಠೇವಣಿ ವಿಮಾ ನಿಗಮಕ್ಕೆ ಮರುಪಾವತಿ ಮಾಡಲು ಬದ್ಧವಾಗಿರತಕ್ಕದ್ದು.

**21. ಕೆಲವು ಸಂದರ್ಭಗಳಲ್ಲಿ ಬಹು-ರಾಜ್ಯ ಸಹಕಾರಿ ಸೊಸೈಟಿಗಳ ನೋಂದಣಿ ಪ್ರಮಾಣ ಪತ್ರವನ್ನು ರದ್ದುಗೊಳಿಸುವುದು.-** (1) ಬಹು-ರಾಜ್ಯ ಸಹಕಾರಿ ಸೊಸೈಟಿಯ ಇಡೀ ಆಸ್ತಿಗಳನ್ನು ಮತ್ತು ಹೊಣೆಗಾರಿಕೆಗಳನ್ನು 17ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಬೇರೊಂದು ಬಹು-ರಾಜ್ಯ ಸಹಕಾರಿ ಸೊಸೈಟಿಗೆ ಅಥವಾ ಸಹಕಾರಿ ಸೊಸೈಟಿಗೆ ವರ್ಗಾವಣೆ ಮಾಡಿರುವಲ್ಲಿ ಮೊದಲು ನಮೂದಿಸಿದ ಬಹು- ರಾಜ್ಯ ಸಹಕಾರಿ ಸೊಸೈಟಿಯ

ನೋಂದಣಿಯು ರದ್ದುಗೊಳ್ಳತಕ್ಕದ್ದು ಮತ್ತು ಆ ಸೊಸೈಟಿಯು ವಿಸರ್ಜನೆಗೊಂಡಿದೆ ಎಂಬುದಾಗಿ ಭಾವಿಸತಕ್ಕದ್ದು ಮತ್ತು ಅದು ನಿಗಮಿತ ನಿಕಾಯವಾಗಿ ಅಸ್ತಿತ್ವದಲ್ಲಿರುವುದು ನಿಂತು ಹೋಗತಕ್ಕದ್ದು.

(2) 17ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಎರಡು ಅಥವಾ ಹೆಚ್ಚು ಬಹು-ರಾಜ್ಯ ಸಹಕಾರಿ ಸೊಸೈಟಿಗಳು ವಿಲೀನಗೊಂಡು ಒಂದು ಹೊಸ ಬಹು-ರಾಜ್ಯ ಸಹಕಾರಿ ಸೊಸೈಟಿಯಾಗಿದ್ದರೆ, ವಿಲೀನಗೊಂಡ ಪ್ರತಿಯೊಂದು ಸಹಕಾರಿ ಸೊಸೈಟಿಯ ನೋಂದಣಿಯು, ಹೊಸ ಸೊಸೈಟಿಯ ನೋಂದಣಿಯ ನಂತರ ರದ್ದುಗೊಳ್ಳತಕ್ಕದ್ದು ಮತ್ತು ವಿಲೀನಗೊಂಡ ಪ್ರತಿಯೊಂದು ಸೊಸೈಟಿಯನ್ನು ವಿಸರ್ಜಿಸಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಅದು ನಿಗಮಿತ ನಿಕಾಯವಾಗಿ ಅಸ್ತಿತ್ವದಲ್ಲಿರುವುದು ನಿಂತುಹೋಗತಕ್ಕದ್ದು.

(3) ಒಂದು ಬಹು-ರಾಜ್ಯ ಸಹಕಾರಿ ಸೊಸೈಟಿಯು 17ನೇ ಪ್ರಕರಣದ ಉಪಬಂಧಗಳ ಅನುಸಾರವಾಗಿ ಎರಡು ಅಥವಾ ಹೆಚ್ಚು ಬಹು-ರಾಜ್ಯ ಸಹಕಾರಿ ಸೊಸೈಟಿಗಳಾಗಿ ಸ್ವತಃ ಅಥವಾ ಎರಡು ಅಥವಾ ಹೆಚ್ಚು ಸಹಕಾರಿ ಸೊಸೈಟಿಗಳಾಗಿ ವಿಭಜನೆಗೊಂಡಲ್ಲಿ ಆ ಸೊಸೈಟಿಯ ನೋಂದಣಿಯು ಹೊಸ ಸೊಸೈಟಿಗಳ ನೋಂದಣಿಯ ನಂತರ ರದ್ದುಗೊಳ್ಳತಕ್ಕದ್ದು ಮತ್ತು ಆ ಸೊಸೈಟಿಯನ್ನು ವಿಸರ್ಜಿಸಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಅದು ನಿಗಮಿತ ನಿಕಾಯವಾಗಿ ಅಸ್ತಿತ್ವದಲ್ಲಿರುವುದು ನಿಂತುಹೋಗತಕ್ಕದ್ದು.

(4) ಬಹು-ರಾಜ್ಯ ಸಹಕಾರಿ ಸೊಸೈಟಿಗಳ ವಿಲೀನವು ಅಥವಾ ವಿಭಜನೆಯು ಅದರ ಪರಿಣಾಮವಾಗಿ ಅಸ್ತಿತ್ವಕ್ಕೆ ಬಂದ ಬಹು-ರಾಜ್ಯ ಸಹಕಾರಿ ಸೊಸೈಟಿ ಅಥವಾ ಸೊಸೈಟಿಗಳ ಯಾವುದೇ ಹಕ್ಕಿಗೆ ಅಥವಾ ಬಾಧ್ಯತೆಗೆ ಯಾವುದೇ ರೀತಿಯಲ್ಲಿ ಬಾಧಕ ಉಂಟುಮಾಡತಕ್ಕದ್ದಲ್ಲ ಅಥವಾ ಬಹು-ರಾಜ್ಯ ಸಹಕಾರಿ ಸೊಸೈಟಿಯು ಅಥವಾ ಸೊಸೈಟಿಗಳು ಹೂಡಿರುವ ಅಥವಾ ಅದರ ಅಥವಾ ಅವುಗಳ ವಿರುದ್ಧವಾಗಿ ಇರುವ ಯಾವುವೇ ಕಾನೂನು ವ್ಯವಹರಣೆಗಳನ್ನು ದೋಷಪೂರ್ಣವಾಗಿ ಮಾಡತಕ್ಕದ್ದಲ್ಲ ಮತ್ತು ಸಂದರ್ಭಾನುಸಾರ ಬಹು-ರಾಜ್ಯ ಸಹಕಾರಿ ಸೊಸೈಟಿಯು ಅಥವಾ ಸೊಸೈಟಿಗಳು ಅದರ ಅಥವಾ ಅವುಗಳ ವಿಲೀನಕ್ಕೆ ಅಥವಾ ವಿಭಜನೆಗೆ ಮುಂಚೆ ಅದರ ಅಥವಾ ಅವುಗಳ ವಿರುದ್ಧವಾಗಿ ಮುಂದುವರಿಸಬಹುದಾಗಿದ್ದ ಅಥವಾ ಪ್ರಾರಂಭಿಸಬಹುದಾಗಿದ್ದ ಯಾವುದೇ ಕಾನೂನು ವ್ಯವಹರಣೆಗಳನ್ನು, ಆ ಪರಿಣಾಮವಾಗಿ ಅಸ್ತಿತ್ವಕ್ಕೆ ಬಂದಿರುವ ಬಹು-ರಾಜ್ಯ ಸಹಕಾರಿ ಸೊಸೈಟಿಯು ಅಥವಾ ಸೊಸೈಟಿಗಳು ಅಥವಾ ಅದರ ಅಥವಾ ಅವುಗಳ ವಿರುದ್ಧ ಮುಂದುವರಿಸಬಹುದು ಅಥವಾ ಪ್ರಾರಂಭಿಸಬಹುದು.

**22. ಸಹಕಾರಿ ಸೊಸೈಟಿಯನ್ನು ಬಹು-ರಾಜ್ಯ ಸಹಕಾರಿ ಸೊಸೈಟಿಯನ್ನಾಗಿ ಪರಿವರ್ತಿಸುವುದು.-** (1) ಸಹಕಾರಿ ಸೊಸೈಟಿಯನ್ನು ಅದರ ಉಪ-ವಿಧಿಗಳ ತಿದ್ದುಪಡಿಯ ಮೂಲಕ ಅದರ ಅಧಿಕಾರ ವ್ಯಾಪ್ತಿಯನ್ನು ವಿಸ್ತರಿಸಬಹುದು ಮತ್ತು ಸ್ವತಃ ಬಹು-ರಾಜ್ಯ ಸಹಕಾರಿ ಸೊಸೈಟಿಯನ್ನಾಗಿ ಪರಿವರ್ತಿಸಿಕೊಳ್ಳಬಹುದು:

ಪರಂತು, ಸಹಕಾರಿ ಸೊಸೈಟಿಯ ಉಪವಿಧಿಗಳ ತಿದ್ದುಪಡಿಯನ್ನು ಕೇಂದ್ರ ರಿಜಿಸ್ಟ್ರಾರನು ನೋಂದಣಿ ಮಾಡಿದ್ದ ಹೊರತು, ಅದು ಸಿಂಧುವಾಗಿರತಕ್ಕದ್ದಲ್ಲ.

(2) (ಎ) ಉಪ-ವಿಧಿಗಳನ್ನು ಹಾಗೆ ತಿದ್ದುಪಡಿ ಮಾಡುವುದಕ್ಕಾಗಿ ಬಂದ ಪ್ರತಿಯೊಂದು ಪ್ರಸ್ತಾವನೆಯನ್ನು 11ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ಒಳಗೊಂಡ ಉಪಬಂಧಗಳ ಅನುಸಾರವಾಗಿ ಕೇಂದ್ರ ರಿಜಿಸ್ಟ್ರಾರನಿಗೆ ಕಳುಹಿಸತಕ್ಕದ್ದು.

(ಬಿ) ಕೇಂದ್ರ ರಿಜಿಸ್ಟ್ರಾರನು ಸಂಬಂಧಿಸಿದ ರಾಜ್ಯ ಸಹಕಾರಿ ಸೊಸೈಟಿಗಳ ರಿಜಿಸ್ಟ್ರಾರರೊಂದಿಗೆ ಸಮಾಲೋಚಿಸಿದ ತರುವಾಯ ಅಂಥ ತಿದ್ದುಪಡಿಯು,–

(i) ಒಂದಕ್ಕಿಂತ ಹೆಚ್ಚು ರಾಜ್ಯಗಳಿಂದ ಸದಸ್ಯರಿರಬೇಕೆಂಬ ಅಗತ್ಯತೆಯನ್ನು ಪೂರೈಸಿದೆಯೆಂದು;

(ii) 11ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ಒಳಗೊಂಡ ಉಪಬಂಧಗಳಿಗನುಸಾರವಾಗಿದೆಯೆಂದು

– ಅವನಿಗೆ ಮನದಟ್ಟಾದರೆ, ಅವನು ಅದನ್ನು ಸ್ವೀಕರಿಸಿದ ದಿನಾಂಕದಿಂದ ಆರು ತಿಂಗಳೊಳಗಾಗಿ ತಿದ್ದುಪಡಿಯನ್ನು ನೋಂದಣಿ ಮಾಡಬಹುದು:

ಪರಂತು, ಯಾವುದೇ ಸಹಕಾರಿ ಸೊಸೈಟಿಯನ್ನು ಬಹು–ರಾಜ್ಯ ಸಹಕಾರಿ ಸೊಸೈಟಿ ಎಂಬುದಾಗಿ ನೋಂದಣಿ ಮಾಡಿದ ಹೊರತು, ಏನೇ ಕಾರಣಗಳಿದ್ದರೂ ಅಂಥ ಸೊಸೈಟಿಯನ್ನು ಬಹು–ರಾಜ್ಯ ಸಹಕಾರಿ ಸೊಸೈಟಿಯನ್ನಾಗಿ ಪರಿವರ್ತಿಸಲಾಗಿದೆ ಎಂಬುದಾಗಿ ಭಾವಿಸತಕ್ಕದ್ದಲ್ಲ.

(3) ಕೇಂದ್ರ ರಿಜಿಸ್ಟ್ರಾರನು, ತಾನು ಸಹಿ ಮಾಡಿರುವ ಪ್ರಮಾಣಪತ್ರದೊಂದಿಗೆ ನೋಂದಣಿ ಮಾಡಿದ ತಿದ್ದುಪಡಿಯ ಪ್ರತಿಯನ್ನು ಸಹಕಾರಿ ಸೊಸೈಟಿಗೆ ಕಳುಹಿಸತಕ್ಕದ್ದು ಮತ್ತು ಅಂಥ ಪ್ರಮಾಣ ಪತ್ರವು ತಿದ್ದುಪಡಿಯನ್ನು ನೋಂದಣಿ ಮಾಡಿರುವುದಕ್ಕೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.

(4) ಕೇಂದ್ರ ರಿಜಿಸ್ಟ್ರಾರನು ಸಹಕಾರಿ ಸೊಸೈಟಿಯ ಉಪ–ವಿಧಿಗಳ ತಿದ್ದುಪಡಿಯನ್ನು ನೋಂದಣಿ ಮಾಡಲು ನಿರಾಕರಿಸಿದರೆ ಅವನು ನಿರಾಕರಣೆಯ ಆದೇಶವನ್ನು ಅದರ ಕಾರಣಗಳೊಂದಿಗೆ ಅಂಥ ನಿರಾಕರಣೆಯ ದಿನಾಂಕದಿಂದ ಏಳು ದಿನಗಳೊಳಗಾಗಿ ನಿಯಮಿಸಲಾದ ರೀತಿಯಲ್ಲಿ ಸೊಸೈಟಿಗೆ ತಿಳಿಸತಕ್ಕದ್ದು.

(5) (ಎ) ಕೇಂದ್ರ ರಿಜಿಸ್ಟ್ರಾರನು ಆ ಉಪ–ವಿಧಿಗಳ ತಿದ್ದುಪಡಿಯನ್ನು ಒಮ್ಮೆ ನೋಂದಣಿ ಮಾಡಿದ್ದರೆ, ಆ ಸಹಕಾರಿ ಸೊಸೈಟಿಯು ತಿದ್ದುಪಡಿಯನ್ನು ನೋಂದಣಿ ಮಾಡಿದ ದಿನಾಂಕದಿಂದ ಅದು ಬಹು–ರಾಜ್ಯ ಸಹಕಾರಿ ಸೊಸೈಟಿಯಾಗಿರತಕ್ಕದ್ದು.

(ಬಿ) ಕೇಂದ್ರ ರಿಜಿಸ್ಟ್ರಾರನು, ಈ ಅಧಿನಿಯಮದ ಮೇರೆಗೆ ಅಂಥ ಸೊಸೈಟಿಯನ್ನು ಬಹು–ರಾಜ್ಯ ಸಹಕಾರಿ ಸೊಸೈಟಿ ಎಂಬುದಾಗಿ ನೋಂದಣಿ ಮಾಡಲಾಗಿದೆ ಎಂಬ ಬಗ್ಗೆ ಅವನು ಸಹಿ ಮಾಡಿದ ಪ್ರಮಾಣ ಪತ್ರವನ್ನು ಸಹಕಾರಿ ಸೊಸೈಟಿಗೆ ಕಳುಹಿಸತಕ್ಕದ್ದು ಮತ್ತು ಸಂಬಂಧಿಸಿದ ರಾಜ್ಯದ ಸಹಕಾರಿ ಸೊಸೈಟಿಗಳ ರಿಜಿಸ್ಟ್ರಾರರಿಗೆ ಅದರ ಒಂದು ಪ್ರತಿಯನ್ನು ಕಳುಹಿಸತಕ್ಕದ್ದು.

(ಸಿ) (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಸಹಕಾರಿ ಸೊಸೈಟಿಗಳ ರಿಜಿಸ್ಟ್ರಾರನು ತದನಂತರ ಆ ಸೊಸೈಟಿಯು, ಕೇಂದ್ರ ರಿಜಿಸ್ಟ್ರಾರನು ನೋಂದಣಿ ಮಾಡಿದ ದಿನಾಂಕದಿಂದ ಆ ರಾಜ್ಯದಲ್ಲಿ ಜಾರಿಯಲ್ಲಿರುವ ಸಹಕಾರಿ ಸೊಸೈಟಿಗಳಿಗೆ ಸಂಬಂಧಿಸಿದ ಕಾನೂನಿನ ಮೇರೆಗೆ ಸೊಸೈಟಿಯಾಗಿರುವುದು ನಿಂತುಹೋಗಿದೆ ಎಂಬುದಾಗಿ ಆ ಸೊಸೈಟಿಗೆ ನಿರ್ದೇಶಿಸುವ ಆದೇಶವನ್ನು ಮಾಡತಕ್ಕದ್ದು.

## ಅಧ್ಯಾಯ – III

## ಸಹಕಾರಿ ಮಹಾ ಮಂಡಳದ ನೋಂದಣಿ ಮತ್ತು ಪ್ರಕಾರ್ಯಗಳು

**23. ಸಹಕಾರಿ ಮಹಾಮಂಡಳದ ನೋಂದಣಿ.–** (1) ಪ್ರತಿಯೊಂದು ಸಹಕಾರಿ ಮಹಾಮಂಡಳವು ಈ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ನೋಂದಣಿ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.

(2) ಪ್ರತಿಯೊಂದು ಸಹಕಾರಿ ಮಹಾ ಮಂಡಳವು ತನ್ನ ಸಾಮಾನ್ಯ ಸಭೆಯಲ್ಲಿ ತನ್ನ ಸದಸ್ಯ ಸಹಕಾರಿ ಸೊಸೈಟಿಯಿಂದ ಪ್ರತಿನಿಧಿತವಾಗತಕ್ಕದ್ದು.

(3) ಸಹಕಾರಿ ಮಹಾ ಮಂಡಳದ ವರ್ಗೀಕರಣ ಮತ್ತು ಅದಕ್ಕೆ ಅನ್ವಯವಾಗುವ ಇತರ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(4) ಬಹು–ರಾಜ್ಯ ಸಹಕಾರಿ ಸೊಸೈಟಿಗೆ ಅನ್ವಯವಾಗುವ ಈ ಅಧಿನಿಯಮದ ಎಲ್ಲ ಉಪಬಂಧಗಳು, ಸಾಧ್ಯವಾಗುವಷ್ಟರ ಮಟ್ಟಿಗೆ ಸಹಕಾರಿ ಮಹಾ ಮಂಡಳಕ್ಕೆ ಅನ್ವಯವಾಗತಕ್ಕದ್ದು.

**24. ಸಹಕಾರಿ ಮಹಾಮಂಡಳದ ಪ್ರಕಾರ್ಯಗಳು.–** (1) ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿಗೊಳಪಟ್ಟು, ಸಹಕಾರಿ ಮಹಾ ಮಂಡಳವು, ಸಹಕಾರಿ ಸೊಸೈಟಿಗಳು ಸ್ವ–ಸಹಾಯ ಮತ್ತು ಪರಸ್ಪರ ನೆರವನ್ನು ಆಧರಿಸಿದ ಸಹಕಾರಿ ಮಹಾಮಂಡಳವಾಗಿ ಅಥವಾ ಬಹು–ರಾಜ್ಯ ಸಹಕಾರಿ ಮಹಾ ಮಂಡಳವಾಗಿ ಸ್ವಯಂ ರಚನೆಗೊಳ್ಳಲು ಮತ್ತು ಪ್ರಜಾಸತ್ತಾತ್ಮಕವಾಗಿ ಕಾರ್ಯ ನಿರ್ವಹಿಸಲು ಅನುಕೂಲವಾಗುವಂತೆ ಅದರ ಪ್ರಕಾರ್ಯಗಳನ್ನು ನಿರ್ವಹಿಸಬಹುದು.

(2) (1)ನೇ ಉಪಪ್ರಕರಣದಲ್ಲಿ ಒಳಗೊಂಡ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಸಹಕಾರಿ ಮಹಾಮಂಡಳವು,–

(ಎ) ಅದು ಸಹಕಾರಿ ತತ್ವಗಳನ್ನು ಪಾಲಿಸಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬಹುದು;

(ಬಿ) ಅದರ ಸದಸ್ಯ ಸಹಕಾರಿ ಸೊಸೈಟಿಗಳ ಪರಿಗಣನೆಗಾಗಿ ಮಾದರಿ ಉಪ–ವಿಧಿಗಳನ್ನು ಮತ್ತು ನೀತಿಗಳನ್ನು ರೂಪಿಸಬಹುದು;

(ಸಿ) ವಿಶೇಷ ತರಬೇತಿ, ಶಿಕ್ಷಣ ಮತ್ತು ದತ್ತಾಂಶದ ಮಾಹಿತಿಯನ್ನು ಒದಗಿಸಬಹುದು;

(ಡಿ) ಸಂಶೋಧನೆ, ಮೌಲ್ಯ ನಿರ್ಧರಣೆ ಕೈಗೊಳ್ಳುವುದು ಮತ್ತು ಅದರ ಸದಸ್ಯ ಸಹಕಾರಿ ಸೊಸೈಟಿಗಳಿಗೆ ವಾಸ್ತವಿಕ ದೃಷ್ಟಿ ಆಧಾರಿತ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುವಲ್ಲಿ ಸಹಾಯ ಮಾಡಬಹುದು;

(ಇ) ಸದಸ್ಯ ಸಹಕಾರಿ ಸೊಸೈಟಿ ನಡುವೆ ಸೌಹಾರ್ದಯುತ ಸಂಬಂಧವನ್ನು ರೂಪಿಸಬಹುದು;

(ಎಫ್) ಸಹಕಾರಿ ಸದಸ್ಯ ಸೊಸೈಟಿಗಳು ವಿವಾದಗಳನ್ನು ತಮ್ಮ–ತಮ್ಮಲೇ ಬಗೆಹರಿಸಿಕೊಳ್ಳಲು ಸಹಾಯ ಮಾಡುವುದು;

(ಜಿ) ಸದಸ್ಯ ಸಹಕಾರಿ ಸೊಸೈಟಿಯ ಸಾಮಾನ್ಯ ಸಭೆಯ ಅಥವಾ ಮಂಡಳಿಯ ನಿರ್ಣಯದಿಂದ ಅಥವಾ ಅದರ ಮೇರೆಗೆ ಅಥವಾ ಅದರ ಉಪ-ವಿಧಿಗಳಿಂದ ವಿಶೇಷವಾಗಿ ಅಗತ್ಯಪಡಿಸಿದರೆ ಅದರ ಸದಸ್ಯ ಸಹಕಾರಿ ಸೊಸೈಟಿಯ ಪರವಾಗಿ ವ್ಯವಹಾರ ಸೇವೆಗಳನ್ನು ಕೈಗೊಳ್ಳಬಹುದು;

(ಎಚ್) ಸದಸ್ಯ ಸಹಕಾರಿ ಸೊಸೈಟಿಗೆ ವ್ಯವಸ್ಥಾಪನೆ ಅಭಿವೃದ್ಧಿ ಸೇವೆಗಳನ್ನು ಒದಗಿಸಬಹುದು;

(ಐ) ಸದಸ್ಯ ಸಹಕಾರಿ ಸೊಸೈಟಿಯು ಪಾಲಿಸುವುದಕ್ಕಾಗಿ ನೀತಿ ಸಂಹಿತೆಯನ್ನು ರೂಪಿಸಬಹುದು;

(ಜೆ) ಸದಸ್ಯ ಸಹಕಾರಿ ಸೊಸೈಟಿಗೆ ಕಾರ್ಯಸಾಧ್ಯ ಮಾದರಿ ಸೂತ್ರಗಳನ್ನು ರೂಪಿಸಬಹುದು;

(ಕೆ) ಸದಸ್ಯ ಸಹಕಾರಿ ಸೊಸೈಟಿಗೆ ಕಾನೂನು ನೆರವು ಮತ್ತು ಸಲಹೆಗಳನ್ನು ಒದಗಿಸಬಹುದು;

(ಎಲ್) ಸ್ವ-ಸಹಾಯ ಸಂಘಟನೆಯಲ್ಲಿ ಸದಸ್ಯ ಸಹಕಾರಿ ಸೊಸೈಟಿಗೆ ನೆರವಾಗಬಹುದು;

(ಎಂ) ಮಾರುಕಟ್ಟೆ ಮಾಹಿತಿ ಪದ್ಧತಿಯನ್ನು ಅಭಿವೃದ್ಧಿಪಡಿಸಬಹುದು, ಲಾಂಛನ ಚಿಹ್ನೆಗೆ ಉತ್ತೇಜನ ನೀಡಬಹುದು, ಗುಣಮಟ್ಟ ನಿಯಂತ್ರಣ ಮತ್ತು ತಂತ್ರಜ್ಞಾನವನ್ನು ಮೇಲ್ದರ್ಜೆಗೆ ಏರಿಸಬಹುದು

– ಮುಂತಾದವನ್ನು ಮಾಡಬಹುದು.

## ಅಧ್ಯಾಯ – IV

## ಬಹು-ರಾಜ್ಯ ಸಹಕಾರಿ ಸೊಸೈಟಿಗಳ ಸದಸ್ಯರು ಮತ್ತು ಅವರ ಕರ್ತವ್ಯಗಳು, ಹಕ್ಕುಗಳು ಮತ್ತು ಹೊಣೆಗಾರಿಕೆಗಳು

**25. ಯಾವ ವ್ಯಕ್ತಿಗಳು ಸದಸ್ಯರಾಗಬಹುದು.–** (1) ಈ ಮುಂದಿನವರನ್ನು ಎಂದರೆ,–

(ಎ) ಭಾರತ ಕರಾರು ಅಧಿನಿಯಮ, 1872 (1872ರ 9)ರ 11ನೇ ಪ್ರಕರಣದ ಮೇರೆಗೆ ಕರಾರು ಮಾಡಿಕೊಳ್ಳಲು ಸಕ್ಷಮನಾದ ವ್ಯಕ್ತಿ;

(ಬಿ) ಯಾವುದೇ ಬಹು-ರಾಜ್ಯ ಸಹಕಾರಿ ಸೊಸೈಟಿ ಅಥವಾ ಯಾವುದೇ ಸಹಕಾರಿ ಸೊಸೈಟಿ;

(ಸಿ) ಕೇಂದ್ರ ಸರ್ಕಾರ;

(ಡಿ) ರಾಜ್ಯ ಸರ್ಕಾರ;

(ಇ) ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ ಅಧಿನಿಯಮ, 1962 (1962ರ 26)ರ ಮೇರೆಗೆ ಸ್ಥಾಪಿಸಲಾದ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ;

(ಎಫ್) ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಇತರ ನಿಗಮ;

(ಜಿ) ಕಂಪನಿಗಳ ಅಧಿನಿಯಮ, 1956ರ 617ನೇ ಪ್ರಕರಣದಲ್ಲಿ ಪರಿಭಾಷಿಸಲಾದಂತೆ ಸರ್ಕಾರದ ಯಾವುದೇ ಕಂಪನಿ;

(ಎಚ್) ಬಹು-ರಾಜ್ಯ ಸಹಕಾರಿ ಸೊಸೈಟಿಯ ಸ್ವರೂಪಕ್ಕೆ ಮತ್ತು ಚಟುವಟಿಕೆಗಳಿಗೆ ಗಮನ ನೀಡಿ ಕೇಂದ್ರ ರಿಜಿಸ್ಟ್ರಾರನು ಅನುಮತಿಸಬಹುದಾದ ಅಂಥ ವರ್ಗ ಅಥವಾ ವರ್ಗಗಳು ಅಥವಾ ವ್ಯಕ್ತಿಗಳು ಅಥವಾ ವ್ಯಕ್ತಿಗಳ ಸಂಘ

-ಇವರುಗಳನ್ನು ಹೊರತುಪಡಸಿ ಬೇರೆ ಯಾರೇ ವ್ಯಕ್ತಿಗಳನ್ನು ಬಹು-ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯರನ್ನಾಗಿ ಸೇರಿಸಿಕೊಳ್ಳತಕ್ಕದ್ದಲ್ಲ.

(2) ಯಾರೇ ವ್ಯಕ್ತಿಯು ರಾಷ್ಟ್ರೀಯ ಸಹಕಾರಿ ಸೊಸೈಟಿಯ ಅಥವಾ ಸಹಕಾರಿ ಮಹಾ ಮಂಡಳದ ಸದಸ್ಯನಾಗಿ ಪ್ರವೇಶ ಪಡೆಯಲಿಕ್ಕೆ ಅರ್ಹನಾಗಿರತಕ್ಕದ್ದಲ್ಲ.

(3) ಬಹು-ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯತ್ವಕ್ಕೆ ಅರ್ಹತೆ ಪಡೆದ ಯಾರೇ ವ್ಯಕ್ತಿಯನ್ನು, ಅವನ ಅರ್ಜಿಯ ಮೇಲೆ, ಅಂಥ ಸೊಸೈಟಿಯು ಸದಸ್ಯನೆಂದು ಪ್ರವೇಶ ನೀಡಬಹುದು.

(4) ಬಹು-ರಾಜ್ಯ ಸಹಕಾರಿ ಸೊಸೈಟಿಯ ಒಬ್ಬ ಸದಸ್ಯನಾಗಿ ಪ್ರವೇಶ ಪಡೆಯಲು ಸಲ್ಲಿಸಿದ ಪ್ರತಿಯೊಂದು ಅರ್ಜಿಯನ್ನು, ಆ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ನಾಲ್ಕು ತಿಂಗಳುಗಳ ಅವಧಿಯೊಳಗಾಗಿ ಅಂಥ ಸೊಸೈಟಿಯು ವಿಲೇ ಮಾಡತಕ್ಕದ್ದು ಮತ್ತು ಸಲ್ಲಿಸಿದ ಆ ಅರ್ಜಿಯ ಮೇಲೆ ಅಂಥ ಸೊಸೈಟಿಯು ಕೈಗೊಂಡ ತೀರ್ಮಾನವನ್ನು ಅಂಥ ತೀರ್ಮಾನದ ದಿನಾಂಕದಿಂದ ಹದಿನೈದು ದಿವಸಗಳೊಳಗಾಗಿ ಅರ್ಜಿದಾರನಿಗೆ ತಿಳಿಸತಕ್ಕದ್ದು:

ಪರಂತು, ಮೇಲೆ ಹೇಳಿದ ಅವಧಿಯೊಳಗಾಗಿ ಅರ್ಜಿಯನ್ನು ವಿಲೇ ಮಾಡದಿದ್ದರೆ ಅಥವಾ ಮೇಲೆ ಹೇಳಿದ ನಾಲ್ಕು ತಿಂಗಳ ಅವಧಿಯು ಮುಕ್ತಾಯವಾದ ಹದಿನೈದು ದಿವಸಗಳೊಳಗಾಗಿ ತೀರ್ಮಾನವನ್ನು ತಿಳಿಸದಿದ್ದರೆ, ಬಹು-ರಾಜ್ಯ ಸಹಕಾರಿ ಸೊಸೈಟಿಯು ಅಂಥ ಅವಧಿಯು ಮುಕ್ತಾಯವಾದ ದಿನಾಂಕದಂದು, ಅರ್ಜಿದಾರನಿಗೆ ಪ್ರವೇಶವನ್ನು ನಿರಾಕರಿಸುವ ತೀರ್ಮಾನವನ್ನು ತೆಗೆದುಕೊಂಡಿರುವುದಾಗಿ ಭಾವಿಸತಕ್ಕದ್ದು.

(5) ಅಂಥ ಸೊಸೈಟಿಯನ್ನು ಬೆಳೆಸುವುದು ಮತ್ತು ಅದರ ಹಿತಾಸಕ್ತಿ ಮತ್ತು ಉದ್ದೇಶಗಳನ್ನು ಸಂರಕ್ಷಿಸುವುದು ಬಹು-ರಾಜ್ಯ ಸಹಕಾರಿ ಸೊಸೈಟಿಯ ಪ್ರತಿಯೊಬ್ಬ ಸದಸ್ಯನ ಕರ್ತವ್ಯವಾಗಿರತಕ್ಕದ್ದು.

**26. ಸೊಸೈಟಿಯ ನಾಮಮಾತ್ರ ಅಥವಾ ಸಹ-ಸದಸ್ಯ.-** ಬಹು-ರಾಜ್ಯ ಸಹಕಾರಿ ಸೊಸೈಟಿಯು ಅದರ ಉಪ-ವಿಧಿಗಳಲ್ಲಿ ಉಪಬಂಧ ಕಲ್ಪಿಸಿದ್ದರೆ, ವ್ಯಕ್ತಿಯನ್ನು ನಾಮಮಾತ್ರ ಅಥವಾ ಸಹ ಸದಸ್ಯನೆಂದು ಪ್ರವೇಶ ನೀಡಬಹುದು:

ಪರಂತು, ಅಂಥ ಯಾರೇ ನಾಮಮಾತ್ರ ಅಥವಾ ಸಹ ಸದಸ್ಯನು ಅಂಥ ಸೊಸೈಟಿಯ ಷೇರುಗಳಿಗೆ ವಂತಿಗೆ ನೀಡಲು ಅಥವಾ ಮಂಡಳಿಯ ನಿರ್ದೇಶಕನಾಗಿ ಮತ ನೀಡುವ, ಆಯ್ಕೆಯಾಗುವ ಅಥವಾ ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸುವ ಹಕ್ಕೂ ಸೇರಿದಂತೆ ಅದರ ಆಡಳಿತ ಮಂಡಳಿಯಲ್ಲಿ ಯಾವುದೇ ಹಿತಾಸಕ್ತಿಯನ್ನು ಹೊಂದಿರಲು ಹಕ್ಕುಳ್ಳವನಾಗತಕ್ಕದ್ದಲ್ಲ.

**27. ಸದಸ್ಯರಿಗೆ ಶೈಕ್ಷಣಿಕ ತರಗತಿಗಳು.-** (1) ಪ್ರತಿಯೊಂದು ಬಹು-ರಾಜ್ಯ ಸಹಕಾರಿ ಸೊಸೈಟಿಯು ತನ್ನ ಸದಸ್ಯರು, ನಿರ್ದೇಶಕರು ಮತ್ತು ನೌಕರರಿಗಾಗಿ ಸಹಕಾರಿ ಶಿಕ್ಷಣ ಕಾರ್ಯಕ್ರಮಗಳನ್ನು ಏರ್ಪಡಿಸತಕ್ಕದ್ದು.

(2) ಪ್ರತಿಯೊಂದು ಬಹು-ರಾಜ್ಯ ಸಹಕಾರಿ ಸೊಸೈಟಿಯು ಅಂಥ ಸಹಕಾರಿ ಶಿಕ್ಷಣ ಕಾರ್ಯಕ್ರಮಗಳಿಗಾಗಿ ಹಣವನ್ನು ಒದಗಿಸಬಹುದು.

**28. ಸದಸ್ಯರು ಬಾಕಿಯಿರುವ ಸಂದಾಯವನ್ನು ಮಾಡುವವರೆಗೆ ಹಕ್ಕನ್ನು ಚಲಾಯಿಸತಕ್ಕದ್ದಲ್ಲ.–** ಬಹು–ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯನು ಉಪ–ವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಸದಸ್ಯತ್ವದ ಸಂಬಂಧದಲ್ಲಿ ಸೊಸೈಟಿಗೆ ಸಂದಾಯವನ್ನು ಮಾಡಿದ ಅಥವಾ ಸೊಸೈಟಿಯಲ್ಲಿ ಅಂಥ ಹಿತಾಸಕ್ತಿಯನ್ನು ಆರ್ಜಿಸಿದ ಹೊರತು ಸದಸ್ಯನ ಹಕ್ಕುಗಳನ್ನು ಚಲಾಯಿಸತಕ್ಕದ್ದಲ್ಲ.

**29. ಬಹು–ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯನ ಅನರ್ಹತೆಗಳು.–** ಒಬ್ಬ ವ್ಯಕ್ತಿಯು,–

(ಎ) ಅವನ ವ್ಯವಹಾರವು ಅಂಥ ಬಹು–ರಾಜ್ಯ ಸಹಕಾರಿ ಸೊಸೈಟಿಯ ವ್ಯವಹಾರಗಳಿಗೆ ವಿರುದ್ಧವಾದುದಾಗಿದ್ದರೆ ಅಥವಾ ಸ್ಪರ್ಧಾತ್ಮಕವಾದುದಾಗಿದ್ದರೆ; ಅಥವಾ

(ಬಿ) ಅವನು, ಅನುಕ್ರಮವಾಗಿ ಬರುವ ಎರಡು ವರ್ಷಗಳಲ್ಲಿ ಉಪ–ವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಪ್ರಮಾಣಕ್ಕಿಂತ ಕಡಿಮೆ ಸೇವೆಯನ್ನು ಬಳಸಿಕೊಂಡಿದ್ದರೆ; ಅಥವಾ

(ಸಿ) ಅವನು ಬಹು–ರಾಜ್ಯ ಸಹಕಾರಿ ಸೊಸೈಟಿಯ ಮೂರು ಅನುಕ್ರಮ ಸಾಮಾನ್ಯ ಸಭೆಗಳಿಗೆ ಹಾಜರಾಗದಿದ್ದರೆ ಮತ್ತು ಸದಸ್ಯರು ಸಾಮಾನ್ಯ ಸಭೆಗಳಲ್ಲಿ ಅಂಥ ಗೈರು ಹಾಜರಿಯನ್ನು, ಮನ್ನಾ ಮಾಡಿರದಿದ್ದರೆ; ಅಥವಾ

(ಡಿ) ಅವನು ಬಹು–ರಾಜ್ಯ ಸಹಕಾರಿ ಸೊಸೈಟಿಗೆ ಅಂಥ ಸೊಸೈಟಿಯ ಉಪ–ವಿಧಿಗಳ ಮೇರೆಗೆ ಸಂದಾಯ ಮಾಡಬೇಕಾದ ಯಾವುದೇ ಮೊಬಲಗನ್ನು ಸಂದಾಯ ಮಾಡಲು ತಪ್ಪಿದ್ದರೆ

– ಆತನು ಬಹು–ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯನಾಗಿರುವುದಕ್ಕೆ ಅರ್ಹನಾಗಿರತಕ್ಕದ್ದಲ್ಲ.

**30. ಸದಸ್ಯರ ಉಚ್ಚಾಟನೆ.–** (1) ಬಹು–ರಾಜ್ಯ ಸಹಕಾರಿ ಸೊಸೈಟಿಯು, ಈ ಉದ್ದೇಶಕ್ಕಾಗಿ ನಡೆದ ಸದಸ್ಯರ ಸಾಮಾನ್ಯ ಸಭೆಯಲ್ಲಿ ಹಾಜರಿರುವ ಮತ್ತು ಮತ ನೀಡುವ ಸದಸ್ಯರ ಮೂರನೇ ಎರಡರಷ್ಟಕ್ಕಿಂತ ಕಡಿಮೆಯಲ್ಲದ ಬಹುಮತದಿಂದ ಅಂಗೀಕರಿಸಲಾದ ನಿರ್ಣಯದ ಮೂಲಕ ಸೊಸೈಟಿಯ ಯುಕ್ತ ಕಾರ್ಯನಿರ್ವಹಣೆಗೆ ಹಾನಿ ಉಂಟುಮಾಡುವಂಥ ಕೃತ್ಯಗಳಿಗಾಗಿ ಸದಸ್ಯನನ್ನು ಉಚ್ಚಾಟಿಸಬಹುದು:

ಪರಂತು, ಈ ವಿಷಯದಲ್ಲಿ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವನಿಗೆ ಯುಕ್ತ ಅವಕಾಶವನ್ನು ಕೊಟ್ಟ ಹೊರತು ಸಂಬಂಧಪಟ್ಟ ಸದಸ್ಯನನ್ನು ಉಚ್ಚಾಟಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಮೇರೆಗೆ ಉಚ್ಚಾಟಿಸಲಾದ ಬಹು–ರಾಜ್ಯ ಸಹಕಾರಿ ಸೊಸೈಟಿಯ ಯಾರೇ ಸದಸ್ಯನು ಹಾಗೆ ಉಚ್ಚಾಟಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಆ ಸೊಸೈಟಿಯ ಸದಸ್ಯನಾಗಿ ಮರು ಪ್ರವೇಶ ಪಡೆಯುವುದಕ್ಕೆ ಅರ್ಹನಾಗಿರತಕ್ಕದ್ದಲ್ಲ.

**31. ಸದಸ್ಯರ ಮತ.–** ಬಹುರಾಜ್ಯ ಸಹಕಾರಿ ಸೊಸೈಟಿಯ ಪ್ರತಿಯೊಬ್ಬ ಸದಸ್ಯನು, ಅಂಥ ಸೊಸೈಟಿಯ ನೌಕರನಾಗಿರುವ ಸದಸ್ಯನೂ ಸೇರಿದಂತೆ ಸೊಸೈಟಿಯ ವ್ಯವಹಾರಗಳಲ್ಲಿ ಒಂದು ಮತವನ್ನು ಹೊಂದಿರತಕ್ಕದ್ದು:

ಪರಂತು,–

(ಎ) ಅಂಥ ಸೊಸೈಟಿಯ ಒಬ್ಬ ನೌಕರನಾಗಿರುವ ಒಬ್ಬ ಸದಸ್ಯನು,–

(i) ಅಂಥ ಸೊಸೈಟಿಯ ಮಂಡಳಿಯ ಸದಸ್ಯನ ಚುನಾವಣೆಯಲ್ಲಿ;

(ii) ಅಂಥ ಸೊಸೈಟಿಯ ಉಪ-ವಿಧಿಗಳನ್ನು ಅಥವಾ ಅದಕ್ಕೆ ಯಾವುದೇ ತಿದ್ದುಪಡಿಯನ್ನು ರಚಿಸುವುದಕ್ಕೆ ಕರೆಯಲಾದ ಯಾವುದೇ ಸಾಮಾನ್ಯ ಸಭೆಯಲ್ಲಿ

– ಮತನೀಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ;

(ಬಿ) ಮತಗಳು ಸಮಾನವಾಗಿ ಬಂದ ಸಂದರ್ಭದಲ್ಲಿ ಅಧ್ಯಕ್ಷನು ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು;

(ಸಿ) 25ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಯಿಂದ (ಜಿ) ಖಂಡಗಳಲ್ಲಿ ಉಲ್ಲೇಖಿಸಲಾದ ಪ್ರಾಧಿಕಾರಗಳು, ಬಹು-ರಾಜ್ಯ ಸಹಕಾರಿ ಸೊಸೈಟಿ ಅಥವಾ ಸಹಕಾರಿ ಸೊಸೈಟಿಯು – ಇವುಗಳ ಪೈಕಿ ಯಾವುದೇ ಒಂದು ಬಹು-ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯನಾಗಿದ್ದರೆ ಈ ಅಧಿನಿಯಮ ಮತ್ತು ನಿಯಮಗಳಲ್ಲಿ ಒಳಗೊಂಡಿರುವ ಉಪಬಂಧಗಳಿಗನುಸಾರವಾಗಿ ಅಂಥ ಪ್ರಾಧಿಕಾರವು ಅಥವಾ ಸೊಸೈಟಿಯು ಮಂಡಲಿಗೆ ನಾಮ ನಿರ್ದೇಶನ ಮಾಡಿದ ಪ್ರತಿಯೊಬ್ಬ ವ್ಯಕ್ತಿಯು ಒಂದು ಮತವನ್ನು ಹೊಂದಿರತಕ್ಕದ್ದು;

(ಡಿ) ಯಾವ ಬಹು-ರಾಜ್ಯ ಸಹಕಾರಿ ಸೊಸೈಟಿಗೆ ಸಹಕಾರಿ ಸೊಸೈಟಿಗಳ ಅಥವಾ ಬಹು-ರಾಜ್ಯ ಸಹಕಾರಿ ಸೊಸೈಟಿಗಳ ಸದಸ್ಯತ್ವವನ್ನು ಹೊಂದಿದೆಯೋ ಆ ಬಹು-ರಾಜ್ಯ ಸಹಕಾರಿ ಸೊಸೈಟಿಯು ತನ್ನ ಉಪ-ವಿಧಿಗಳಲ್ಲಿ, ಅಂಥ ಸಹಕಾರಿ ಸೊಸೈಟಿಗಳ ಅಥವಾ ಬಹು-ರಾಜ್ಯ ಸಹಕಾರಿ ಸೊಸೈಟಿಗಳ ಸದಸ್ಯತ್ವವನ್ನು ಮತ್ತು ಅವು ನಡೆಸುವ ವ್ಯವಹಾರದ ವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡು ನ್ಯಾಯಸಮ್ಮತ ಮತದಾನದ ವ್ಯವಸ್ಥೆಗೆ ಉಪಬಂಧ ಕಲ್ಪಿಸಬಹುದು.

**32. ಮತ ಚಲಾಯಿಸುವ ರೀತಿ.-** ಬಹು-ರಾಜ್ಯ ಸಹಕಾರಿ ಸೊಸೈಟಿಯ ಪ್ರತಿಯೊಬ್ಬ ಸದಸ್ಯನು ತನ್ನ ಮತವನ್ನು ಖುದ್ದಾಗಿ ಚಲಾಯಿಸತಕ್ಕದ್ದು ಮತ್ತು ಯಾರೇ ಸದಸ್ಯನಿಗೆ, ತನ್ನ ಮತವನ್ನು ಪ್ರತಿನಿಧಿ ಮೂಲಕ ಚಲಾಯಿಸಲು ಅನುಮತಿ ನೀಡತಕ್ಕದ್ದಲ್ಲ:

ಪರಂತು, 38ನೇ ಪ್ರಕರಣದ (3)ನೇ ಉಪಪ್ರಕರಣದ ಉಪಬಂಧಗಳಿಗೆ ಮತ್ತು ನಿಯಮಗಳಿಗೆ ಒಳಪಟ್ಟು ಯಾವುದೇ ಇತರ ಬಹು-ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯರಾಗಿರುವಂಥ ಬಹು-ರಾಜ್ಯ ಸಹಕಾರಿ ಸೊಸೈಟಿಯು ಅಥವಾ ಸಹಕಾರಿ ಸೊಸೈಟಿಯು ಅಥವಾ ಯಾವುದೇ ಇತರ ಸಂಸ್ಥೆಯು ಅಂಥ ಬಹು-ರಾಜ್ಯ ಸಹಕಾರಿ ಸೊಸೈಟಿಯ ವ್ಯವಹಾರಗಳಲ್ಲಿ ತನ್ನ ಪರವಾಗಿ ಮತ ನೀಡಲು ತನ್ನ ಪ್ರತಿನಿಧಿಗಳನ್ನು ನೇಮಕ ಮಾಡಬಹುದು.

**33. ಷೇರುಗಳನ್ನು ಹೊಂದುವುದರ ಮೇಲೆ ನಿರ್ಬಂಧ.-** 25ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಯಿಂದ (ಜಿ) ಖಂಡಗಳಲ್ಲಿ ಉಲ್ಲೇಖಿಸಿದ ಪ್ರಾಧಿಕಾರಗಳನ್ನು ಹೊರತುಪಡಿಸಿ, ಯಾರೇ ಸದಸ್ಯ ಅಥವಾ ಬಹು-ರಾಜ್ಯ ಸಹಕಾರಿ ಸೊಸೈಟಿಯು ಅಥವಾ ಸಹಕಾರಿ ಸೊಸೈಟಿಯು, ಸೊಸೈಟಿಯ ಒಟ್ಟು ಬಂಡವಾಳದಲ್ಲಿ, ಅಂಥ ಬಹು-ರಾಜ್ಯ ಸಹಕಾರಿ ಸೊಸೈಟಿಯ ನಿಯಮಗಳಲ್ಲಿ ಅಥವಾ ಉಪ-ವಿಧಿಗಳಲ್ಲಿ ನಿಯಮಿಸಬಹುದಾದದುಕ್ಕಿಂತ ಹೆಚ್ಚು ಭಾಗದಷ್ಟು ಷೇರನ್ನು (ಯಾವುದೇ ಸಂದರ್ಭದಲ್ಲಿಯೂ ಅದರ ಐದನೇ ಒಂದರಷ್ಟನ್ನು ಮೀರದಂತೆ) ಹೊಂದಿರತಕ್ಕದ್ದಲ್ಲ.

**34. ಷೇರುಗಳ ಅಥವಾ ಹಿತಾಸಕ್ತಿಯ ವರ್ಗಾವಣೆಯ ಮೇಲೆ ನಿರ್ಬಂಧ.–** ಬಹು–ರಾಜ್ಯ ಸಹಕಾರಿ ಸೊಸೈಟಿಯ ಬಂಡವಾಳದಲ್ಲಿ ಸದಸ್ಯನ ಷೇರು ಅಥವಾ ಹಿತಾಸಕ್ತಿಯ ವರ್ಗಾವಣೆಯು 33ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ಗರಿಷ್ಠವಾಗಿ ಹೊಂದಬಹುದಾದ ಮಿತಿಗೆ ಸಂಬಂಧಿಸಿದ ಷರತ್ತುಗಳಿಗೊಳಪಟ್ಟಿರತಕ್ಕದ್ದು.

**35. ಷೇರುಗಳನ್ನು ವಾಪಸ್ಸು ತೆಗೆದುಕೊಳ್ಳುವುದು.–** (1) 25ನೇ ಪ್ರಕರಣದ 1ನೇ ಉಪಪ್ರಕರಣದ (ಸಿ) ಯಿಂದ (ಜಿ) ವರೆಗಿನ ಖಂಡಗಳಲ್ಲಿ ಉಲ್ಲೇಖಿಸಿದ ಯಾವುದೇ ಪ್ರಾಧಿಕಾರಗಳ ಪೈಕಿ ಯಾವುದೇ ಪ್ರಾಧಿಕಾರವು, ಬಹು–ರಾಜ್ಯ ಸಹಕಾರಿ ಸೊಸೈಟಿಯಲ್ಲಿ ಹೊಂದಿರುವ ಷೇರುಗಳು ಅಂಥ ಬಹು–ರಾಜ್ಯ ಸಹಕಾರಿ ಸೊಸೈಟಿಯ ಉಪ–ವಿಧಿಗಳಿಗೆ ಅನುಸಾರವಾಗಿ ಮತ್ತು ಉಪ–ವಿಧಿಗಳು ಈ ಸಂಬಂಧದಲ್ಲಿ ಯಾವುದೇ ಉಪಬಂಧವನ್ನು ಒಳಗೊಂಡಿರದ ಸಂದರ್ಭದಲ್ಲಿ, ಬಹು–ರಾಜ್ಯ ಸಹಕಾರಿ ಸೊಸೈಟಿಯ ಮತ್ತು ಅಂಥ ಪ್ರಾಧಿಕಾರವು ಪರಸ್ಪರ ಒಪ್ಪಿಕೊಂಡ ರೀತಿಯಲ್ಲಿ ವಾಪಸ್ಸು ಪಡೆಯುವಂಥವು ಆಗಿರತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಷೇರುಗಳನ್ನು ವಾಪಸ್ಸು ತೆಗೆದುಕೊಳ್ಳುವುದು ಷೇರುಗಳ ಮುಖ ಬೆಲೆಯನ್ನು ಆಧರಿಸಿರತಕ್ಕದ್ದು.

**36. ಸದಸ್ಯರ ಮರಣಾನಂತರ ಹಿತಾಸಕ್ತಿಯ ವರ್ಗಾವಣೆ.–** (1) ಸದಸ್ಯನು ಮರಣ ಹೊಂದಿದ ನಂತರ ಬಹು–ರಾಜ್ಯ ಸಹಕಾರಿ ಸೊಸೈಟಿಯು ಈ ಸಂಬಂಧದಲ್ಲಿ ರಚಿಸಿದ ಉಪ–ವಿಧಿಗಳಿಗೆ ಅನುಸಾರವಾಗಿ ನಾಮ ನಿರ್ದೇಶಿತ ವ್ಯಕ್ತಿಗೆ ಅಥವಾ ಹಾಗೆ ಯಾರೇ ವ್ಯಕ್ತಿಯನ್ನು ನಾಮ ನಿರ್ದೇಶನ ಮಾಡಿರದಿದ್ದರೆ, ಮೃತ ಸದಸ್ಯನ ವಾರಸುದಾರ ಅಥವಾ ಕಾನೂನುಸಮ್ಮತ ಪ್ರತಿನಿಧಿಯೆಂದು ಮಂಡಳಿಗೆ ಕಂಡುಬರಬಹುದಾದ ವ್ಯಕ್ತಿಗೆ ಮೃತ ಸದಸ್ಯನ ಷೇರನ್ನು ಅಥವಾ ಹಿತಾಸಕ್ತಿಯನ್ನು ವರ್ಗಾವಣೆ ಮಾಡಬಹುದು. ಅಥವಾ ನಿಯಮಗಳ ಅನುಸಾರವಾಗಿ ಖಚಿತಪಡಿಸಿದಂತೆ ಅಂಥ ಸದಸ್ಯನ ಷೇರಿನ ಅಥವಾ ಹಿತಾಸಕ್ತಿಯ ಮೌಲ್ಯವನ್ನು ತೋರಿಸುವ ಮೊತ್ತವನ್ನು ಸಂದರ್ಭಾನುಸಾರ ಅಂಥ ನಾಮ ನಿರ್ದೇಶಿತನಿಗೆ ಅಥವಾ ವಾರಸುದಾರನಿಗೆ ಅಥವಾ ಕಾನೂನು ಸಮ್ಮತ ಪ್ರತಿನಿಧಿಗೆ ಸಂದಾಯ ಮಾಡಬಹುದು:

ಪರಂತು, ನಾಮ ನಿರ್ದೇಶಿತನ, ವಾರಸುದಾರನ ಅಥವಾ ಸಂದರ್ಭಾನುಸಾರ ಕಾನೂನು ಸಮ್ಮತ ಪ್ರತಿನಿಧಿಯ ಒಪ್ಪಿಗೆ ಇದ್ದ ಹೊರತು ಅಂಥ ವರ್ಗಾವಣೆಯನ್ನು ಅಥವಾ ಸಂದಾಯವನ್ನು ಮಾಡತಕ್ಕದ್ದಲ್ಲ.

(2) ಬಹು–ರಾಜ್ಯ ಸಹಕಾರಿ ಸೊಸೈಟಿಯು, ಮೃತ ಸದಸ್ಯನಿಗೆ ಬಾಕಿ ಇರುವ ಎಲ್ಲ ಇತರ ಹಣವನ್ನು ಸಕ್ಷಮ ನ್ಯಾಯಾಲಯದ ಆದೇಶದಿಂದ ತಡೆಹಿಡಿದ ಹೊರತು, ಸದಸ್ಯನ ಮರಣದ ಆರು ತಿಂಗಳೊಳಗಾಗಿ ಸಂದರ್ಭಾನುಸಾರವಾಗಿ, ಅಂಥ ನಾಮ ನಿರ್ದೇಶಿತನಿಗೆ, ವಾರಸುದಾರನಿಗೆ ಅಥವಾ ಕಾನೂನುಸಮ್ಮತ ಪ್ರತಿನಿಧಿಗೆ ಸಂದಾಯ ಮಾಡತಕ್ಕದ್ದು.

(3) ಈ ಪ್ರಕರಣದ ಉಪಬಂಧಗಳಿಗನುಸಾರವಾಗಿ ಬಹು–ರಾಜ್ಯ ಸಹಕಾರಿ ಸೊಸೈಟಿಯು ಮಾಡಿದ ಎಲ್ಲ ವರ್ಗಾವಣೆಗಳು ಮತ್ತು ಸಂದಾಯಗಳು ಯಾರೇ ಇತರ ವ್ಯಕ್ತಿಯು ಸೊಸೈಟಿಗೆ ಮಾಡಿದ ಯಾವುದೇ ತಗಾದೆಗೆ ಸಂಬಂಧಿಸಿದಂತೆ ಸಿಂಧುವಾಗಿರತಕ್ಕದ್ದು ಮತ್ತು ಪರಿಣಾಮಕಾರಿಯಾಗಿರತಕ್ಕದ್ದು.

**37. ಹಿಂದಿನ ಸದಸ್ಯನ ಹೊಣೆಗಾರಿಕೆಗಳು ಮತ್ತು ಮೃತ ಸದಸ್ಯನ ಸಂಪದ.–** (1) (2)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಬಹು–ರಾಜ್ಯ ಸಹಕಾರಿ ಸೊಸೈಟಿಯ,–

(ಎ) ಹಿಂದಿನ ಸದಸ್ಯನ ಸಂದರ್ಭದಲ್ಲಿ ಅವನು ಸದಸ್ಯನಾಗಿರುವುದು ನಿಂತುಹೋದ ದಿನಾಂಕದಂದು;

(ಬಿ) ಮೃತ ಸದಸ್ಯನ ಸಂದರ್ಭದಲ್ಲಿ, ಅವನು ಮರಣಹೊಂದಿದ ದಿನಾಂಕದಂದು

– ಸೊಸೈಟಿಯ ಸಾಲಗಳಿಗೆ ಹಿಂದಿನ ಸದಸ್ಯನ ಅಥವಾ ಮೃತ ಸದಸ್ಯನ ಸಂಪದದ ಮೇಲೆ ಅವು ಅಸ್ತಿತ್ವದಲ್ಲಿರುವಂತೆ ಅವುಗಳ ಹೊಣೆಗಾರಿಕೆಯು ಅಂಥ ದಿನಾಂಕದಿಂದ ಎರಡು ವರ್ಷಗಳ ಅವಧಿಗೆ ಮುಂದುವರಿಯತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಬಹು–ರಾಜ್ಯ ಸಹಕಾರಿ ಸೊಸೈಟಿಯನ್ನು 86ನೇ ಪ್ರಕರಣದ ಮೇರೆಗೆ ಸಮಾಪನಗೊಳಿಸಲು ಆದೇಶಿಸಿರುವಲ್ಲಿ ಸಮಾಪನಗೊಳಿಸುವ ಆ ಆದೇಶದ ದಿನಾಂಕದ ನಿಕಟಪೂರ್ವದ ಎರಡು ವರ್ಷಗಳೊಳಗಾಗಿ ಸದಸ್ಯನಾಗಿರುವುದು ನಿಂತು ಹೋದ ಹಿಂದಿನ ಸದಸ್ಯನ ಅಥವಾ ಮರಣ ಹೊಂದಿದ ಮೃತ ಸದಸ್ಯನ ಸಂಪದದ ಮೇಲಿನ ಹೊಣೆಗಾರಿಕೆಯು ಸಮಾಪನಗೊಳಿಸುವ ಇಡೀ ವ್ಯವಹರಣೆಯು ಪೂರ್ಣಗೊಳ್ಳುವವರೆಗೆ ಮುಂದುವರಿಯತಕ್ಕದ್ದು. ಆದರೆ ಅಂಥ ಹೊಣೆಗಾರಿಕೆಯು ಸಂದರ್ಭಾನುಸಾರ, ಸದಸ್ಯತ್ವವು ನಿಂತುಹೋದ ಅಥವಾ ಸದಸ್ಯನು ಮರಣ ಹೊಂದಿದ ದಿನಾಂಕದಂದು ಅಸ್ತಿತ್ವದಲ್ಲಿದ್ದ ಸೊಸೈಟಿಯ ಸಾಲಗಳಿಗೆ ಮಾತ್ರವೇ ಅನ್ವಯವಾಗತಕ್ಕದ್ದು.

## ಅಧ್ಯಾಯ – V

## ಬಹು–ರಾಜ್ಯ ಸಹಕಾರಿ ಸೊಸೈಟಿಗಳ ನಿರ್ದೇಶನ ಮತ್ತು ವ್ಯವಸ್ಥಾಪನೆ

**38. ಸರ್ವ ಸದಸ್ಯರ ಮಂಡಳಿಯ ರಚನೆ, ಅಧಿಕಾರಗಳು ಮತ್ತು ಪ್ರಕಾರ್ಯಗಳು.–** (1) ಬಹು–ರಾಜ್ಯ ಸಹಕಾರಿ ಸೊಸೈಟಿಯ ಸರ್ವಸದಸ್ಯರ ಮಂಡಳಿಯು ಅಂಥ ಸೊಸೈಟಿಯ ಎಲ್ಲ ಸದಸ್ಯರನ್ನು ಒಳಗೊಂಡಿರತಕ್ಕದ್ದು:

ಪರಂತು, ಬಹು–ರಾಜ್ಯ ಸಹಕಾರಿ ಸೊಸೈಟಿಯ ಉಪ–ವಿಧಿಗಳು, ಅಂಥ ಉಪ–ವಿಧಿಗಳಿಗನುಸಾರವಾಗಿ ಚುನಾಯಿತರಾದ ಅಥವಾ ಆಯ್ಕೆಯಾದ ಸೊಸೈಟಿಯ ಸದಸ್ಯರ ಪ್ರತಿನಿಧಿಗಳನ್ನು ಒಳಗೊಂಡಿರುವ ಸಣ್ಣ ಮಂಡಲಿಯ ರಚನೆಗೆ ಉಪಬಂಧ ಕಲ್ಪಿಸಿರುವಲ್ಲಿ ಆ ಸಣ್ಣ ಮಂಡಲಿಯು ಸೊಸೈಟಿಯ ಉಪ–ವಿಧಿಗಳಲ್ಲಿ ನಿಯಮಿಸಬಹುದಾದಂತೆ ಅಥವಾ ನಿರ್ದಿಷ್ಟಪಡಿಸಬಹುದಾದಂತೆ ಸರ್ವ ಸದಸ್ಯರ ಮಂಡಲಿಯ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(2) ಈ ಅಧಿನಿಯಮದ, ನಿಯಮಗಳ ಮತ್ತು ಉಪ–ವಿಧಿಗಳ ಉಪಬಂಧಗಳಿಗೊಳಪಟ್ಟು, ಬಹು–ರಾಜ್ಯ ಸಹಕಾರಿ ಸೊಸೈಟಿಯ ಅಂತಿಮ ಅಧಿಕಾರವು ತನ್ನ ಸರ್ವ ಸದಸ್ಯರ ನಿಕಾಯದಲ್ಲಿ ನಿಹಿತವಾಗಿರತಕ್ಕದ್ದು:

ಪರಂತು, ಈ ಉಪ–ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಈ ಅಧಿನಿಯಮದ ಅಥವಾ ನಿಯಮಗಳ ಅಥವಾ ಉಪ–ವಿಧಿಗಳ ಮೂಲಕ ಅಂಥ ಮಂಡಲಿಗೆ ಅಥವಾ ಅಂಥ ಅಧಿಕಾರಿಗೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಮಂಡಲಿಯು ಅಥವಾ ಬಹು–ರಾಜ್ಯ ಸಹಕಾರಿ ಸೊಸೈಟಿಯ ಯಾರೇ ಅಧಿಕಾರಿಯು ಚಲಾಯಿಸುವುದಕ್ಕೆ ಬಾಧೆಯನ್ನುಂಟುಮಾಡತಕ್ಕದ್ದಲ್ಲ.

(3) ಬಹು–ರಾಜ್ಯ ಸಹಕಾರಿ ಸೊಸೈಟಿಯ ಸರ್ವ ಸದಸ್ಯರ ಮಂಡಲಿಯ ಅಥವಾ ಮಂಡಲಿಯ ಯಾವುದೇ ಸಭೆಯಲ್ಲಿ, ಸಹಕಾರಿ ಸೊಸೈಟಿಯನ್ನು ಅಥವಾ ಮತ್ತೊಂದು ಬಹು–ರಾಜ್ಯ ಸಹಕಾರಿ ಸೊಸೈಟಿಯನ್ನು

ಪ್ರತಿನಿಧಿಸಬೇಕಾಗಿರುವಲ್ಲಿ, ಅಂಥ ಸಹಕಾರಿ ಸೊಸೈಟಿಯು ಅಥವಾ ಮತ್ತೊಂದು ಬಹು-ರಾಜ್ಯ ಸಹಕಾರಿ ಸೊಸೈಟಿಯು, ಸಂದರ್ಭಾನುಸಾರ ಅಂಥ ಸಹಕಾರಿ ಸೊಸೈಟಿಯ ಅಥವಾ ಮತ್ತೊಂದು ಬಹು-ರಾಜ್ಯ ಸಹಕಾರಿ ಸೊಸೈಟಿಯ ಮಂಡಲಿಯ ಸಭಾಪತಿಯ ಅಥವಾ ಅಧ್ಯಕ್ಷನ ಅಥವಾ ಮುಖ್ಯ ಕಾರ್ಯನಿರ್ವಾಹಕನ ಅಥವಾ ಮಂಡಲಿಯು ಸದಸ್ಯನನ್ನು ಹಾಗೆ ಅಧಿಕೃತಗೊಳಿಸಿದ್ದರೆ ಅಂಥ ಸದಸ್ಯನ ಮೂಲಕ ಮತ್ತು ಯಾವುದೇ ಕಾರಣಕ್ಕಾಗಿ ಅಂಥ ಸಹಕಾರಿ ಸೊಸೈಟಿಯು ಅಥವಾ ಮತ್ತೊಂದು ಬಹು-ರಾಜ್ಯ ಸಹಕಾರಿ ಸೊಸೈಟಿಯು ಮಂಡಲಿಯನ್ನು ಹೊಂದಿರದಿದ್ದರೆ, ಅಂಥ ಸಹಕಾರಿ ಸೊಸೈಟಿಯ ಅಥವಾ ಮತ್ತೊಂದು ಬಹು-ರಾಜ್ಯ ಸಹಕಾರಿ ಸೊಸೈಟಿಯ ಯಾವುದೇ ಹೆಸರಿನಿಂದ ಕರೆಯಲಾಗುವ ಆಡಳಿತಗಾರನ ಮೂಲಕ ಮಾತ್ರ ಅಂಥ ಸಭೆಯಲ್ಲಿ ಪ್ರತಿನಿಧಿಸತಕ್ಕದ್ದು:

ಪರಂತು, ಬಹು-ರಾಜ್ಯ ಸಹಕಾರಿ ಸೊಸೈಟಿಯ ಉಪ-ವಿಧಿಗಳು ಅಂಥ ಬಹು-ರಾಜ್ಯ ಸಹಕಾರಿ ಸೊಸೈಟಿಯ ಸರ್ವ ಸದಸ್ಯರ ಮಂಡಲಿಯ ಅಥವಾ ಮಂಡಲಿಯ ಯಾವುದೇ ಸಭೆಯಲ್ಲಿ ಇತರ ಸಂಸ್ಥೆಗಳು ಪ್ರತಿನಿಧಿಸಲು ಉಪಬಂಧ ಕಲ್ಪಿಸಿರುವಲ್ಲಿ, ಅಂಥ ಸಂಸ್ಥೆಗಳು ತನ್ನ ನಾಮನಿರ್ದೇಶಿತರ ಮೂಲಕ ಪ್ರತಿನಿಧಿಸತಕ್ಕದ್ದು.

**39. ಸರ್ವ ಸದಸ್ಯರ ಮಂಡಳಿಯ ವಾರ್ಷಿಕ ಸಾಮಾನ್ಯ ಸಭೆ.-** (1) ಪ್ರತಿಯೊಂದು ಬಹು-ರಾಜ್ಯ ಸಹಕಾರಿ ಸೊಸೈಟಿಯ ಮಂಡಲಿಯು, ನಿಯಮಿಸಬಹುದಾದಂಥ ಅವಧಿಯೊಳಗೆ ಮತ್ತು ಸಂವಾದಿ ವರ್ಷದ ಮುಕ್ತಾಯದ ನಂತರ ಆರು ತಿಂಗಳುಗಳನ್ನು ಮೀರದಂಥ ಅವಧಿಯೊಳಗೆ, ಈ ಮುಂದಿನ ಉದ್ದೇಶಕ್ಕಾಗಿ ನಿಯಮಿಸಲಾದ ರೀತಿಯಲ್ಲಿ ವಾರ್ಷಿಕ ಸಾಮಾನ್ಯ ಸಭೆಯನ್ನು ಕರೆಯತಕ್ಕದ್ದು, ಎಂದರೆ:-

(ಎ) ಲೆಕ್ಕಪತ್ರಗಳ ಲೆಕ್ಕ ಪರಿಶೋಧನೆ ಮಾಡಿದ ವಿವರಪಟ್ಟಿಯ ಪರಿಶೀಲನೆ;

(ಬಿ) ಲೆಕ್ಕ ಪರಿಶೋಧನೆಯ ವರದಿ ಮತ್ತು ವಾರ್ಷಿಕ ವರದಿಯ ಪರಿಶೀಲನೆ;

(ಸಿ) ಲೆಕ್ಕ ಪರಿಶೋಧನೆ ಪಾಲನೆಯ ಬಗೆಗಿನ ವರದಿಯ ಪರಿಶೀಲನೆ;

(ಡಿ) ನಿವ್ವಳ ಲಾಭಗಳ ವಿಲೆ;

(ಇ) ಕಾರ್ಯಾಚರಣೆಯ ಕೊರತೆಯ ಪುನರವಲೋಕನ, ಯಾವುದಾದರೂ ಇದ್ದರೆ;

(ಎಫ್) ನಿರ್ದಿಷ್ಟ ಮೀಸಲು ನಿಧಿಗಳು ಮತ್ತು ಇತರ ನಿಧಿಗಳ ಸೃಜನೆ;

(ಜಿ) ವಾರ್ಷಿಕ ಆಯವ್ಯಯ ಪತ್ರದ ಅನುಮೋದನೆ;

(ಹೆಚ್) ಮೀಸಲು ನಿಧಿಯ ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರವಲೋಕನ;

(ಐ) ದೀರ್ಘಕಾಲೀನ ವಾಸ್ತವಿಕ ದೃಷ್ಟಿ ಆಧಾರಿತ ಭಾವೀ ಯೋಜನೆ ಮತ್ತು ವಾರ್ಷಿಕ ಕಾರ್ಯಾಚರಣೆ ಯೋಜನೆಯ ಅನುಮೋದನೆ;

(ಜೆ) ಸಹಾಯಕ ಸಂಸ್ಥೆಯ ವಾರ್ಷಿಕ ವರದಿಯ ಮತ್ತು ಲೆಕ್ಕಪತ್ರಗಳ ಪುನರವಲೋಕನ ಯಾವುದಾದರೂ ಇದ್ದರೆ;

(ಕೆ) ಸದಸ್ಯರನ್ನು ಉಚ್ಚಾಟನೆ ಮಾಡುವುದು;

(ಎಲ್) ಮಂಡಲಿಯ ಸದಸ್ಯರ ಅಥವಾ ಮುಖ್ಯ ಕಾರ್ಯ ನಿರ್ವಾಹಕನ ಸಂಬಂಧಿಕರಾಗಿರುವ ನೌಕರರ ಪಟ್ಟಿ;

(ಎಂ) ಉಪ ವಿಧಿಗಳ ತಿದ್ದುಪಡಿ, ಯಾವುದಾದರೂ ಇದ್ದರೆ;

(ಎನ್) ಮಂಡಲಿಯ ಸದಸ್ಯರಿಗೆ ಮತ್ತು ಅಧಿಕಾರಿಗಳಿಗೆ ಸಂಬಂಧಿಸಿದಂತೆ ನೀತಿ ಸಂಹಿತೆಯನ್ನು ರೂಪಿಸುವುದು;

(ಓ) ಮಂಡಲಿಯ ಸದಸ್ಯರ ಚುನಾವಣೆ, ಯಾವುದಾದರೂ ಇದ್ದರೆ.

(2) ಬಹು-ರಾಜ್ಯ ಸಹಕಾರಿ ಸೊಸೈಟಿಯು (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ವಾರ್ಷಿಕ ಸಾಮಾನ್ಯ ಸಭೆಯನ್ನು ಕರೆಯಲು ವಿಫಲವಾದರೆ, ಕೇಂದ್ರ ರಿಜಿಸ್ಟ್ರಾರನು ಅಥವಾ ಈ ಬಗ್ಗೆ ಅವನಿಂದ ಅಧಿಕೃತನಾದ ವ್ಯಕ್ತಿಯು, ಆ ಉಪ ಪ್ರಕರಣದಲ್ಲಿ ನಮೂದಿಸಿದ ಅವಧಿಯ ಮುಕ್ತಾಯದ ದಿನಾಂಕದಿಂದ ತೊಂಬತ್ತು ದಿನಗಳ ಅವಧಿಯೊಳಗೆ ಅಂಥ ವಾರ್ಷಿಕ ಸಾಮಾನ್ಯ ಸಭೆಯನ್ನು ಕರೆಯಲು ಸಕ್ಷಮನಾಗಿರತಕ್ಕದ್ದು ಮತ್ತು ಅಂಥ ಸಭೆಗೆ ಮಾಡಿದ ವೆಚ್ಚವನ್ನು ಸೊಸೈಟಿಯು ಭರಿಸತಕ್ಕದ್ದು.

(3) ಬಹು-ರಾಜ್ಯ ಸಹಕಾರಿ ಸೊಸೈಟಿಯ ಪ್ರತಿಯೊಂದು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಂಡಲಿಯು, ಹಿಂದಿನ ವರ್ಷದಲ್ಲಿ ಮಂಡಲಿಯ ಯಾರೇ ಸದಸ್ಯನಿಗೆ ಅಥವಾ ಮಂಡಲಿಯ ಸದಸ್ಯನ ಹೆಂಡತಿ/ ಗಂಡ ಅಥವಾ ಮಗ ಅಥವಾ ಮಗಳಿಗೆ ನೀಡಲಾಗಿರುವ ಅಥವಾ ಆತನ ಅಥವಾ ಮಂಡಲಿಯ ಸದಸ್ಯನ ಹೆಂಡತಿ/ಗಂಡ ಅಥವಾ ಮಗ ಅಥವಾ ಮಗಳು ತೀರಿಸಬೇಕಾಗಿರುವ ಸಾಲಗಳು ಅಥವಾ ಸಾಲದ ಮೇಲೆ ಪಡೆದಿರುವ ಸರಕುಗಳು, ಯಾವುವಾದರೂ ಇದ್ದರೆ, ಅವುಗಳನ್ನು ವಿವರವಾಗಿ ತೋರಿಸುವ ವಿವರಣಾ ಪಟ್ಟಿಯನ್ನು ಸೊಸೈಟಿಯ ಮುಂದೆ ಇಡತಕ್ಕದ್ದು.

**40. ಸರ್ವ ಸದಸ್ಯರ ವಿಶೇಷ ಸಾಮಾನ್ಯ ಸಭೆ.–** (1) ಮುಖ್ಯ ಕಾರ್ಯ ನಿರ್ವಾಹಕನು, ಯಾವುದೇ ಕಾಲದಲ್ಲಿ, ಮಂಡಲಿಯ ನಿರ್ದೇಶನದ ಮೇರೆಗೆ, ಸೊಸೈಟಿಯ ವಿಶೇಷ ಸಾಮಾನ್ಯ ಸಭೆಯನ್ನು ಕರೆಯಬಹುದು ಮತ್ತು ಕೇಂದ್ರ ರಿಜಿಸ್ಟ್ರಾರನಿಂದ ಅಥವಾ ಉಪ-ವಿಧಿಗಳಲ್ಲಿ ಉಪಬಂಧಿಸಬಹುದಾದಂಥ ಸದಸ್ಯನಿಂದ ಅಥವಾ ಸದಸ್ಯರಿಂದ ಅಥವಾ ಸದಸ್ಯರ ಒಟ್ಟು ಸಂಖ್ಯೆಯಲ್ಲಿ ಉಪಬಂಧಿಸಬಹುದಾದ ಪ್ರಮಾಣದಷ್ಟು ಸಂಖ್ಯೆಯ ಸದಸ್ಯರಿಂದ ಲಿಖಿತ ಕೋರಿಕೆಯನ್ನು ಸ್ವೀಕರಿಸಿದ ನಂತರ ಒಂದು ತಿಂಗಳೊಳಗೆ ಅಂಥ ಸಭೆಯನ್ನು ಕರೆಯತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಕೋರಿಕೆಗನುಸಾರವಾಗಿ, ಬಹು-ರಾಜ್ಯ ಸಹಕಾರಿ ಸೊಸೈಟಿಯ ವಿಶೇಷ ಸಾಮಾನ್ಯ ಸಭೆಯನ್ನು ಕರೆಯದಿದ್ದರೆ, ಕೇಂದ್ರ ರಿಜಿಸ್ಟ್ರಾರನು ಅಥವಾ ಈ ಬಗ್ಗೆ ಅವನಿಂದ ಅಧಿಕೃತಗೊಂಡ ಯಾರೇ ವ್ಯಕ್ತಿಯು ಅಂಥ ಸಭೆ ಕರೆಯುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಆ ಸಭೆಯನ್ನು, ಆ ಉಪಪ್ರಕರಣದ ಉಪಬಂಧಗಳಿಗನುಸಾರವಾಗಿ ಮುಖ್ಯ ಕಾರ್ಯನಿರ್ವಾಹಕನು ಕರೆದ ಸಭೆಯೆಂದು ಭಾವಿಸತಕ್ಕದ್ದು ಮತ್ತು ಅಂಥ ಸಭೆ ಕರೆದುದರಿಂದ ಮಾಡಿದ ವೆಚ್ಚವನ್ನು ಸೊಸೈಟಿಯ ನಿಧಿಗಳಿಂದ ಅಥವಾ ಕೇಂದ್ರ ರಿಜಿಸ್ಟ್ರಾರನ ಅಭಿಪ್ರಾಯದಲ್ಲಿ, ವಿಶೇಷ ಸಾಮಾನ್ಯ ಸಭೆಯನ್ನು ಕರೆಯುವುದಕ್ಕೆ ನಿರಾಕರಿಸಿದ್ದಕ್ಕೆ ಅಥವಾ ವಿಫಲರಾದುದಕ್ಕೆ ಜವಾಬ್ದಾರನಾಗಿದ್ದ ಅಥವಾ ಜವಾಬ್ದಾರರಾಗಿದ್ದ ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳು ಸಂದಾಯ ಮಾಡತಕ್ಕದ್ದೆಂದು ಕೇಂದ್ರ ರಿಜಿಸ್ಟ್ರಾರನು ಆದೇಶಿಸಬಹುದು.

**41. ನಿರ್ದೇಶಕರ ಮಂಡಲಿ.–** (1) ಈ ಅಧಿನಿಯಮದ ಮತ್ತು ನಿಯಮಗಳ ಉಪಬಂಧಗಳಿಗೊಳಪಟ್ಟು, ಪ್ರತಿಯೊಂದು ಬಹು-ರಾಜ್ಯ ಸಹಕಾರಿ ಸೊಸೈಟಿಗೆ (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಷ್ಟು ಸಂಖ್ಯೆಯ ಸದಸ್ಯರನ್ನು ಒಳಗೊಂಡಿರುವ ನಿರ್ದೇಶಕರ ಮಂಡಲಿ ಇರತಕ್ಕದ್ದು.

(2) ಬಹು–ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯರು ಸಾಮಾನ್ಯ ಸಭೆಯ ಠರಾವಿನ ಮೂಲಕ, ನಿರ್ದೇಶಕರನ್ನು ಚುನಾಯಿಸತಕ್ಕದ್ದು ಅವರು ಮಂಡಲಿಯ ಸದಸ್ಯರಾಗಿರತಕ್ಕದ್ದು.

(3) ಮಂಡಲಿಯು, ಉಪ–ವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಷ್ಟು ಸಂಖ್ಯೆಯ ನಿರ್ದೇಶಕರನ್ನು ಒಳಗೊಂಡಿರತಕ್ಕದ್ದು:

ಪರಂತು, ಯಾವುದೇ ಸಂದರ್ಭದಲ್ಲಿ ನಿರ್ದೇಶಕರ ಗರಿಷ್ಠ ಸಂಖ್ಯೆಯು ಇಪ್ಪತ್ತೊಂದನ್ನು ಮೀರತಕ್ಕದ್ದಲ್ಲ:

ಮತ್ತೂ ಪರಂತು, ಮಂಡಲಿಯು ಮೊದಲ ಪರಂತುಕದಲ್ಲಿ ನಿರ್ದಿಷ್ಟಪಡಿಸಿದ ಇಪ್ಪತ್ತೊಂದು ನಿರ್ದೇಶಕರ ಜೊತೆಗೆ ಇಬ್ಬರು ನಿರ್ದೇಶಕರನ್ನು ಸಹ–ಸದಸ್ಯರನ್ನಾಗಿ ಸೇರಿಸಿಕೊಳ್ಳಬಹುದು:

ಮತ್ತೂ ಪರಂತು, ರಾಷ್ಟ್ರೀಯ ಸಹಕಾರಿ ಸೊಸೈಟಿಗಳಲ್ಲಿನ ಕಾರ್ಯಕಾರಿ ನಿರ್ದೇಶಕರು ಸಹ ಮಂಡಲಿಯ ಸದಸ್ಯರಾಗಿರತಕ್ಕದ್ದು ಮತ್ತು ಅಂಥ ಸದಸ್ಯರನ್ನು ಮೊದಲ ಪರಂತುಕದಲ್ಲಿ ನಿರ್ದಿಷ್ಟಪಡಿಸಿದ ನಿರ್ದೇಶಕರ ಒಟ್ಟು ಸಂಖ್ಯೆಯನ್ನು ಲೆಕ್ಕ ಹಾಕುವ ಉದ್ದೇಶಕ್ಕಾಗಿ ಬಿಟ್ಟುಬಿಡತಕ್ಕದ್ದು.

**42. ಆಡಳಿತಾತ್ಮಕ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ನೌಕರರು ಪಾಲ್ಗೊಳ್ಳುವುದು.–** ಪ್ರತಿಯೊಂದು ಬಹು–ರಾಜ್ಯ ಸಹಕಾರಿ ಸೊಸೈಟಿಯು, ಆಡಳಿತಾತ್ಮಕ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ, ಅಂಥ ಬಹು–ರಾಜ್ಯ ಸಹಕಾರಿ ಸೊಸೈಟಿಗಳ ನೌಕರರ ಪ್ರತಿನಿಧಿಗಳು ಸಹಭಾಗಿಯಾಗುವುದಕ್ಕಾಗಿ ಅಥವಾ ಉಪ–ವಿಧಿಗಳಲ್ಲಿ ಅಥವಾ ಈ ಬಗ್ಗೆ ಹೊರಡಿಸಲಾದ ಸೂಚನೆಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಹಂತದಲ್ಲಿ ಅಥವಾ ನಿಕಾಯಗಳಲ್ಲಿ ಪಾಲ್ಗೊಳ್ಳಲು, ಅಂಥ ಸೊಸೈಟಿಯ ಉಪ–ವಿಧಿಗಳಲ್ಲಿ ಅಥವಾ ಆಡಳಿತಾತ್ಮಕ ಸೂಚನೆಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾರ್ಯ ವಿಧಾನವನ್ನು ರೂಪಿಸತಕ್ಕದ್ದು.

**43. ಮಂಡಲಿಯ ಸದಸ್ಯನಾಗಿರಲು ಅನರ್ಹತೆಗಳು.–** (1) ಯಾವುದೇ ಬಹು–ರಾಜ್ಯ ಸಹಕಾರಿ ಸೊಸೈಟಿಯ ಯಾರೇ ಸದಸ್ಯನು ಅಥವಾ ಸದಸ್ಯನ ನಾಮ ನಿರ್ದೇಶಿತನು ಅಥವಾ ಸೊಸೈಟಿಯ ಅಥವಾ ರಾಷ್ಟ್ರೀಯ ಸಹಕಾರಿ ಸೊಸೈಟಿಯ ಯಾರೇ ಸದಸ್ಯನು,–

(ಎ) ಸಕ್ಷಮ ನ್ಯಾಯಾಲಯದಿಂದ ಅವಿಮುಕ್ತ ದಿವಾಳಿಯೆಂದು ಅಥವಾ ಅಸ್ವಸ್ಥ ಚಿತ್ತನೆಂದು ನಿರ್ಣೀತನಾಗಿದ್ದರೆ;

(ಬಿ) ಸೊಸೈಟಿಯೊಂದಿಗೆ ಮಾಡಿಕೊಂಡ ಯಾವುದೇ ಕರಾರಿನ ಲಾಭಗಳಲ್ಲಿ ಆಸಕ್ತಿ ಹೊಂದಿದ್ದರೆ ಅಥವಾ ಭಾಗಿಯಾಗಿದ್ದರೆ;

(ಸಿ) ನೈತಿಕ ಅಧ:ಪತನವನ್ನು ಒಳಗೊಂಡಿರುವ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿದ್ದರೆ;

(ಡಿ) ಸೊಸೈಟಿಯಲ್ಲಿ ಲಾಭದಾಯಕವಾದ ಯಾವುದೇ ಪದವನ್ನು ಅಥವಾ ಸ್ಥಾನವನ್ನು ಹೊಂದಿದ್ದರೆ:

ಪರಂತು, ಮುಖ್ಯ ಕಾರ್ಯನಿರ್ವಾಹಕನು ಅಥವಾ ಕಾಲಕಾಲಕ್ಕೆ ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದಂಥ ಸೊಸೈಟಿಯ ಪೂರ್ಣಕಾಲಿಕ ನೌಕರನು ಅಥವಾ ಅಂಥ ಸೊಸೈಟಿಯ ಮಂಡಲಿಯಲ್ಲಿ

ತಮ್ಮನ್ನು ಪ್ರತಿನಿಧಿಸಲು ಅಂಥ ಸೊಸೈಟಿಯ ನೌಕರರು ಚುನಾಯಿಸಿದ ವ್ಯಕ್ತಿಯು ಅಂಥ ಮಂಡಲಿಯ ಸದಸ್ಯನಾಗಿ ಆಯ್ಕೆಯಾಗಲು ಅಥವಾ ಸದಸ್ಯನಾಗಿರಲು ಅರ್ಹನಾಗಿರತಕ್ಕದ್ದು;

(ಇ) ಅಂಥ ಚುನಾವಣೆ ಅಥವಾ ನೇಮಕದ ನಿಕಟಪೂರ್ವದ ದಿನಾಂಕದಿಂದ ಹನ್ನೆರಡು ತಿಂಗಳುಗಳಿಗಿಂತ ಕಡಿಮೆ ಅವಧಿಗೆ ಸೊಸೈಟಿಯ ಸದಸ್ಯನಾಗಿದ್ದರೆ;

(ಎಫ್) ಅವನು ಸದಸ್ಯನಾಗಿರುವ ಸೊಸೈಟಿಯು ನಡೆಸುತ್ತಿರುವಂಥದೇ ಬಗೆಯ ಯಾವುದೇ ವ್ಯವಹಾರದಲ್ಲಿ ಹಿತಾಸಕ್ತಿ ಹೊಂದಿದ್ದರೆ;

(ಜಿ) ಅವನು ಸದಸ್ಯನಾಗಿರುವ ಸೊಸೈಟಿಯಿಂದ ಸಾಲ ಅಥವಾ ಸಾಲದ ಮೇಲೆ ಸರಕುಗಳನ್ನು ತೆಗೆದುಕೊಂಡಿದ್ದರೆ ಅಥವಾ ಆ ಸೊಸೈಟಿಗೆ ಅನ್ಯಥಾ ಋಣಿಯಾಗಿದ್ದರೆ; ಮತ್ತು

ಅಂಥ ಸೊಸೈಟಿಯು ಅವನಿಗೆ ನೀಡಿದ ಸುಸ್ತಿ ನೋಟೀಸನ್ನು ಸ್ವೀಕರಿಸಿದ ನಂತರ,-

(i) ಅಂಥ ಸಾಲದ ಅಥವಾ ಋಣದ ಮರುಸಂದಾಯವನ್ನು ಅಥವಾ ಸಂದರ್ಭಾನುಸಾರ ಸಾಲದ ಮೇಲೆ ತೆಗೆದುಕೊಂಡ ಸರಕುಗಳ ಬೆಲೆಯನ್ನು ಸಂದಾಯ ಮಾಡುವಲ್ಲಿ, ಅಂಥ ಮರು ಸಂದಾಯ ಮಾಡುವುದಕ್ಕೆ ಅಥವಾ ಸಂದಾಯ ಮಾಡುವುದಕ್ಕೆ ನಿಗದಿಪಡಿಸಿದ ದಿನಾಂಕದೊಳಗೆ ಅಥವಾ ಅಂಥ ದಿನಾಂಕವನ್ನು ವಿಸ್ತರಿಸಿರುವಲ್ಲಿ, ಹಾಗೆ ವಿಸ್ತರಿಸಿದ ದಿನಾಂಕದೊಳಗೆ ಸಂದಾಯ ಮಾಡಲು ತಪ್ಪಿದರೆ, ಹಾಗೆ ವಿಸ್ತರಿಸಲಾದ ದಿನಾಂಕವು ಯಾವುದೇ ಸಂದರ್ಭದಲ್ಲಿಯೂ ಆರು ತಿಂಗಳುಗಳನ್ನು ಮೀರತಕ್ಕದ್ದಲ್ಲ, ಅಥವಾ

(ii) ಅಂಥ ಸಾಲವನ್ನು ಅಥವಾ ಋಣವನ್ನು ಅಥವಾ ಸಾಲದ ಮೇಲೆ ತೆಗೆದುಕೊಂಡ ಸರಕುಗಳ ಬೆಲೆಯನ್ನು ಕಂತುಗಳಲ್ಲಿ ಸಂದಾಯ ಮಾಡಬೇಕಾಗಿದ್ದಾಗ, ಯಾವುದೇ ಕಂತನ್ನು ಸಂದಾಯ ಮಾಡಲು ತಪ್ಪಿದರೆ ಮತ್ತು ಹಾಗೆ ತಪ್ಪಿದ ದಿನಾಂಕದಿಂದ ಆರು ತಿಂಗಳುಗಳು ಮುಕ್ತಾಯವಾದ ನಂತರವೂ ಸಂದಾಯ ಮಾಡಲು ತಪ್ಪಿದ ಮೊಬಲಗು ಅಥವಾ ಅದರ ಯಾವುದೇ ಭಾಗವು ಸಂದಾಯವಾಗದೆ ಉಳಿದಿದ್ದರೆ:

ಪರಂತು, ಈ ಖಂಡದ ಮೇರೆಗೆ ಅಂಥ ಪದವನ್ನು ಹೊಂದಿರುವುದು ನಿಂತುಹೋದ, ಮಂಡಲಿಯ ಸದಸ್ಯನು ಪದವನ್ನು ಹೊಂದಿರುವುದು ನಿಂತುಹೋದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಅವನು ಸದಸ್ಯನಾಗಿದ್ದ ಬಹುರಾಜ್ಯ ಸಹಕಾರಿ ಸೊಸೈಟಿಯ ಮಂಡಲಿಯ ಸದಸ್ಯನಾಗಿ ಮರು ಚುನಾವಣೆಗೆ ಅಥವಾ ಯಾವುದೇ ಇತರ ಬಹು-ರಾಜ್ಯ ಸಹಕಾರಿ ಸೊಸೈಟಿಯ ಮಂಡಲಿಯ ಚುನಾವಣೆಗೆ ಸ್ಪರ್ಧಿಸಲು ಅರ್ಹನಾಗಿರತಕ್ಕದ್ದಲ್ಲ;

(ಹೆಚ್) ಯಾವ ವ್ಯಕ್ತಿಗೆ ಸಂಬಂಧಿಸಿದಂತೆ ಡಿಕ್ರಿ, ತೀರ್ಮಾನ ಅಥವಾ ಆದೇಶದ ಮೇರೆಗೆ, ಬಾಕಿಯಾಗಿರುವ ಯಾವುದೇ ಮೊಬಲಗು ಈ ಅಧಿನಿಯಮದ ಮೇರೆಗೆ ವಸೂಲಿಯು ಇತ್ಯರ್ಥದಲ್ಲಿರುವುದೋ ಆ ವ್ಯಕ್ತಿಯು;

(ಐ) ಬಹು-ರಾಜ್ಯ ಸಹಕಾರಿ ಸೊಸೈಟಿಯ ಪರವಾಗಿ ಅಥವಾ ಅದರ ವಿರುದ್ಧ ಅಥವಾ ಆ ಸೊಸೈಟಿಯ ಸದಸ್ಯನಾಗಿರುವ ಯಾವುದೇ ಇತರ ಬಹು-ರಾಜ್ಯ ಸಹಕಾರಿ ಸೊಸೈಟಿಯ ಪರವಾಗಿ ಅಥವಾ

ಅದರ ವಿರುದ್ಧ ನ್ಯಾಯವಾದಿಯನ್ನಾಗಿ ಉಳಿಸಿಕೊಂಡಿದ್ದರೆ ಅಥವಾ ಕಾನೂನು ವೃತ್ತಿಗನನ್ನಾಗಿ ನಿಯೋಜಿಸಿಕೊಂಡಿದ್ದರೆ;

**ವಿವರಣೆ:–** ಈ ಖಂಡದ ಉದ್ದೇಶಗಳಿಗಾಗಿ, "ಕಾನೂನು ವೃತ್ತಿಗ" ಎಂಬುದು ನ್ಯಾಯವಾದಿಗಳ ಅಧಿನಿಯಮ, 1961 (1961ರ 25)ರ 2ನೇ ಪ್ರಕರಣದ (1)ನೇ ಉಪಪ್ರಕರಣದ (i)ನೇ ಖಂಡದಲ್ಲಿ ಇರುವಂಥ ಅರ್ಥವನ್ನೇ ಹೊಂದಿರುತ್ತದೆ;

(ಜೆ) ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿದ್ದರೆ;

(ಕೆ) 29ನೇ ಪ್ರಕರಣದ ಮೇರೆಗೆ ಸದಸ್ಯನಾಗಿರಲು ಅನರ್ಹನಾದರೆ;

(ಎಲ್) 30ನೇ ಪ್ರಕರಣದ ಮೇರೆಗೆ ಸದಸ್ಯತ್ವದಿಂದ ಉಚ್ಚಾಟಿಸಿದ್ದರೆ;

(ಎಂ) ಅನುಕ್ರಮವಾಗಿ ಬರುವ ಮಂಡಳಿಯ ಮೂರು ಸಭೆಗಳಿಗೆ ಗೈರು ಹಾಜರಾಗಿದ್ದರೆ ಮತ್ತು ಅಂಥ ಗೈರು ಹಾಜರಿಯನ್ನು ಮಂಡಳಿಯು ಮಾಫಿ ಮಾಡಿರದಿದ್ದರೆ;

(ಎನ್) ಅನುಕ್ರಮವಾಗಿ ಬರುವ ಮಂಡಳಿಯ ಮೂರು ಸಭೆಗಳಿಗೆ ಗೈರು ಹಾಜರಾಗಿದ್ದರೆ ಮತ್ತು ಅಂಥ ಗೈರು ಹಾಜರಿಯನ್ನು ಸರ್ವಸದಸ್ಯರ ಸಭೆಯಲ್ಲಿ ಸದಸ್ಯರು ಮಾಫಿ ಮಾಡದಿದ್ದರೆ

– ಅವನು ಅಂಥ ಬಹು–ರಾಜ್ಯ ಸಹಕಾರಿ ಸೊಸೈಟಿಯ ಅಥವಾ ರಾಷ್ಟ್ರೀಯ ಸಹಕಾರಿ ಸೊಸೈಟಿ ಮಂಡಲಿಯ ಅಥವಾ ಬಹು–ರಾಜ್ಯ ಸಹಕಾರಿ ಸೊಸೈಟಿಗೆ ಸಂಯೋಜನೆಗೊಂಡ ಯಾವುದೇ ಇತರ ಸಹಕಾರಿ ಸೊಸೈಟಿ ಮಂಡಲಿಯ ಸದಸ್ಯನಾಗಿ ಆಯ್ಕೆಯಾಗುವುದಕ್ಕೆ ಅಥವಾ ಸದಸ್ಯನಾಗಿರಲು ಅರ್ಹನಾಗಿರತಕ್ಕದ್ದಲ್ಲ.

(2) ಬಹು–ರಾಜ್ಯ ಸಹಕಾರಿ ಸೊಸೈಟಿಯ ಮಂಡಲಿಯು,–

(ಎ) 45ನೇ ಪ್ರಕರಣದ ಮೇರೆಗೆ ಮಂಡಲಿಯ ಚುನಾವಣೆಗಳನ್ನು ನಡೆಸುವುದಕ್ಕೆ; ಅಥವಾ

(ಬಿ) 39ನೇ ಪ್ರಕರಣದ ಮೇರೆಗೆ ವಾರ್ಷಿಕ ಸಾಮಾನ್ಯ ಸಭೆಯನ್ನು ಕರೆಯುವುದಕ್ಕೆ; ಅಥವಾ

(ಸಿ) ಹಣಕಾಸಿನ ವಿವರಪಟ್ಟಿಯನ್ನು ತಯಾರಿಸುವುದಕ್ಕೆ ಮತ್ತು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅದನ್ನು ಮಂಡಿಸುವುದಕ್ಕೆ

– ವಿಫಲವಾದರೆ, ಐದು ವರ್ಷಗಳ ಅವಧಿಗಾಗಿ ಅಂಥ ಬಹು–ರಾಜ್ಯ ಸಹಕಾರಿ ಸೊಸೈಟಿಯ ಮಂಡಲಿಯ ಸದಸ್ಯನಾಗಿ ವ್ಯಕ್ತಿಯು ಆಯ್ಕೆಯಾಗಲು ಅರ್ಹನಾಗಿರತಕ್ಕದ್ದಲ್ಲ.

**44. ಕೆಲವು ಸಂದರ್ಭಗಳಲ್ಲಿ ಚೇರ್‌ಪರ್ಸನ್ ಅಥವಾ ಅಧ್ಯಕ್ಷನ ಅಥವಾ ವೈಸ್ ಚೇರ್‌ಪರ್ಸನ್ ಅಥವಾ ಉಪಾಧ್ಯಕ್ಷನ ಪದವನ್ನು ಧಾರಣ ಮಾಡುವುದಕ್ಕೆ ನಿಷೇಧ.–** (1) ಮಂಡಲಿಯ ಯಾರೇ ಸದಸ್ಯನು ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಮಂತ್ರಿಯಾಗಿದ್ದರೆ, ಅಂಥ ಸದಸ್ಯನು ಬಹು–ರಾಜ್ಯ ಸಹಕಾರಿ ಸೊಸೈಟಿ ಚೇರ್‌ಪರ್ಸನ್ ಆಗಿ ಅಥವಾ ಅಧ್ಯಕ್ಷನಾಗಿ ಅಥವಾ ವೈಸ್ ಚೇರ್‌ಪರ್ಸನ್ ಆಗಿ ಅಥವಾ ಉಪಾಧ್ಯಕ್ಷನಾಗಿ ಚುನಾಯಿತನಾಗಲು ಅರ್ಹನಾಗಿರತಕ್ಕದ್ದಲ್ಲ.

(2) ಮಂಡಲಿಯ ಯಾರೇ ಸದಸ್ಯನು ಪೂರ್ಣವಾಗಿ ಅಥವಾ ಭಾಗಶಃವಾಗಿ ಎರಡು ನಿರಂತರ ಅವಧಿಗಳಿಗೆ ಅಂಥ ಪದವನ್ನು ಧಾರಣ ಮಾಡಿದ ನಂತರ, ಬಹು-ರಾಜ್ಯ ಸಹಕಾರಿ ಸೊಸೈಟಿಯ ಚೇರ್‌ಪರ್ಸನ್ ಆಗಿ ಅಥವಾ ಅಧ್ಯಕ್ಷನಾಗಿ ಚುನಾಯಿತನಾಗಲು ಅರ್ಹನಾಗಿರತಕ್ಕದ್ದಲ್ಲ:

ಪರಂತು, ಚೇರ್‌ಪರ್ಸನ್ ಅಥವಾ ಅಧ್ಯಕ್ಷನ ಪದವನ್ನು ಸದಸ್ಯನು ನಿರಂತರವಾಗಿ ಒಂದು ಪೂರ್ಣ ಅವಧಿಗೆ ಧಾರಣ ಮಾಡಿರುವುದು ನಿಂತುಹೋಗಿದ್ದರೆ, ಅಂಥ ಪದಕ್ಕೆ ಚುನಾಯಿತನಾಗಲು ಅವನು ಪುನಃ ಅರ್ಹನಾಗಿರತಕ್ಕದ್ದು.

**ವಿವರಣೆ:-** ಈ ಅಧಿನಿಯಮದ ಪ್ರಾರಂಭದಲ್ಲಿ ಚೇರ್‌ಪರ್ಸನ್ ಅಥವಾ ಅಧ್ಯಕ್ಷನ ಪದವನ್ನು ಧಾರಣ ಮಾಡಿದ ಯಾರೇ ಸದಸ್ಯನು ಅಂಥ ಪ್ರಾರಂಭದ ನಂತರ ಆ ಪದಕ್ಕೆ ಮತ್ತೆ ಚುನಾಯಿತನಾದಲ್ಲಿ, ಈ ಪ್ರಕರಣದ ಉದ್ದೇಶಕ್ಕಾಗಿ, ಅವನು, ಅಂಥ ಚುನಾವಣೆಗೆ ಮುಂಚೆ ಒಂದು ಅವಧಿಗಾಗಿ ಪದವನ್ನು ಧಾರಣ ಮಾಡಿದ್ದನೆಂದು ಭಾವಿಸತಕ್ಕದ್ದು.

**45. ಮಂಡಲಿಯ ಸದಸ್ಯರ ಚುನಾವಣೆಗಳು.-** (1) ಬಹು-ರಾಜ್ಯ ಸಹಕಾರಿ ಸೊಸೈಟಿಯ ಮಂಡಲಿಗೆ ಚುನಾವಣೆಯನ್ನು ನಡೆಸುವುದು ಅಸ್ತಿತ್ವದಲ್ಲಿರುವ ಮಂಡಲಿಯ ಜವಾಬ್ದಾರಿಯಾಗಿರತಕ್ಕದ್ದು.

(2) ಮಂಡಲಿಯ ಸದಸ್ಯರ ಚುನಾವಣೆಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ರಹಸ್ಯ ಮತದಾನದ ಮೂಲಕ ನಡೆಸತಕ್ಕದ್ದು.

(3) ಮಂಡಲಿಯ ಸದಸ್ಯರ ಚುನಾವಣೆಯನ್ನು ಬಹು-ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯರ ಸಾಮಾನ್ಯ ಸಭೆಯಲ್ಲಿ ನಡೆಸತಕ್ಕದ್ದು.

(4) ಮಂಡಲಿಯ ಚುನಾಯಿತ ಸದಸ್ಯರು ಅಂಥ ಸೊಸೈಟಿಯ ಉಪ-ವಿಧಿಗಳು ಅನುಮತಿಸಿದರೆ, ಮರು ಚುನಾವಣೆಗೆ ಅರ್ಹರಾಗಿರತಕ್ಕದ್ದು.

(5) ಮಂಡಲಿಯ ಚುನಾಯಿತ ಸದಸ್ಯರ ಪದಾವಧಿಯು, ಬಹು-ರಾಜ್ಯ ಸಹಕಾರಿ ಸೊಸೈಟಿಯ ಉಪ-ವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಚುನಾವಣೆಯ ದಿನಾಂಕದಿಂದ ಐದು ವರ್ಷಗಳನ್ನು ಮೀರದಂತಿರತಕ್ಕದ್ದು:

ಪರಂತು, ಚುನಾಯಿತ ಸದಸ್ಯರು ಈ ಅಧಿನಿಯಮದ ಅಥವಾ ನಿಯಮಗಳ ಅಥವಾ ಉಪವಿಧಿಗಳ ಉಪಬಂಧಗಳ ಮೇರೆಗೆ ತಮ್ಮ ಉತ್ತರಾಧಿಕಾರಿಗಳು ಚುನಾಯಿತರಾಗುವವರೆಗೆ ಅಥವಾ ನಾಮ ನಿರ್ದೇಶಿತರಾಗುವವರೆಗೆ ಮತ್ತು ತಮ್ಮ ಪದದ ಪ್ರಭಾರವನ್ನು ವಹಿಸಿಕೊಳ್ಳುವವರೆಗೆ ಪದಧಾರಣ ಮಾಡಿರುವುದು ಮುಂದುವರಿಯತಕ್ಕದ್ದು.

(6) ಮಂಡಲಿಯು, ಮಂಡಲಿಯ ಸದಸ್ಯರ ಚುನಾವಣೆಯನ್ನು ನಡೆಸಲು ವಿಫಲವಾದರೆ, ಕೇಂದ್ರ ರಿಜಿಸ್ಟ್ರಾರನು, ಅಂಥ ಚುನಾವಣೆಯು ನಡೆಯಬೇಕಾದ ದಿನಾಂಕದಿಂದ ತೊಂಬತ್ತು ದಿವಸಗಳ ಅವಧಿಯೊಳಗೆ ನಡೆಸತಕ್ಕದ್ದು.

(7) ಯಾರೇ ವ್ಯಕ್ತಿಯು, ಬಹು-ರಾಜ್ಯ ಸಹಕಾರಿ ಸೊಸೈಟಿಯ ಸರ್ವ ಸದಸ್ಯರ ಸಭೆಯ ಸದಸ್ಯನಾಗಿರುವ ಹೊರತು, ಆ ಸೊಸೈಟಿಯ ಮಂಡಲಿಯ ಸದಸ್ಯನಾಗಿ ಚುನಾಯಿತನಾಗಲು ಅರ್ಹನಾಗಿರತಕ್ಕದ್ದಲ್ಲ.

(8) ಕೇಂದ್ರ ರಿಜಿಸ್ಟ್ರಾರನು ಚುನಾವಣೆಯನ್ನು ನಡೆಸುವುದಕ್ಕೆ ಬೇಕಾದ ವೆಚ್ಚಗಳನ್ನು ಬಹು-ರಾಜ್ಯ ಸಹಕಾರಿ ಸೊಸೈಟಿಯು ಭರಿಸತಕ್ಕದ್ದು.

(9) ಕೇಂದ್ರ ಸರ್ಕಾರವು ಸಾಮಾನ್ಯವಾಗಿ ಮಂಡಲಿಯ ಸದಸ್ಯರ ಚುನಾವಣೆಗೆ ಸಂಬಂಧಿಸಿದ ವಿಷಯಗಳಿಗೆ ಉಪಬಂಧ ಕಲ್ಪಿಸಲು ಅಥವಾ ವಿನಿಯಮಿಸಲು ನಿಯಮಗಳನ್ನು ರಚಿಸಬಹುದು.

**46. ಸಹಕಾರಿ ಸೊಸೈಟಿಯಲ್ಲಿ ಪದವನ್ನು ಧಾರಣ ಮಾಡುವುದು.–** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಯಾರೇ ವ್ಯಕ್ತಿಯು, ಎರಡಕ್ಕಿಂತ ಹೆಚ್ಚು ಬಹು-ರಾಜ್ಯ ಸಹಕಾರಿ ಸೊಸೈಟಿಗಳ ಮಂಡಲಿಯಲ್ಲಿ ಅಧ್ಯಕ್ಷನ ಅಥವಾ ಚೇರ್‌ಪರ್ಸನ್‌ನ ಅಥವಾ ಉಪಾಧ್ಯಕ್ಷನ ಅಥವಾ ವೈಸ್ ಚೇರ್‌ಪರ್ಸನ್‌ನ ಪದವನ್ನು ಒಂದೇ ಕಾಲದಲ್ಲಿ ಧಾರಣ ಮಾಡುವುದಕ್ಕೆ ಅರ್ಹನಾಗಿರತಕ್ಕದ್ದಲ್ಲ.

**47. ಸರ್ವ ಸದಸ್ಯರ ಸಭೆಯು ಚುನಾಯಿತ ಸದಸ್ಯರನ್ನು ತೆಗೆದುಹಾಕುವುದು.–** ಬಹು-ರಾಜ್ಯ ಸಹಕಾರಿ ಸೊಸೈಟಿಯ ಹಿತಾಸಕ್ತಿಗಳಿಗೆ ಪ್ರತಿಕೂಲವಾಗಿ ಕಾರ್ಯ ನಿರ್ವಹಿಸುವ ಮಂಡಲಿಯ ಚುನಾಯಿತ ಸದಸ್ಯನನ್ನು, ಕೇಂದ್ರ ರಿಜಿಸ್ಟ್ರಾರನು ಸಲ್ಲಿಸಿದ ವರದಿಯ ಮೇರೆಗೆ ಅಥವಾ ಅನ್ಯಥಾ ಸಭೆಯಲ್ಲಿ ಹಾಜರಿದ್ದು ಮತ ನೀಡುವ ಸದಸ್ಯರು ಮೂರನೇ ಎರಡಕ್ಕಿಂತ ಕಡಿಮೆಯಿಲ್ಲದ ಬಹು ಮತದ ಮೂಲಕ ಸರ್ವ ಸದಸ್ಯರ ಸಭೆಯು ತನ್ನ ಸಭೆಯಲ್ಲಿ ಅಂಗೀಕರಿಸಿದ ಠರಾವಿನ ಮೇರೆಗೆ ಮಂಡಲಿಯಿಂದ ತೆಗೆದುಹಾಕಬಹುದು:

ಪರಂತು, ಸಂಬಂಧಪಟ್ಟ ಸದಸ್ಯನಿಗೆ, ಈ ವಿಷಯದ ಬಗ್ಗೆ ನಿವೇದನೆ ಮಾಡಿಕೊಳ್ಳುವುದಕ್ಕೆ ಒಂದು ಸೂಕ್ತ ಅವಕಾಶವನ್ನು ನೀಡಿದ ಹೊರತು, ತೆಗೆದುಹಾಕತಕ್ಕದ್ದಲ್ಲ.

**48. ಮಂಡಲಿಯಲ್ಲಿ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ನಾಮನಿರ್ದೇಶಿತ.–** (1) ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಬಹು-ರಾಜ್ಯ ಸಹಕಾರಿ ಸೊಸೈಟಿಯ ಷೇರು ಬಂಡವಾಳಕ್ಕೆ ವಂತಿಗೆ ನೀಡಿದ್ದಲ್ಲಿ, ಸಂದರ್ಭಾನುಸಾರ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಥವಾ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು, ಮಂಡಳಿಯ ಸದಸ್ಯರಾಗಿ ಈ ಕೆಳಕಂಡ ಆಧಾರಗಳ ಮೇರೆಗೆ, ಎಂದರೆ,–

(ಎ) ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಧಾರಣ ಮಾಡಿದ್ದ ಹೊರಡಿಸಿದ ಈಕ್ವಿಟಿ ಷೇರು ಬಂಡವಾಳದ ಒಟ್ಟು ಮೊತ್ತವು, ಹೊರಡಿಸಿದ ಒಟ್ಟು ಈಕ್ವಿಟಿ ಷೇರು ಬಂಡವಾಳದ ಶೇಕಡಾ ಇಪ್ಪತ್ತಾರಕ್ಕಿಂತ ಕಡಿಮೆಯಿದ್ದರೆ, ಮಂಡಲಿಯ ಒಬ್ಬ ಸದಸ್ಯನನ್ನು;

(ಬಿ) ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಧಾರಣ ಮಾಡಿದ್ದ ಹೊರಡಿಸಿದ ಈಕ್ವಿಟಿ ಷೇರು ಬಂಡವಾಳದ ಒಟ್ಟು ಮೊತ್ತವು, ಹೊರಡಿಸಿದ ಒಟ್ಟು ಈಕ್ವಿಟಿ ಷೇರು ಬಂಡವಾಳದ ಶೇಕಡಾ ಇಪ್ಪತ್ತಾರು ಅಥವಾ ಅದಕ್ಕಿಂತ ಹೆಚ್ಚಿಗೆ ಇದ್ದು, ಆದರೆ ಶೇಕಡಾ ಐವತ್ತೊಂದಕ್ಕಿಂತ ಕಡಿಮೆಯಿದ್ದರೆ, ಮಂಡಲಿಯ ಇಬ್ಬರು ಸದಸ್ಯರನ್ನು;

(ಸಿ) ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಧಾರಣ ಮಾಡಿದ್ದ ಹೊರಡಿಸಿದ ಈಕ್ವಿಟಿ ಷೇರು ಬಂಡವಾಳದ ಒಟ್ಟು ಮೊತ್ತವು ಹೊರಡಿಸಿದ ಒಟ್ಟು ಈಕ್ವಿಟಿ ಷೇರು ಬಂಡವಾಳದ ಶೇಕಡಾ ಐವತ್ತೊಂದು ಅಥವಾ ಅದಕ್ಕಿಂತ ಹೆಚ್ಚಿಗೆ ಇದ್ದರೆ, ಮಂಡಲಿಯ ಮೂವರು ಸದಸ್ಯರನ್ನು

– ನಾಮ ನಿರ್ದೇಶಿಸುವ ಹಕ್ಕನ್ನು ಹೊಂದಿರತಕ್ಕದ್ದು:

ಪರಂತು, ಅಂಥ ನಾಮ ನಿರ್ದೇಶಿತ ವ್ಯಕ್ತಿಗಳ ಸಂಖ್ಯೆಯು ಮಂಡಲಿಯ ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಒಂದರಷ್ಟನ್ನು ಮೀರತಕ್ಕದ್ದಲ್ಲ:

ಮತ್ತೂ ಪರಂತು, ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಬಹು-ರಾಜ್ಯ ಸಹಕಾರಿ ಸೊಸೈಟಿಯು ಹೊರಡಿಸಿದ ಡಿಬೆಂಚರುಗಳ ಮೇಲೆ ಅಸಲಿನ ಮರುಸಂದಾಯಕ್ಕೆ ಮತ್ತು ಬಡ್ಡಿಯ ಸಂದಾಯಕ್ಕೆ ಖಾತರಿ ನೀಡಿದ್ದರೆ, ಅಥವಾ ಬಹು-ರಾಜ್ಯ ಸಹಕಾರಿ ಸೊಸೈಟಿಗೆ ಸಾಲಗಳ ಮತ್ತು ಮುಂಗಡಗಳ ಮೇಲೆ ಅಸಲಿನ ಮರುಸಂದಾಯಕ್ಕೆ ಮತ್ತು ಬಡ್ಡಿಯ ಸಂದಾಯಕ್ಕೆ ಖಾತರಿ ನೀಡಿದ್ದರೆ ಅಥವಾ ಬಹು-ರಾಜ್ಯ ಸಹಕಾರಿ ಸೊಸೈಟಿಗೆ ಅನುದಾನಗಳ ಅಥವಾ ಅನ್ಯಥಾ ರೂಪದಲ್ಲಿ ಯಾವುದೇ ನೆರವನ್ನು ನೀಡಿದ್ದರೆ, ಸಂದರ್ಭಾನುಸಾರ, ಈ ಬಗ್ಗೆ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಥವಾ ಕೇಂದ್ರ ಸರ್ಕಾರವು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು, ನಿಯಮಿಸಬಹುದಾದ ರೀತಿಯಲ್ಲಿ ಅಂಥ ಸೊಸೈಟಿಯ ಮಂಡಲಿಗೆ ವ್ಯಕ್ತಿಯನ್ನು, ನಾಮ ನಿರ್ದೇಶನ ಮಾಡುವ ಹಕ್ಕನ್ನು ಹೊಂದಿರತಕ್ಕದ್ದು.

(2) ಈ ಪ್ರಕರಣದ ಮೇರೆಗೆ ನಾಮನಿರ್ದೇಶಿತನಾದ ವ್ಯಕ್ತಿಯು, ಹಾಗೆ ಯಾವ ಸರ್ಕಾರದಿಂದ ಅವನು ನಾಮ ನಿರ್ದೇಶಿತನಾಗಿರುವನೋ ಆ ಸರ್ಕಾರದ ಇಷ್ಟಪರ್ಯಂತ ಪದವನ್ನು ಧಾರಣ ಮಾಡತಕ್ಕದ್ದು.

**49. ಮಂಡಲಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು.–** (1) ಮಂಡಲಿಯು ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನೆರವೇರಿಸುವ ಉದ್ದೇಶಕ್ಕಾಗಿ ಅವಶ್ಯವೆನಿಸಬಹುದಾದಂಥ ಅಥವಾ ವಿಹಿತವೆನಿಸಬಹುದಾದಂಥ ಎಲ್ಲ ಅಧಿಕಾರಗಳನ್ನು ಚಲಾಯಿಸಬಹುದು.

(2) ಮೇಲೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ಅಧಿಕಾರಗಳು,–

(ಎ) ಸದಸ್ಯರನ್ನು ಸೇರಿಸಿಕೊಳ್ಳುವ;

(ಬಿ) ಸಂಘಟನಾತ್ಮಕ ಉದ್ದೇಶಗಳನ್ನು ನಿರೂಪಿಸುವ ಮತ್ತು ಈ ಉದ್ದೇಶಗಳನ್ನು ಈಡೇರಿಸುವಲ್ಲಿ ಸಾಧಿಸಬೇಕಾದ ನಿರ್ದಿಷ್ಟ ಗುರಿಗಳನ್ನು ಹಾಕಿಕೊಳ್ಳುವ;

(ಸಿ) ಕಾರ್ಯಾಚರಣೆಗಳನ್ನು ನಿಯತಕಾಲಿಕವಾಗಿ ಮೌಲ್ಯ ನಿರ್ಣಯ ಮಾಡುವ;

(ಡಿ) ಮುಖ್ಯ ಕಾರ್ಯನಿರ್ವಾಹಕನು ಮತ್ತು ಮುಖ್ಯ ಕಾರ್ಯನಿರ್ವಾಹಕನು ನೇಮಕ ಮಾಡುವ ಅಗತ್ಯವಿರದ ಸೊಸೈಟಿಯ ಅಂಥ ಇತರ ನೌಕರರನ್ನು ನೇಮಕ ಮಾಡುವ ಮತ್ತು ತೆಗೆದುಹಾಕುವ;

(ಇ) ಬಹು-ರಾಜ್ಯ ಸಹಕಾರಿ ಸೊಸೈಟಿಯ ನೌಕರರ ನೇಮಕವನ್ನು ಮತ್ತು ಅಂಥ ನೌಕರರ ವಿರುದ್ಧ ಶಿಸ್ತುಕ್ರಮವೂ ಸೇರಿದಂತೆ, ವೇತನಶ್ರೇಣಿಗಳನ್ನು, ಭತ್ಯೆಗಳನ್ನು ಮತ್ತು ಇತರ ಸೇವಾ ಷರತ್ತುಗಳನ್ನು ವಿನಿಯಮಿಸಲು ಉಪಬಂಧಗಳನ್ನು ರಚಿಸುವ;

(ಎಫ್) ಸರ್ವ ಸದಸ್ಯರ ಸಭೆಯ ಅನುಮೋದನೆಗಾಗಿ ವಾರ್ಷಿಕ ವರದಿಯನ್ನು, ವಾರ್ಷಿಕ ಹಣಕಾಸಿನ ವಿವರಪಟ್ಟಿಕೆಗಳನ್ನು, ವಾರ್ಷಿಕ ಯೋಜನೆಯನ್ನು ಮತ್ತು ಆಯವ್ಯಯ ಪತ್ರವನ್ನು ಮಂಡಿಸುವ;

(ಜಿ) ಲೆಕ್ಕ ಪರಿಶೋಧನೆಯನ್ನು ಮತ್ತು ಅನುಪಾಲನಾ ವರದಿಯನ್ನು ಪರಿಶೀಲಿಸುವ ಮತ್ತು ಅದನ್ನು ಸರ್ವ ಸದಸ್ಯರ ಸಭೆಯ ಮುಂದೆ ಮಂಡಿಸುವ;

(ಹೆಚ್) ಸ್ಥಿರಸ್ವತ್ತನ್ನು ಆರ್ಜಿಸುವ ಅಥವಾ ವಿಲೆ ಮಾಡುವ;

(ಐ) ಇತರ ಸಹಕಾರಿ ಸೊಸೈಟಿಗಳಲ್ಲಿನ ಸದಸ್ಯತ್ವವನ್ನು ಪುನರವಲೋಕಿಸುವ;

(ಜೆ) ವಾರ್ಷಿಕ ಮತ್ತು ಪೂರಕ ಆಯವ್ಯಯಪತ್ರವನ್ನು ಅನುಮೋದಿಸುವ;

(ಕೆ) ನಿಧಿಗಳನ್ನು ಎತ್ತುವ;

(ಎಲ್) ಸದಸ್ಯರಿಗೆ ಸಾಲಗಳನ್ನು ಮಂಜೂರು ಮಾಡುವ; ಮತ್ತು

(ಎಂ) ಈ ಅಧಿನಿಯಮದ ಅಥವಾ ಉಪ-ವಿಧಿಗಳ ಮೇರೆಗೆ ನಿಯಮಿಸಬಹುದಾದಂಥ ಅಥವಾ ಅಗತ್ಯಪಡಿಸಬಹುದಾದಂಥ ಅಥವಾ ಸರ್ವಸದಸ್ಯರ ಸಭೆಯು ಪ್ರತ್ಯಾಯೋಜಿಸಬಹುದಾದಂಥ ಇತರ ಕ್ರಮಗಳನ್ನು ತೆಗೆದುಕೊಳ್ಳುವ ಅಥವಾ ಅಂಥ ಕೃತ್ಯಗಳನ್ನು ಮಾಡುವ

– ಅಧಿಕಾರವನ್ನು ಒಳಗೊಂಡಿರತಕ್ಕದ್ದು.

**50. ಮಂಡಲಿಯ ಸಭೆ.–** (1) ಮುಖ್ಯ ಕಾರ್ಯ ನಿರ್ವಾಹಕನು, ಬಹು-ರಾಜ್ಯ ಸಹಕಾರಿ ಸೊಸೈಟಿಯ ಚೇರ್‌ಪರ್ಸನ್‌ನ ಅಥವಾ ಅಧ್ಯಕ್ಷನ ಸೂಚನೆಯಂತೆ ಮಂಡಲಿಯ ಸಭೆಗಳನ್ನು ಕರೆಯತಕ್ಕದ್ದು.

(2) ವರ್ಷದಲ್ಲಿ ನಡೆಸುವ ಮಂಡಲಿಯ ಸಭೆಗಳ ಒಟ್ಟು ಸಂಖ್ಯೆ ಮತ್ತು ಸಭೆಗಳ ಸ್ಥಳವು ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು:

ಪರಂತು, ಮಂಡಲಿಯು ಕನಿಷ್ಠ ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು:

ಮತ್ತೂ ಪರಂತು, ಎರಡಕ್ಕಿಂತ ಹೆಚ್ಚಲ್ಲದಷ್ಟು ವ್ಯಕ್ತಿಗಳನ್ನು ಮಂಡಲಿಯು ತನ್ನ ಸಭೆಗಳಿಗೆ ಆಹ್ವಾನಿಸಬಹುದು.

(3) ಚೇರ್‌ಪರ್ಸನ್ ಅಥವಾ ಅಧ್ಯಕ್ಷನು ಯಾವುದೇ ಕಾರಣಕ್ಕಾಗಿ, ಮಂಡಲಿಯ ಸಭೆಗೆ ಹಾಜರಾಗಲು ಅಸಮರ್ಥನಾದರೆ, ಮಂಡಲಿಯ ಸಭೆಯಲ್ಲಿ ಹಾಜರಿರುವ ಮಂಡಲಿಯ ಸದಸ್ಯರು ತಮ್ಮೊಳಗಿಂದ ಆಯ್ಕೆ ಮಾಡಿದ ಮಂಡಲಿಯ ಯಾರೇ ಇತರ ಸದಸ್ಯನು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

**51. ಮುಖ್ಯ ಕಾರ್ಯ ನಿರ್ವಾಹಕ.–** (1) ಪ್ರತಿಯೊಂದು ಬಹು-ರಾಜ್ಯ ಸಹಕಾರಿ ಸೊಸೈಟಿಗೆ ಮಂಡಲಿಯು ನೇಮಕ ಮಾಡುವ, ಯಾವುದೇ ಪದನಾಮದಿಂದ ಕರೆಯಲಾಗುವ ಒಬ್ಬ ಮುಖ್ಯ ಕಾರ್ಯ ನಿರ್ವಾಹಕನಿರತಕ್ಕದ್ದು ಮತ್ತು ಅವನು ಅಂಥ ಬಹು-ರಾಜ್ಯ ಸಹಕಾರಿ ಸೊಸೈಟಿಯ ಪೂರ್ಣಕಾಲಿಕ ನೌಕರನಾಗಿರತಕ್ಕದ್ದು.

(2) ಮುಖ್ಯ ಕಾರ್ಯನಿರ್ವಾಹಕನು, ಮಂಡಲಿಯ ಮತ್ತು ಕಾರ್ಯನಿರ್ವಾಹಕ ಸಮಿತಿಯ ಮತ್ತು 53ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಚಿಸಬಹುದಾದಂಥ ಇತರ ಸಮಿತಿಗಳ ಅಥವಾ ಉಪ ಸಮಿತಿಗಳ ಸದಸ್ಯನಾಗಿರತಕ್ಕದ್ದು.

(3) ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಬಹು–ರಾಜ್ಯ ಸಹಕಾರಿ ಸೊಸೈಟಿಯ ಈಕ್ವಿಟಿ ಷೇರು ಬಂಡವಾಳದಲ್ಲಿ ಅಥವಾ ಒಟ್ಟು ಷೇರುಗಳಲ್ಲಿ ಶೇಕಡಾ ಐವತ್ತೊಂದರಷ್ಟನ್ನು ಅಥವಾ ಅದಕ್ಕಿಂತ ಹೆಚ್ಚಿಗೆ ಹೊಂದಿರುವಲ್ಲಿ ಮುಖ್ಯ ಕಾರ್ಯನಿರ್ವಾಹಕನಿಗೆ ಸಂದಾಯವಾಗಬೇಕಾದ ಸಂಬಳ ಮತ್ತು ಭತ್ಯೆಗಳು ಮತ್ತು ನಿವೃತ್ತಿ ವೇತನ, ಉಪದಾನ ಮತ್ತು ಇತರ ನಿವೃತ್ತಿ ಪ್ರಯೋಜನಗಳೂ ಸೇರಿದಂತೆ ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**52. ಮುಖ್ಯ ಕಾರ್ಯನಿರ್ವಾಹಕನ ಅಧಿಕಾರಗಳು ಮತ್ತು ಪ್ರಕಾರ್ಯಗಳು.–** ಮುಖ್ಯ ಕಾರ್ಯ ನಿರ್ವಾಹಕನು ಮಂಡಲಿಯ ಸಾಮಾನ್ಯ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣದ ಮೇರೆಗೆ ಈ ಕೆಳಗೆ ನಿರ್ದಿಷ್ಟಪಡಿಸಿದ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:–

(ಎ) ಬಹು–ರಾಜ್ಯ ಸಹಕಾರಿ ಸೊಸೈಟಿಯ ದೈನಂದಿನ ವ್ಯವಹಾರವನ್ನು ನಿರ್ವಹಿಸುವುದು;

(ಬಿ) ಬಹು–ರಾಜ್ಯ ಸಹಕಾರಿ ಸೊಸೈಟಿಯ ಖಾತೆಗಳ ನಿರ್ವಹಣೆಗೆ ಮತ್ತು ನಗದಿನ ಸುರಕ್ಷಿತ ಅಭಿರಕ್ಷೆಗೆ ವ್ಯವಸ್ಥೆ ಮಾಡಲು ಜವಾಬ್ದಾರನಾಗಿರುವುದು;

(ಸಿ) ಬಹು–ರಾಜ್ಯ ಸಹಕಾರಿ ಸೊಸೈಟಿಯ ಪರವಾಗಿ ದಸ್ತಾವೇಜುಗಳಿಗೆ ಸಹಿ ಮಾಡುವುದು;

(ಡಿ) ಬಹು–ರಾಜ್ಯ ಸಹಕಾರಿ ಸೊಸೈಟಿಯ ವಿವಿಧ ಪುಸ್ತಕಗಳ ಮತ್ತು ದಾಖಲೆಗಳ ಸೂಕ್ತ ನಿರ್ವಹಣೆಗಾಗಿ ಮತ್ತು ಈ ಅಧಿನಿಯಮದ, ನಿಯಮಗಳ ಮತ್ತು ಉಪವಿಧಿಗಳ ಉಪಬಂಧಗಳಿಗನುಸಾರವಾಗಿ ನಿಯತಕಾಲಿಕ ವಿವರಪಟ್ಟಿಕೆಗಳನ್ನು ಮತ್ತು ವರದಿಗಳನ್ನು ಸರಿಯಾಗಿ ಸಿದ್ಧಪಡಿಸಲು ಮತ್ತು ಅವುಗಳನ್ನು ಸಕಾಲದಲ್ಲಿ ಸಲ್ಲಿಸಲು ವ್ಯವಸ್ಥೆಗಳನ್ನು ಮಾಡುವುದು;

(ಇ) ಬಹು–ರಾಜ್ಯ ಸಹಕಾರಿ ಸೊಸೈಟಿಯ, ಮಂಡಲಿಯ ಮತ್ತು ಕಾರ್ಯನಿರ್ವಾಹಕ ಸಮಿತಿಯ ಮತ್ತು 53ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಚಿಸಿದ ಇತರ ಸಮಿತಿಗಳ ಮತ್ತು ಉಪ ಸಮಿತಿಗಳ ಸರ್ವ ಸದಸ್ಯರ ಸಭೆಗಳನ್ನು ಕರೆಯುವುದು ಮತ್ತು ಅಂಥ ಸಭೆಗಳ ಸೂಕ್ತ ದಾಖಲೆಗಳನ್ನು ಇಟ್ಟುಕೊಂಡು ಬರುವುದು;

(ಎಫ್) ಉಪ–ವಿಧಿಗಳಿಗನುಸಾರವಾಗಿ ಬಹು–ರಾಜ್ಯ ಸಹಕಾರಿ ಸೊಸೈಟಿಗಳಲ್ಲಿ ಹುದ್ದೆಗಳಿಗೆ ನೇಮಕಗಳನ್ನು ಮಾಡುವುದು;

(ಜಿ) ನೀತಿಗಳನ್ನು, ಉದ್ದೇಶಗಳನ್ನು ಮತ್ತು ಯೋಜನೆಯನ್ನು ರೂಪಿಸುವಲ್ಲಿ ಮಂಡಲಿಗೆ ನೆರವಾಗುವುದು;

(ಹೆಚ್) ಬಹು–ರಾಜ್ಯ ಸಹಕಾರಿ ಸೊಸೈಟಿಯ ಕಾರ್ಯಾಚರಣೆಗಳು ಮತ್ತು ಪ್ರಕಾರ್ಯಗಳ ಮೌಲ್ಯ ನಿರ್ಣಯಕ್ಕೆ ಅಗತ್ಯವಾದ ನಿಯತಕಾಲಿಕ ಮಾಹಿತಿಯನ್ನು ಮಂಡಲಿಗೆ ಒದಗಿಸುವುದು;

(ಐ) ಬಹು–ರಾಜ್ಯ ಸಹಕಾರಿ ಸೊಸೈಟಿಯ ಪರವಾಗಿ ದಾವೆ ಹೂಡಲು ಅಥವಾ ದಾವೆಗೆ ಗುರಿಯಾಗಲು ವ್ಯಕ್ತಿಯನ್ನು ನೇಮಕ ಮಾಡುವುದು;

(ಜೆ) ಹಣಕಾಸು ವರ್ಷದ ಮುಕ್ತಾಯದ ಮೂವತ್ತು ದಿವಸಗಳೊಳಗೆ ಮಂಡಲಿಯ ಅನುಮೋದನೆಗಾಗಿ ವಾರ್ಷಿಕ ವರದಿಯನ್ನು ಮತ್ತು ಹಣಕಾಸು ವಿವರಪಟ್ಟಿಕೆಗಳ ಕರಡನ್ನು ಸಲ್ಲಿಸುವುದು;

(ಕೆ) ಬಹು-ರಾಜ್ಯ ಸಹಕಾರಿ ಸೊಸೈಟಿಯ ಉಪ-ವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಇತರ ಕರ್ತವ್ಯಗಳನ್ನು ನೆರವೇರಿಸುವುದು ಮತ್ತು ಅಂಥ ಇತರ ಅಧಿಕಾರಗಳನ್ನು ಚಲಾಯಿಸುವುದು.

**53. ಮಂಡಲಿಯ ಸಮಿತಿಗಳು.–** (1) ಮಂಡಲಿಯು, ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಕಾರ್ಯ ನಿರ್ವಾಹಕ ಸಮಿತಿಯನ್ನು ಮತ್ತು ಅವಶ್ಯವೆಂದು ಪರಿಗಣಿಸಬಹುದಾದ ಇತರ ಸಮಿತಿಗಳನ್ನು ಅಥವಾ ಉಪ ಸಮಿತಿಗಳನ್ನು ರಚಿಸಬಹುದು:

ಪರಂತು, ಕಾರ್ಯನಿರ್ವಾಹಕ ಸಮಿತಿಯನ್ನು ಹೊರತುಪಡಿಸಿ ಇತರ ಸಮಿತಿಗಳು ಅಥವಾ ಉಪ ಸಮಿತಿಗಳು ಮೂರನ್ನು ಮೀರತಕ್ಕದ್ದಲ್ಲ.

(2) ಕಾರ್ಯ ನಿರ್ವಾಹಕ ಸಮಿತಿಯು ಅಥವಾ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಇತರ ಸಮಿತಿಯು ಅಥವಾ ಉಪ ಸಮಿತಿಯು ಬಹು-ರಾಜ್ಯ ಸಹಕಾರಿ ಸೊಸೈಟಿಯ ಉಪ-ವಿಧಿಗಳಿಗನುಸಾರವಾಗಿ ತನಗೆ ವಹಿಸಿದಂತಹ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

**54. ದಾಖಲೆಗಳ ಸ್ವಾಧೀನವನ್ನು ಪಡೆಯುವುದು, ಇತ್ಯಾದಿ.–** (1) (ಎ) ಬಹು-ರಾಜ್ಯ ಸಹಕಾರಿ ಸೊಸೈಟಿಯ ರಿಜಿಸ್ಟರುಗಳು ಮತ್ತು ಲೆಕ್ಕಪತ್ರಗಳ ಪುಸ್ತಕಗಳೂ ಸೇರಿದಂತೆ ದಾಖಲೆಗಳನ್ನು ಅಕ್ರಮವಾಗಿ ತಿದ್ದುವ ಅಥವಾ ನಾಶಪಡಿಸುವ ಸಂಭವವಿದ್ದರೆ ಅಥವಾ ಅಂಥ ಸೊಸೈಟಿಯ ನಿಧಿಗಳನ್ನು ಅಥವಾ ಇತರ ಸ್ವತ್ತನ್ನು ದುರುಪಯೋಗ ಪಡಿಸುವ ಸಂಭವವಿದ್ದರೆ; ಅಥವಾ

(ಬಿ) ಬಹು-ರಾಜ್ಯ ಸಹಕಾರಿ ಸೊಸೈಟಿಯ ಮಂಡಲಿಯನ್ನು ಸೊಸೈಟಿಯ ಸಾಮಾನ್ಯ ಸಭೆಯಲ್ಲಿ ಪುನರ್ ರಚಿಸಿದರೆ; ಅಥವಾ

(ಸಿ) ಬಹು-ರಾಜ್ಯ ಸಹಕಾರಿ ಸೊಸೈಟಿಯನ್ನು 86ನೇ ಪ್ರಕರಣದ ಮೇರೆಗೆ ಸಮಾಪನಗೊಳಿಸಲು ಆದೇಶಿಸಿದ್ದರೆ ಮತ್ತು ಸೊಸೈಟಿಯ ದಾಖಲೆಗಳ ಮತ್ತು ಸ್ವತ್ತಿನ ಪ್ರಭಾರವನ್ನು ಹೊಂದಿರುವವರಿಗೆ ಅಥವಾ ಅವುಗಳನ್ನು ಸ್ವೀಕರಿಸುವುದಕ್ಕೆ ಹಕ್ಕುಳ್ಳವರಿಗೆ ಮಂಡಲಿಯ ಹೊರ ಹೋಗುವ ಸದಸ್ಯರು ಅಂಥ ಪ್ರಭಾರವನ್ನು ಹಸ್ತಾಂತರಿಸಲು ನಿರಾಕರಿಸಿದರೆ

– ಮುಖ್ಯ ಕಾರ್ಯ ನಿರ್ವಾಹಕನು, ಯಾವ ಮ್ಯಾಜಿಸ್ಟ್ರೇಟನ ಅಧಿಕಾರ ವ್ಯಾಪ್ತಿಯೊಳಗೆ ಬಹು-ರಾಜ್ಯ ಸಹಕಾರಿ ಸೊಸೈಟಿಯು ಕಾರ್ಯನಿರ್ವಹಿಸುತ್ತಿದೆಯೋ ಆ ಮ್ಯಾಜಿಸ್ಟ್ರೇಟನಿಗೆ ಸೊಸೈಟಿಯ ದಾಖಲೆಗಳನ್ನು ಮತ್ತು ಸ್ವತ್ತನ್ನು ಪಡೆಯುವುದಕ್ಕಾಗಿ ಅರ್ಜಿಯನ್ನು ಸಲ್ಲಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಮ್ಯಾಜಿಸ್ಟ್ರೇಟನು, ವಾರಂಟಿನ ಮೂಲಕ, ಅಂಥ ದಾಖಲೆಗಳನ್ನು ಮತ್ತು ಸ್ವತ್ತನ್ನು ಇಡಲಾದ ಅಥವಾ ಇಡಲಾಗಿದೆಯೆಂದು ನಂಬಲಾದ ಯಾವುದೇ ಸ್ಥಳವನ್ನು ಪ್ರವೇಶಿಸಲು ಮತ್ತು ಶೋಧಿಸಲು ಮತ್ತು ಅಂಥ ದಾಖಲೆಗಳನ್ನು ಮತ್ತು ಸ್ವತ್ತನ್ನು ಅಭಿಗ್ರಹಣ ಮಾಡಲು ಸಬ್ ಇನ್ಸ್‌ಪೆಕ್ಟರನ ದರ್ಜೆಗಿಂತ ಕೆಳಗಿನ ದರ್ಜೆಯಲ್ಲದ ಯಾರೇ

ಪೊಲೀಸ್ ಅಧಿಕಾರಿಯನ್ನು ಅಧಿಕೃತಗೊಳಿಸಬಹುದು; ಮತ್ತು ಹಾಗೆ ಅಭಿಗ್ರಹಿಸಿದ ದಾಖಲೆಗಳನ್ನು ಮತ್ತು ಸ್ವತ್ತನ್ನು ಸಂದರ್ಭಾನುಸಾರ, ಹೊಸ ಮಂಡಲಿಯ ಅಥವಾ ಸಮಾಪಕನ ವಶಕ್ಕೆ ಒಪ್ಪಿಸತಕ್ಕದ್ದು.

(3) ಅಂಥ ಪ್ರತಿಯೊಂದು ಶೋಧನೆಯನ್ನು ಮತ್ತು ಅಭಿಗ್ರಹಣವನ್ನು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉಪಬಂಧಗಳಿಗನುಸಾರವಾಗಿ ಮಾಡತಕ್ಕದ್ದು.

## ಅಧ್ಯಾಯ – VI

## ಬಹು–ರಾಜ್ಯ ಸಹಕಾರಿ ಸೊಸೈಟಿಗಳ ವಿಶೇಷಾಧಿಕಾರ

**55. ಸದಸ್ಯರ ಷೇರು ಅಥವಾ ವಂತಿಗೆ ಅಥವಾ ಹಿತಾಸಕ್ತಿಗೆ ಸಂಬಂಧಿಸಿದಂತೆ ಋಣಭಾರ ಮತ್ತು ವಜಾವಟ್ಟು.–** ಬಹು–ರಾಜ್ಯ ಸಹಕಾರಿ ಸೊಸೈಟಿಯು ಸದಸ್ಯನ ಅಥವಾ ಹಿಂದಿನ ಅಥವಾ ಮೃತ ಸದಸ್ಯನ ಬಂಡವಾಳದಲ್ಲಿನ ಪಾಲಿನ ಅಥವಾ ವಂತಿಕೆಯ ಅಥವಾ ಹಿತಾಸಕ್ತಿಯ ಮೇಲೆ ಮತ್ತು ಠೇವಣಿಗಳ ಮೇಲೆ ಮತ್ತು ಸೊಸೈಟಿಗೆ ಅಂಥ ಸದಸ್ಯನ ಅಥವಾ ಹಿಂದಿನ ಸದಸ್ಯನ ಅಥವಾ ಅಂಥ ಮೃತ ಸದಸ್ಯನ ಸಂಪದದಿಂದ ಬರಬೇಕಾದ ಯಾವುದೇ ಋಣಕ್ಕೆ ಸಂಬಂಧಿಸಿದಂತೆ ಸದಸ್ಯನ ಅಥವಾ ಹಿಂದಿನ ಸದಸ್ಯನ ಅಥವಾ ಮೃತ ಸದಸ್ಯನ ಸಂಪದಕ್ಕೆ ಸಂದಾಯವಾಗಬೇಕಾದ ಯಾವುದೇ ಡಿವಿಡೆಂಡ್, ಬೋನಸು ಅಥವಾ ಲಾಭಗಳ ಮೇಲೆ ಋಣಭಾರ ಇರತಕ್ಕದ್ದು ಮತ್ತು ಯಾವುದೇ ಅಂಥ ಋಣ ಸಂದಾಯದಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಸದಸ್ಯನ ಅಥವಾ ಹಿಂದಿನ ಸದಸ್ಯನ ಅಥವಾ ಮೃತ ವ್ಯಕ್ತಿಯ ಸಂಪದಕ್ಕೆ ಜಮೆಯಾದ ಅಥವಾ ಸಂದಾಯ ಮಾಡಬೇಕಾದ ಯಾವುದೇ ಮೊಬಲಗನ್ನು ವಜಾವಟ್ಟು ಮಾಡಬಹುದು.

**56. ಷೇರು ಅಥವಾ ವಂತಿಗೆಯು ಅಥವಾ ಹಿತಾಸಕ್ತಿಯು ಜಪ್ತಿಗೆ ಗುರಿಯಾಗುವುದಿಲ್ಲ.–** (1) 55ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಬಹು–ರಾಜ್ಯ ಸಹಕಾರಿ ಸೊಸೈಟಿಯ ಬಂಡವಾಳದಲ್ಲಿ ಸದಸ್ಯನ ಅಥವಾ ಹಿಂದಿನ ಅಥವಾ ಮೃತ ಸದಸ್ಯನ ಪಾಲು ಅಥವಾ ವಂತಿಗೆ ಅಥವಾ ಹಿತಾಸಕ್ತಿಯು, ಅಂಥ ಸದಸ್ಯನು ಭರಿಸಿದ ಯಾವುದೇ ಋಣದ ಅಥವಾ ಹೊಣೆಗಾರಿಕೆಯ ಸಂಬಂಧದಲ್ಲಿ ಯಾವುದೇ ನ್ಯಾಯಾಲಯದ ಯಾವುದೇ ಡಿಕ್ರಿ ಅಥವಾ ಆದೇಶದ ಮೂಲಕ ಜಪ್ತಿಗೆ ಅಥವಾ ಮಾರಾಟಕ್ಕೆ ಗುರಿಯಾಗತಕ್ಕದ್ದಲ್ಲ ಮತ್ತು ದಿವಾಳಿತನಕ್ಕೆ ಸಂಬಂಧಿಸಿದ ಯಾವುದೇ ಕಾನೂನಿನ ಮೇರೆಗೆ ಅಧಿಕೃತ ಹಸ್ತಾಂತರಧಾರಕನು ಅಥವಾ ರಿಸೀವರನು ಅಂಥ ಪಾಲಿಗೆ ಅಥವಾ ವಂತಿಕೆಗೆ ಅಥವಾ ಹಿತಾಸಕ್ತಿಗೆ ಹಕ್ಕುಳ್ಳವನಾಗಿರತಕ್ಕದ್ದಲ್ಲ ಅಥವಾ ಅದರ ಮೇಲಿನ ಯಾವುದೇ ಕ್ಲೇಮಿಗೆ ಹಕ್ಕನ್ನು ಹೊಂದಿರತಕ್ಕದ್ದಲ್ಲ.

(2) ಸೊಸೈಟಿಯ ಮೀಸಲು ನಿಧಿಯು ಅಥವಾ ವಸೂಲಾಗದ ಮೀಸಲು ಹಣವು ಅಥವಾ ಈ ಅಧಿನಿಯಮದ ಅಥವಾ ಉಪ–ವಿಧಿಗಳ ಉಪಬಂಧಗಳಿಗನುಸಾರವಾಗಿ ಬಹು–ರಾಜ್ಯ ಸಹಕಾರಿ ಸೊಸೈಟಿಯು ಹೂಡಿದ ನೌಕರರ ಭವಿಷ್ಯನಿಧಿಯು ಸೊಸೈಟಿಯು ಭರಿಸಿದ ಯಾವುದೇ ಋಣಕ್ಕೆ ಅಥವಾ ಹೊಣೆಗಾರಿಕೆಗೆ ಸಂಬಂಧಿಸಿದಂತೆ ನ್ಯಾಯಾಲಯದ ಯಾವುದೇ ಡಿಕ್ರಿಯು ಅಥವಾ ಆದೇಶದ ಮೇರೆಗೆ ಜಪ್ತಿಗೆ ಗುರಿಯಾಗತಕ್ಕದ್ದಲ್ಲ.

**57. ಸದಸ್ಯರ ರಿಜಿಸ್ಟರು.–** ಬಹು–ರಾಜ್ಯ ಸಹಕಾರಿ ಸೊಸೈಟಿಯು ಇಟ್ಟಿರುವ ಯಾವುದೇ ರಿಜಿಸ್ಟರು ಅಥವಾ ಸದಸ್ಯರ ಪಟ್ಟಿ ಅಥವಾ ಷೇರುಗಳು, ಅದರಲ್ಲಿ ನಮೂದಿಸಲಾದ ಈ ಕೆಳಕಂಡ ಯಾವುವೇ ವಿವರಗಳಿಗೆ ಮೇಲು ನೋಟದ ಸಾಕ್ಷ್ಯವಾಗಿರತಕ್ಕದ್ದು, ಎಂದರೆ:–

(ಎ) ಅಂಥ ರಿಜಿಸ್ಟರಿನಲ್ಲಿ ಅಥವಾ ಪಟ್ಟಿಯಲ್ಲಿ ಯಾರೇ ವ್ಯಕ್ತಿಯು ಸದಸ್ಯನಾಗಿ ನಮೂದಿತನಾದ ದಿನಾಂಕ; ಮತ್ತು

(ಬಿ) ಅಂಥ ಯಾರೇ ವ್ಯಕ್ತಿಯು ಸದಸ್ಯನಾಗಿರುವುದು ನಿಂತುಹೋದ ದಿನಾಂಕ.

**58. ನಮೂದಿನ ಪ್ರತಿಯನ್ನು ಸಾಕ್ಷ್ಯವಾಗಿ ಅಂಗೀಕರಿಸುವುದು.–** (1) ಬಹು–ರಾಜ್ಯ ಸಹಕಾರಿ ಸೊಸೈಟಿಯು ತನ್ನ ವ್ಯವಹಾರದ ಕ್ರಮದಲ್ಲಿ ಕ್ರಮಬದ್ಧವಾಗಿ ಇಟ್ಟಿರುವ ಪುಸ್ತಕದಲ್ಲಿನ ಯಾವುದೇ ನಮೂದಿನ ಪ್ರತಿಯು, ನಿಯಮಿಸಬಹುದಾದಂಥ ರೀತಿಯಲ್ಲಿ ಅದನ್ನು ಪ್ರಮಾಣೀಕರಿಸಿದ್ದರೆ, ಆ ನಮೂದು ಅಸ್ತಿತ್ವದಲ್ಲಿರುವುದಕ್ಕೆ ಮೇಲುನೋಟದ ಸಾಕ್ಷ್ಯವಾಗಿ ಯಾವುದೇ ದಾವೆಯಲ್ಲಿ ಅಥವಾ ಕಾನೂನು ವ್ಯವಹರಣೆಗಳಲ್ಲಿ ಸ್ವೀಕರಿಸತಕ್ಕದ್ದು ಮತ್ತು ಪ್ರತಿಯೊಂದು ಪ್ರಕರಣದಲ್ಲಿ, ಅದರಲ್ಲಿ ದಾಖಲಿಸಿದ ವಿಷಯಗಳನ್ನು, ವ್ಯವಹಾರಗಳನ್ನು ಮತ್ತು ಲೆಕ್ಕಗಳನ್ನು, ಅದರ ಮೂಲ ನಮೂದನೆಯೆಂದು ಅಂಗೀಕಾರಾರ್ಹವಾಗಿರುವಂತೆಯೇ ಮತ್ತು ಅಷ್ಟರ ಮಟ್ಟಿಗೆ ಸಾಕ್ಷ್ಯವಾಗಿ ಅಂಗೀಕರಿಸತಕ್ಕದ್ದು.

(2) ಬಹು–ರಾಜ್ಯ ಸಹಕಾರಿ ಸೊಸೈಟಿಯ ಯಾರೇ ಅಧಿಕಾರಿಯನ್ನು ಮತ್ತು ಸಮಾಪನದ ನಂತರ ಬಹು–ರಾಜ್ಯ ಸಹಕಾರಿ ಸೊಸೈಟಿಯ ಪುಸ್ತಕವನ್ನು ಯಾವ ಅಧಿಕಾರಿಯ ಕಚೇರಿಯಲ್ಲಿ ಇಡಲಾಗಿದೆಯೋ ಆ ಅಧಿಕಾರಿಯನ್ನು, ಸೊಸೈಟಿಯು ಅಥವಾ ಸಮಾಪಕನು ಪಕ್ಷಕಾರನಾಗಿರದ, ಯಾವುದೇ ಕಾನೂನು ವ್ಯವಹರಣೆಗಳಲ್ಲಿ, ನ್ಯಾಯಾಲಯದ ಅಥವಾ ವಿಶೇಷ ಕಾರಣಕ್ಕಾಗಿ ಮಾಡಿದ ಮಧ್ಯಸ್ಥಿಕೆದಾರನ ಆದೇಶದ ಮೇರೆಗೆ ಹೊರತು, ಈ ಪ್ರಕರಣದ ಮೇರೆಗೆ, ಸೊಸೈಟಿಯ ಯಾವ ಪುಸ್ತಕಗಳ ಅಥವಾ ದಸ್ತಾವೇಜುಗಳ ಒಳಾಂಶಗಳನ್ನು ರುಜುವಾತುಪಡಿಸಬಹುದೋ ಆ ಯಾವುವೇ ಪುಸ್ತಕಗಳನ್ನು ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸುವಂತೆ ಅಥವಾ ಅದರಲ್ಲಿ ದಾಖಲಿಸಿದ ವಿಷಯಗಳನ್ನು, ವ್ಯವಹಾರಗಳನ್ನು ಮತ್ತು ಲೆಕ್ಕಗಳನ್ನು ರುಜುವಾತುಪಡಿಸಲು ಸಾಕ್ಷಿದಾರನಾಗಿ ಹಾಜರಾಗುವಂತೆ ಒತ್ತಾಯಿಸತಕ್ಕದ್ದಲ್ಲ.

**59. ಲಿಖಿತಗಳಿಗೆ ಕಡ್ಡಾಯ ನೋಂದಣಿಯಿಂದ ವಿನಾಯಿತಿ.–** ನೋಂದಣಿ ಅಧಿನಿಯಮ, 1908 (1908ರ 16)ರ 17ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಮತ್ತು (ಸಿ) ಖಂಡಗಳಲ್ಲಿ ಇರುವುದು ಯಾವುದೂ,–

(ಎ) ಬಹು–ರಾಜ್ಯ ಸಹಕಾರಿ ಸೊಸೈಟಿಯ ಆಸ್ತಿಗಳು ಪೂರ್ಣವಾಗಿ ಅಥವಾ ಭಾಗಶಃ ಸ್ಥಿರ ಸ್ವತ್ತನ್ನು ಒಳಗೊಂಡಿದ್ದರೂ ಸೊಸೈಟಿಯಲ್ಲಿನ ಷೇರುಗಳಿಗೆ ಸಂಬಂಧಿಸಿದ ಯಾವುದೇ ಲಿಖಿತಕ್ಕೆ;

(ಬಿ) ಅಂಥ ಯಾವುದೇ ಸೊಸೈಟಿಯು ಹೊರಡಿಸಿದ ಮತ್ತು ಸೊಸೈಟಿಯು ಅಂಥ ಡಿಬೆಂಚರುಗಳನ್ನು ಹೊಂದಿರುವವರ ಪ್ರಯೋಜನಕ್ಕಾಗಿ ಏರ್ಪಟ್ಟ ನ್ಯಾಸದ ನ್ಯಾಸಧಾರಿಗಳಿಗೆ ಸೊಸೈಟಿಯ ಪೂರ್ಣ ಅಥವಾ ಭಾಗಶಃ ಸ್ಥಿರ ಸ್ವತ್ತನ್ನು ಅಥವಾ ಅದರಲ್ಲಿನ ಯಾವುದೇ ಹಿತಾಸಕ್ತಿಯನ್ನು ನೋಂದಾಯಿತ ಲಿಖಿತ ಪತ್ರದ ಮೂಲಕ ಅಡಮಾನ, ಹಸ್ತಾಂತರ ಅಥವಾ ಇತರ ರೀತಿಯಲ್ಲಿ ವರ್ಗಾವಣೆ ಮಾಡಿದ್ದಾಗ, ಆ ಲಿಖಿತವು ಒದಗಿಸಿದ ಭದ್ರತೆಗೆ ಆ ಡಿಬೆಂಚರ್ ಧಾರಕನನ್ನು ಹಕ್ಕುಳ್ಳವನನ್ನಾಗಿಸುವಷ್ಟರಮಟ್ಟಿಗೆ ಹೊರತು, ಸ್ಥಿರ ಸ್ವತ್ತಿಗೆ ಅಥವಾ ಅದರಲ್ಲಿ ಯಾವುದೇ ಹಕ್ಕನ್ನು, ಸ್ವಾಮ್ಯವನ್ನು ಅಥವಾ ಹಿತಾಸಕ್ತಿಯನ್ನು ಸೃಜಿಸದ, ಘೋಷಿಸದ, ಹಸ್ತಾಂತರಿಸದ, ಮಿತಿಗೊಳಿಸದ ಅಥವಾ ಅಂತ್ಯಗೊಳಿಸದ ಯಾವುದೇ ಡಿಬೆಂಚರಿಗೆ; ಅಥವಾ

(ಸಿ) ಅಂಥ ಯಾವುದೇ ಸೊಸೈಟಿಯು ಹೊರಡಿಸಿದ ಯಾವುದೇ ಡಿಬೆಂಚರಿನ ವರ್ಗಾವಣೆಯಾದಾಗ ಮಾಡಿದ ಹಿಂಬರಹಕ್ಕೆ

– ಅನ್ವಯವಾಗತಕ್ಕದ್ದಲ್ಲ.

**60. ಕೆಲವು ಸಂದರ್ಭಗಳಲ್ಲಿ ಬಹು–ರಾಜ್ಯ ಸಹಕಾರಿ ಸೊಸೈಟಿಯ ಕ್ಲೇಮನ್ನು ಈಡೇರಿಸಲು ಸಂಬಳದಲ್ಲಿ ಕಡಿತ.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಬಹು–ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯನು, ತನ್ನ ಸಂಬಳವನ್ನು ಅಥವಾ ಮಜೂರಿಗಳನ್ನು ಬಟವಾಡೆ ಮಾಡುವ ತನ್ನ ನಿಯೋಜಕನು ಒಪ್ಪಂದದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಮೊಬಲಗನ್ನು ಆತನಿಗೆ ಸಂದಾಯ ಮಾಡುವ ಸಂಬಳದಲ್ಲಿ ಅಥವಾ ಮಜೂರಿಗಳಲ್ಲಿ ಪ್ರತೀ ತಿಂಗಳು ಕಡಿತ ಮಾಡುವುದಕ್ಕೆ ಮತ್ತು ಹಾಗೆ ಕಡಿತ ಮಾಡಿದ ಮೊತ್ತವನ್ನು ಸದಸ್ಯನು ಸೊಸೈಟಿಗೆ ಕೊಡಬೇಕಾದ ಯಾವುದೇ ಸಾಲವು ಅಥವಾ ಇತರ ತಗಾದೆಯು ತೀರುವಂತೆ ಸೊಸೈಟಿಗೆ ಸಂದಾಯ ಮಾಡುವುದಕ್ಕೆ ಸಕ್ಷಮನಾಗಿರತಕ್ಕದ್ದೆಂದು ಆ ಸೊಸೈಟಿಯ ಪರವಾಗಿ ಅವಕಾಶ ಕಲ್ಪಿಸುವ ಒಪ್ಪಂದವನ್ನು ಬರೆದುಕೊಡಬಹುದು.

(2) ಅಂಥ ಒಪ್ಪಂದವನ್ನು ಬರೆದುಕೊಟ್ಟ ನಂತರ, ಸದಸ್ಯರ ಸಂಬಳ ಅಥವಾ ಮಜೂರಿಗಳನ್ನು ಬಟವಾಡೆ ಮಾಡುವ ನಿಯೋಜಕನು, ಬಹು–ರಾಜ್ಯ ಸಹಕಾರಿ ಸೊಸೈಟಿಯು ಹಾಗೆ ಅಗತ್ಯಪಡಿಸಿದರೆ, ಅದರ ಲಿಖಿತ ಕೋರಿಕೆಯ ಮೇರೆಗೆ ಮತ್ತು ಅಂಥ ಇಡೀ ಸಾಲ ಅಥವಾ ಇತರ ತಗಾದೆಯನ್ನು ಸಂದಾಯ ಮಾಡಿದುದರ ಬಗ್ಗೆ ಸೊಸೈಟಿಯು ಎಲ್ಲಿಯವರೆಗೆ ತಿಳುವಳಿಕೆ ನೀಡುವುದಿಲ್ಲವೋ ಅಲ್ಲಿಯವರೆಗೆ ಒಪ್ಪಂದಕ್ಕನುಸಾರವಾಗಿ ಕಡಿತವನ್ನು ಮಾಡತಕ್ಕದ್ದು ಮತ್ತು ಮಜೂರಿ ಸಂದಾಯ ಅಧಿನಿಯಮ, 1936 (1936ರ 4)ರ ಮೇರೆಗೆ ಅಗತ್ಯಪಡಿಸಿದ ದಿನದಂದು ಸಂದಾಯವಾಗಬೇಕಾದ ಸಂಬಳ ಅಥವಾ ಮಜೂರಿಗಳ ಭಾಗವಾಗಿದ್ದರೆ ಹೇಗೋ ಹಾಗೇ ಕಡಿತವನ್ನು ಮಾಡಿದ ದಿನಾಂಕದಿಂದ ಹದಿನಾಲ್ಕು ದಿನಗಳ ಅವಧಿಯೊಳಗೆ ಸೊಸೈಟಿಗೆ ಹಾಗೆ ಕಡಿತ ಮಾಡಿದ ಮೊಬಲಗನ್ನು ಸಂದಾಯ ಮಾಡತಕ್ಕದ್ದು ಮತ್ತು ಅಂಥ ಸಂದಾಯವು, ಕಡಿತ ಮಾಡಿದ ಮೊಬಲಗನ್ನು ಸಂದಾಯ ಮಾಡುವ ನಿಯೋಜಕನ ಹೊಣೆಗಾರಿಕೆಯ ಕಾನೂನುಸಮ್ಮತ ತೀರಿಕೆಯಾಗಿರತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗೆ ಮಾಡಿದ ಕೋರಿಕೆಯನ್ನು ಸ್ವೀಕರಿಸಿದ ನಂತರ, ಸದಸ್ಯನ ಸಂಬಳ ಅಥವಾ ಮಜೂರಿಗಳನ್ನು ಬಟವಾಡೆ ಮಾಡುವ ನಿಯೋಜಕನು ಸಂಬಂಧಪಟ್ಟ ಸದಸ್ಯನಿಗೆ ಸಂದಾಯವಾಗಬೇಕಾದ ಸಂಬಳ ಅಥವಾ ಮಜೂರಿಗಳಿಂದ ಕೋರಿಕೆಯಲ್ಲಿ ನಿಗದಿಪಡಿಸಿದ ಮೊಬಲಗನ್ನು ಕಡಿತಮಾಡುವುದಕ್ಕೆ ಯಾವುದೇ ಕಾಲದಲ್ಲಿ ವಿಫಲನಾದರೆ ಅಥವಾ ಬಹು–ರಾಜ್ಯ ಸಹಕಾರಿ ಸೊಸೈಟಿಗೆ ಕಡಿತ ಮಾಡಿದ ಮೊಬಲಗನ್ನು ಕಟ್ಟಲು ತಪ್ಪಿದರೆ, ಸೊಸೈಟಿಯು ಭೂ ಕಂದಾಯದ ಬಾಕಿಯೆಂಬಂತೆ ಅಂಥ ನಿಯೋಜಕನಿಂದ ಅಂಥ ಯಾವುದೇ ಮೊಬಲಗನ್ನು ವಸೂಲು ಮಾಡುವುದಕ್ಕೆ ಹಕ್ಕನ್ನು ಹೊಂದಿರತಕ್ಕದ್ದು ಮತ್ತು ಅಂಥ ನಿಯೋಜಕನಿಂದ ಹಾಗೆ ಬಾಕಿಯಿರುವ ಮೊಬಲಗು ಬಾಕಿಯಿರುವ ಸಂಬಳ ಅಥವಾ ಮಜೂರಿಗಳಿಗೆ ಸಮನಾಗಿ ಅಂಥ ನಿಯೋಜಕನ ಹೊಣೆಗಾರಿಕೆಗೆ ಸಂಬಂಧಿಸಿದಂತೆ ಆದ್ಯತೆಯನ್ನು ಹೊಂದಿರತಕ್ಕದ್ದು.

**61. ಬಹು–ರಾಜ್ಯ ಸಹಕಾರಿ ಸೊಸೈಟಿಗಳಿಗೆ ಸರ್ಕಾರದ ನೆರವು.–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಬಹು–ರಾಜ್ಯ ಸಹಕಾರಿ ಸೊಸೈಟಿಯಿಂದ ಕೋರಿಕೆಯನ್ನು ಸ್ವೀಕರಿಸಿದ ನಂತರ ಮತ್ತು ಸಹಕಾರಿ ಆಂದೋಲನವನ್ನು ಉತ್ತೇಜಿಸುವ ದೃಷ್ಟಿಯಿಂದ,–

(ಎ) ಬಹು–ರಾಜ್ಯ ಸಹಕಾರಿ ಸೊಸೈಟಿಯ ಷೇರು ಬಂಡವಾಳಕ್ಕೆ ಚಂದಾ ನೀಡಬಹುದು.

(ಬಿ) ಬಹು–ರಾಜ್ಯ ಸಹಕಾರಿ ಸೊಸೈಟಿಗೆ ಸಾಲಗಳನ್ನು ನೀಡಬಹುದು ಅಥವಾ ಮುಂಗಡಗಳನ್ನು ನೀಡಬಹುದು;

(ಸಿ) ಬಹು–ರಾಜ್ಯ ಸಹಕಾರಿ ಸೊಸೈಟಿಯು ಹೊರಡಿಸಿದ ಡಿಬೆಂಚರುಗಳ ಮೇಲಿನ ಅಸಲಿನ ಮರು ಸಂದಾಯಕ್ಕೆ ಮತ್ತು ಬಡ್ಡಿ ಸಂದಾಯಕ್ಕೆ ಖಾತರಿ ನೀಡಬಹುದು;

(ಡಿ) ಬಹು–ರಾಜ್ಯ ಸಹಕಾರಿ ಸೊಸೈಟಿಯ ಷೇರು ಬಂಡವಾಳದ ಮರು ಸಂದಾಯಕ್ಕೆ ಮತ್ತು ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ದರಗಳಲ್ಲಿ ಅದರ ಮೇಲಿನ ಲಾಭಾಂಶಗಳಿಗೆ ಖಾತರಿ ನೀಡಬಹುದು;

(ಇ) ಬಹು–ರಾಜ್ಯ ಸಹಕಾರಿ ಸೊಸೈಟಿಗೆ ಅದು ನೀಡಿದ ಸಾಲಗಳ ಮತ್ತು ಮುಂಗಡಗಳ ಅಸಲಿನ ಮರು ಸಂದಾಯಕ್ಕೆ ಮತ್ತು ಅದರ ಮೇಲಿನ ಬಡ್ಡಿಯ ಸಂದಾಯಕ್ಕೆ ಖಾತರಿ ನೀಡಬಹುದು.

(ಎಫ್) ಯಾವುದೇ ಬಹು–ರಾಜ್ಯ ಸಹಕಾರಿ ಸೊಸೈಟಿಗೆ, ಸಹಾಯಧನಗಳು ಸೇರಿದಂತೆ, ಯಾವುದೇ ಇತರ ರೀತಿಯಲ್ಲಿ ಹಣಕಾಸಿನ ಸಹಾಯವನ್ನು ನೀಡಬಹುದು; ಮತ್ತು

(ಜಿ) ನಿಯಮಿಸಬಹುದಾದಂಥ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಯಾವುದೇ ಇತರ ಬಹು–ರಾಜ್ಯ ಸಹಕಾರಿ ಸೊಸೈಟಿಗೆ ನೆರವನ್ನು ಒದಗಿಸಬಹುದು.

## ಅಧ್ಯಾಯ – VII

## ಬಹು–ರಾಜ್ಯ ಸಹಕಾರಿ ಸೊಸೈಟಿಗಳ ಸ್ವತ್ತುಗಳು ಮತ್ತು ನಿಧಿಗಳು

**62. ನಿಧಿಗಳನ್ನು ಲಾಭದ ರೂಪದಲ್ಲಿ ವಿಭಾಗಿಸತಕ್ಕದ್ದಲ್ಲ.–** (1) ನಿವ್ವಳ ಲಾಭವನ್ನು ಹೊರತುಪಡಿಸಿ, ಬಹು–ರಾಜ್ಯ ಸಹಕಾರಿ ಸೊಸೈಟಿಯ ನಿಧಿಗಳ ಯಾವುದೇ ಭಾಗವನ್ನು ಬೋನಸ್ಸಿನ ಅಥವಾ ಲಾಭಾಂಶಗಳ ರೂಪದಲ್ಲಿ ವಿಭಾಗಿಸತಕ್ಕದ್ದಲ್ಲ ಅಥವಾ ಸದಸ್ಯರಿಗೆ ಅನ್ಯಥಾ ಹಂಚತಕ್ಕದ್ದಲ್ಲ.

(2) ಲಾಭ ಗಳಿಸುವ ಸೊಸೈಟಿಗೆ ಸಂಬಂಧಿಸಿದಂತೆ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಬಹು–ರಾಜ್ಯ ಸಹಕಾರಿ ಸೊಸೈಟಿಯ ನಿವ್ವಳ ಲಾಭಗಳನ್ನು, ಅವಧಿ ಮೀರಿದ ಮೊತ್ತಗಳಿಗೆ ಸಂಬಂಧಿಸಿದಂತೆ ಪ್ರಾಪ್ತವಾದ ಮತ್ತು ಪ್ರಾಪ್ತವಾಗಲಿರುವ ಎಲ್ಲಾ ಬಡ್ಡಿಯನ್ನು, ಸಿಬ್ಬಂದಿ ಖರ್ಚುಗಳನ್ನು, ಸಾಲಗಳ ಮೇಲೆ ಮತ್ತು ಠೇವಣಿಗಳ ಮೇಲೆ ಸಂದಾಯವಾಗಬೇಕಾದ ಬಡ್ಡಿಯನ್ನು, ಲೆಕ್ಕಪರಿಶೋಧನಾ ಫೀಜನ್ನು, ದುರಸ್ತಿ, ಬಾಡಿಗೆ, ತೆರಿಗೆಗಳು ಮತ್ತು ಸವಕಳಿ ಸೇರಿದಂತೆ ಕಾರ್ಯ ವೆಚ್ಚಗಳನ್ನು, ಬೋನಸು ಸಂದಾಯಕ್ಕೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಮೇರೆಗೆ ನೌಕರರಿಗೆ ಸಂದಾಯವಾಗಬೇಕಾದ ಬೋನಸ್ಸನ್ನು ಮತ್ತು ಅಂಥ ಬೋನಸ್ಸಿಗಾಗಿ ಸಮೀಕರಣ ನಿಧಿಯನ್ನು, ಆದಾಯ ತೆರಿಗೆ ಸಂದಾಯಕ್ಕಾಗಿ ವ್ಯವಸ್ಥೆ ಮಾಡುವ ಹಣವನ್ನು ಮತ್ತು ಆದಾಯ ತೆರಿಗೆ ಅಧಿನಿಯಮ, 1961 (1961ರ 43)ರ ಮೇರೆಗೆ ಅನುಮೋದಿತ ದೇಣಿಗೆಗಳ ನೀಡಿಕೆಯನ್ನು, ಅಭಿವೃದ್ಧಿ ಸೋಡಿಯನ್ನು, ಅಭಿವೃದ್ಧಿ ನಿಧಿಗೆ ವ್ಯವಸ್ಥೆ ಮಾಡಿದ ಹಣವನ್ನು, ವಸೂಲಾಗದ ಸಾಲ ನಿಧಿಯನ್ನು, ಬೆಲೆ ಏರಿಳಿತ ನಿಧಿಯನ್ನು, ಲಾಭಾಂಶ ಸಮೀಕರಣ ನಿಧಿಯನ್ನು, ಷೇರು ಬಂಡವಾಳ ವಿಮೋಚನಾ ನಿಧಿಯನ್ನು, ಹೂಡಿಕೆ ಏರಿಳಿತ

ನಿಧಿಯನ್ನು, ನೌಕರರಿಗೆ ನಿವೃತ್ತಿ ಸೌಲಭ್ಯಗಳಿಗೆ ವ್ಯವಸ್ಥೆ ಮಾಡಿದ ಹಣವನ್ನು, ಮತ್ತು ಲಾಭದಿಂದ ಸೃಜಿಸಿದ ಯಾವುದೇ ನಿಧಿಗೆ ಸರಿಹೊಂದಿಸಲಾಗದ ವಸೂಲಾಗದ ಋಣಗಳಿಗೆ ಮತ್ತು ನಷ್ಟಗಳಿಗೆ ಅವಕಾಶ ಕಲ್ಪಿಸಿದ ತರುವಾಯ ಅಥವಾ ಅವುಗಳನ್ನು ಲೆಕ್ಕದಿಂದ ತೆಗೆದುಹಾಕಿದ ನಂತರ ಆ ವರ್ಷದ ಒಟ್ಟು ಲಾಭದಿಂದ ಕಡಿತಗೊಳಿಸುವ ಮೂಲಕ ಲೆಕ್ಕಹಾಕತಕ್ಕದ್ದು:

ಪರಂತು, ಅಂಥ ಸೊಸೈಟಿಯು, ಹಿಂದಿನ ವರ್ಷಗಳಲ್ಲಿ ಗಳಿಸಿದ ಆದರೆ ಪ್ರಸಕ್ತ ವರ್ಷದಲ್ಲಿ ವಾಸ್ತವಿಕವಾಗಿ ವಸೂಲಿ ಮಾಡಿದ ಬಡ್ಡಿಯನ್ನು ವರ್ಷದ ನಿವ್ವಳ ಲಾಭಕ್ಕೆ ಸೇರಿಸಬಹುದು:

ಮತ್ತೂ ಪರಂತು, ಷೇರು ಬಂಡವಾಳವನ್ನು ಹೊಂದಿರದ ಅಂಥ ಬಹು-ರಾಜ್ಯ ಸಹಕಾರಿ ಸೊಸೈಟಿಗಳ ಸಂದರ್ಭದಲ್ಲಿ, ವೆಚ್ಚವನ್ನು ಮೀರಿದ ಆದಾಯ ಹೆಚ್ಚಳವನ್ನು ನಿವ್ವಳ ಲಾಭಗಳೆಂದು ಪರಿಗಣಿಸತಕ್ಕದ್ದಲ್ಲ ಮತ್ತು ಅಂಥ ಹೆಚ್ಚಳವನ್ನು ಉಪ-ವಿಧಿಗಳಿಗನುಸಾರವಾಗಿ ನಿರ್ವಹಿಸತಕ್ಕದ್ದು.

**63. ನಿವ್ವಳ ಲಾಭಗಳ ವಿಲೆ.-** (1) ಬಹು-ರಾಜ್ಯ ಸಹಕಾರಿ ಸೊಸೈಟಿಯು ಯಾವುದೇ ವರ್ಷದಲ್ಲಿನ ತನ್ನ ನಿವ್ವಳ ಲಾಭಗಳಿಂದ,-

(ಎ) ಶೇಕಡಾ ಇಪ್ಪತ್ತೈದಕ್ಕಿಂತ ಕಡಿಮೆಯಲ್ಲದಷ್ಟು ಮೊಬಲಗನ್ನು ಮೀಸಲು ನಿಧಿಗೆ ವರ್ಗಾಯಿಸತಕ್ಕದ್ದು;

(ಬಿ) ಭಾರತ ರಾಷ್ಟ್ರೀಯ ಸಹಕಾರಿ ಒಕ್ಕೂಟ ಲಿಮಿಟೆಡ್, ನವದೆಹಲಿ, ಇದು ನಿರ್ವಹಿಸುವ ಸಹಕಾರಿ ಶಿಕ್ಷಣ ನಿಧಿಗೆ ನಿಯಮಿಸಬಹುದಾದಂಥ ರೀತಿಯಲ್ಲಿ ಶೇಕಡಾ ಒಂದರಷ್ಟನ್ನು ಜಮೆ ಮಾಡತಕ್ಕದ್ದು;

(ಸಿ) ಅನಿರೀಕ್ಷಿತ ನಷ್ಟಗಳನ್ನು ಭರಿಸುವುದಕ್ಕಾಗಿ ಮೀಸಲು ನಿಧಿಗೆ ಶೇಕಡ ಹತ್ತರಷ್ಟಕ್ಕೆ ಕಡಿಮೆಯಲ್ಲದ ಮೊಬಲಗನ್ನು ವರ್ಗಾಯಿಸತಕ್ಕದ್ದು.

(2) ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ನಿವ್ವಳ ಲಾಭಗಳ ಶಿಲ್ಕನ್ನು ಈ ಮುಂದಿನ ಎಲ್ಲ ಅಥವಾ ಯಾವುವೇ ಉದ್ದೇಶಗಳಿಗಾಗಿ ಉಪಯೋಗಿಸಬಹುದು, ಎಂದರೆ:-

(ಎ) ನಿಯಮಿಸಿದ ಮಿತಿಯನ್ನು ಮೀರದ ದರದಲ್ಲಿ ತಮ್ಮ ಸಂದಾಯಿತ ಷೇರು ಬಂಡವಾಳದ ಮೇಲೆ ಸದಸ್ಯರಿಗೆ ಲಾಭಾಂಶವನ್ನು ಸಂದಾಯ ಮಾಡುವುದು;

(ಬಿ) ಶಿಕ್ಷಣ ನಿಧಿಗಳೂ ಸೇರಿದಂತೆ ಉಪ-ವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಿಶೇಷ ನಿಧಿಗಳನ್ನು ರಚಿಸುವುದು ಅಥವಾ ಅದಕ್ಕೆ ವಂತಿಗೆ ನೀಡುವುದು;

(ಸಿ) ಸಹಕಾರಿ ಚಳವಳಿಯ ಅಭಿವೃದ್ಧಿಗೆ ಸಂಬಂಧಿಸಿದ ಯಾವುದೇ ಉದ್ದೇಶಕ್ಕಾಗಿ ಅಥವಾ ಧಾರ್ಮಿಕ ದತ್ತಿಗಳ ಅಧಿನಿಯಮ, 1890 (1890ರ 6)ರ 2ನೇ ಪ್ರಕರಣದಲ್ಲಿ ಪರಿಭಾಷಿಸಿದಂತೆ ಧಾರ್ಮಿಕ ಉದ್ದೇಶಕ್ಕೆ ನಿವ್ವಳ ಲಾಭಗಳ ಶೇಕಡಾ ಐದರಷ್ಟನ್ನು ಮೀರದ ಮೊಬಲಗನ್ನು ದೇಣಿಗೆ ನೀಡುವುದು;

(ಡಿ) ಉಪ-ವಿಧಿಗಳಲ್ಲಿ ನಿರ್ದಿಷ್ಟಪಡಿಸಿರುವಷ್ಟರ ಮಟ್ಟಿಗೆ ಮತ್ತು ಆ ರೀತಿಯಲ್ಲಿ ಬಹು-ರಾಜ್ಯ ಸಹಕಾರಿ ಸೊಸೈಟಿಯ ನೌಕರರಿಗೆ ಎಕ್ಸ್‌ಗ್ರೇಷಿಯಾ ಮೊಬಲಗನ್ನು ಸಂದಾಯ ಮಾಡುವುದು.

**64. ನಿಧಿಗಳ ಹೂಡಿಕೆ.–** ಬಹು–ರಾಜ್ಯ ಸಹಕಾರಿ ಸೊಸೈಟಿಯು ತನ್ನ ನಿಧಿಗಳನ್ನು,–

(ಎ) ಸಹಕಾರಿ ಬ್ಯಾಂಕಿನಲ್ಲಿ, ರಾಜ್ಯ ಸಹಕಾರಿ ಬ್ಯಾಂಕಿನಲ್ಲಿ, ಸಹಕಾರಿ ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ಅಥವಾ ಕೇಂದ್ರ ಸಹಕಾರಿ ಬ್ಯಾಂಕಿನಲ್ಲಿ; ಅಥವಾ

(ಬಿ) ಭಾರತ ನ್ಯಾಸಗಳ ಅಧಿನಿಯಮ, 1882 (1882ರ 2)ರ 20ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಭದ್ರತಾ ಪತ್ರಗಳಲ್ಲಿ; ಅಥವಾ

(ಸಿ) ಯಾವುದೇ ಇತರ ಬಹು–ರಾಜ್ಯ ಸಹಕಾರಿ ಸೊಸೈಟಿಯ ಅಥವಾ ಯಾವುದೇ ಸಹಕಾರಿ ಸೊಸೈಟಿಯ ಷೇರುಗಳಲ್ಲಿ ಅಥವಾ ಭದ್ರತಾ ಪತ್ರಗಳಲ್ಲಿ; ಅಥವಾ

(ಡಿ) ಸಹಾಯಕ ಸಂಸ್ಥೆಯ ಅಥವಾ ಯಾವುದೇ ಇತರ ಸಂಸ್ಥೆಯ ಷೇರುಗಳಲ್ಲಿ, ಭದ್ರತಾ ಪತ್ರಗಳಲ್ಲಿ ಅಥವಾ ಆಸ್ತಿಗಳಲ್ಲಿ; ಅಥವಾ

(ಇ) ಯಾವುದೇ ಇತರ ಬ್ಯಾಂಕಿನಲ್ಲಿ; ಅಥವಾ

(ಎಫ್) ಉಪ–ವಿಧಿಗಳಲ್ಲಿ ಉಪಬಂಧಿಸಬಹುದಾದಂಥ ಇತರ ವಿಧಾನಗಳಲ್ಲಿ

– ಹೂಡಿಕೆ ಮಾಡಬಹುದು ಅಥವಾ ಠೇವಣಿ ಇಡಬಹುದು.

**ವಿವರಣೆ:–** (ಇ) ಖಂಡದ ಉದ್ದೇಶಗಳಿಗಾಗಿ, "ಬ್ಯಾಂಕ್" ಎಂದರೆ ಬ್ಯಾಂಕುಗಳ ವಿನಿಯಮನ ಅಧಿನಿಯಮ, 1949 (1949ರ 10) ರ 5ನೇ ಪ್ರಕರಣದ (ಸಿ) ಖಂಡದಲ್ಲಿ ಪರಿಭಾಷಿಸಿದಂತೆ ಯಾವುದೇ ಬ್ಯಾಂಕಿಂಗ್ ಕಂಪೆನಿ ಎಂದು ಅರ್ಥ; ಮತ್ತು ಅದು,–

(i) ಭಾರತೀಯ ಸ್ಟೇಟ್ ಬ್ಯಾಂಕ್ ಅಧಿನಿಯಮ, 1955 (1955ರ 23)ರ ಮೇರೆಗೆ ರಚಿತವಾದ ಭಾರತೀಯ ಸ್ಟೇಟ್ ಬ್ಯಾಂಕನ್ನು;

(ii) ಭಾರತೀಯ ಸ್ಟೇಟ್ ಬ್ಯಾಂಕ್ (ಸಹಾಯಕ ಬ್ಯಾಂಕುಗಳು) ಅಧಿನಿಯಮ, 1959 (1959ರ 38)ರ 2ನೇ ಪ್ರಕರಣದ (ಕೆ) ಖಂಡದಲ್ಲಿ ಪರಿಭಾಷಿಸಿದಂತೆ ಸಹಾಯಕ ಬ್ಯಾಂಕನ್ನು;

(iii) ಬ್ಯಾಂಕಿಂಗ್ ಕಂಪೆನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970 (1970ರ 5) ರ 3ನೇ ಪ್ರಕರಣದ ಮೇರೆಗೆ ರಚಿತವಾದ ಸಂವಾದಿ ಹೊಸ ಬ್ಯಾಂಕ್ ಅಥವಾ ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1980 (1980ರ 40)ರ 3ನೇ ಪ್ರಕರಣದ ಮೇರೆಗೆ ರಚಿತವಾದ ಸಂವಾದಿ ಹೊಸ ಬ್ಯಾಂಕನ್ನು

– ಒಳಗೊಳ್ಳುತ್ತದೆ.

**65. ವಂತಿಗೆ ಮೇಲೆ ನಿರ್ಬಂಧ.–** ಯಾವುದೇ ಬಹು–ರಾಜ್ಯ ಸಹಕಾರಿ ಸೊಸೈಟಿಯು, ರಾಜಕೀಯ ಪಕ್ಷದ ಹಿತಾಸಕ್ತಿಯನ್ನು ಮುಂದುವರಿಸುವ ಉದ್ದೇಶವನ್ನು ಹೊಂದಿದ ಸಂಸ್ಥೆಗೆ ಪ್ರತ್ಯಕ್ಷವಾಗಿ ಆಗಲಿ ಅಥವಾ ಪರೋಕ್ಷವಾಗಿ ಆಗಲಿ ಹಣದ ರೂಪದಲ್ಲಿ ಅಥವಾ ವಸ್ತು ರೂಪದಲ್ಲಿ ವಂತಿಗೆಯನ್ನು ನೀಡತಕ್ಕದ್ದಲ್ಲ.

**66. ಸಾಲಗಳ ನೀಡಿಕೆ ಮೇಲಿನ ನಿರ್ಬಂಧ.–** (1) ಸಹಕಾರಿ ಬ್ಯಾಂಕನ್ನು ಹೊರತುಪಡಿಸಿ, ಯಾವುದೇ ಬಹು–ರಾಜ್ಯ ಸಹಕಾರಿ ಸೊಸೈಟಿಯು ಸದಸ್ಯನಿಗೆ ಆತನ ಷೇರಿನ ಭದ್ರತೆಯ ಮೇಲಾಗಲಿ ಅಥವಾ ಸದಸ್ಯನಲ್ಲದವನ ಭದ್ರತೆಯ ಮೇಲಾಗಲೀ ಸಾಲವನ್ನು ನೀಡತಕ್ಕದ್ದಲ್ಲ.

(2) (1)ನೇ ಉಪ–ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಬಹು–ರಾಜ್ಯ ಸಹಕಾರಿ ಸೊಸೈಟಿಯು ಠೇವಣಿಧಾರಕನಿಗೆ ಆತನ ಠೇವಣಿಯ ಭದ್ರತೆಯ ಮೇಲೆ ಸಾಲವನ್ನು ನೀಡಬಹುದು.

**67. ಸಾಲ ಪಡೆಯುವುದಕ್ಕೆ ನಿರ್ಬಂಧ.–** (1) ಬಹು–ರಾಜ್ಯ ಸಹಕಾರಿ ಸೊಸೈಟಿಯು, ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಷ್ಟರ ಮಟ್ಟಿಗೆ ಮತ್ತು ಅಂಥ ಷರತ್ತುಗಳ ಮೇರೆಗೆ ಬಾಹ್ಯ ಮೂಲಗಳಿಂದ ಠೇವಣಿ ಸ್ವೀಕರಿಸಬಹುದು, ಸಾಲಗಳನ್ನು ಎತ್ತಬಹುದು ಮತ್ತು ಅನುದಾನಗಳನ್ನು ಸ್ವೀಕರಿಸಬಹುದು:

ಪರಂತು, ಯಾವುದೇ ಹಣಕಾಸು ವರ್ಷದಲ್ಲಿ ಸ್ವೀಕರಿಸಿದ ಠೇವಣಿಗಳ ಮತ್ತು ಸಾಲಗಳ ಒಟ್ಟು ಮೊಬಲಗು, ವಂತಿಗೆ ಕೊಡಲು ಒಪ್ಪಿಕೊಂಡ ಷೇರು ಬಂಡವಾಳದ ಮತ್ತು ಸಂಚಿತ ಮೀಸಲು ಮೊಬಲಗಿನ ಹತ್ತು ಪಟ್ಟನ್ನು ಮೀರತಕ್ಕದ್ದಲ್ಲ:

ಮತ್ತು ಪರಂತು, ವಂತಿಗೆ ಕೊಡಲು ಒಪ್ಪಿಕೊಂಡ ಷೇರುಬಂಡವಾಳ ಮತ್ತು ಸಂಚಿತ ಮೀಸಲಿನ ಒಟ್ಟು ಮೊಬಲಗನ್ನು ಲೆಕ್ಕ ಹಾಕುವಾಗ, ಸಂಚಿತ ನಷ್ಟವನ್ನು ಕಳೆಯತಕ್ಕದ್ದು.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಬಹು–ರಾಜ್ಯ ಸಹಕಾರಿ ಸೊಸೈಟಿಯು ಪರಸ್ಪರ ಮಾಡಿಕೊಂಡ ಕರಾರಿನಂತೆ, ಅಂಥ ನಿಬಂಧನೆಗಳು ಮತ್ತು ಷರತ್ತಿನ ಮೇರೆಗೆ ತನ್ನ ಉದ್ದೇಶಗಳ ಈಡೇರಿಕೆಗಾಗಿ ನಿಧಿಗಳನ್ನು ಸ್ವೀಕಾರ ಮಾಡಬಹುದು ಅಥವಾ ನಿಧಿಗಳನ್ನು ಸಾಲವಾಗಿ ತೆಗೆದುಕೊಳ್ಳಬಹುದು.

(3) ಬಹು–ರಾಜ್ಯ ಸಹಕಾರಿ ಸೊಸೈಟಿಯು, ತನ್ನ ಸಂದಾಯಿತ ಷೇರು ಬಂಡವಾಳದ ಶೇಕಡಾ ಇಪ್ಪತ್ತೈದಷ್ಟನ್ನು ತನ್ನ ಉದ್ದೇಶಗಳ ಈಡೇರಿಕೆಗಾಗಿ ಸಂಪನ್ಮೂಲಗಳನ್ನು ಸಂಗ್ರಹಿಸಿಕೊಳ್ಳುವುದಕ್ಕೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಿಗೊಳಪಟ್ಟು ಪರಿವರ್ತನೀಯವಲ್ಲದ ಡಿಬೆಂಚರುಗಳನ್ನು ಅಥವಾ ಇತರ ಲಿಖಿತಗಳನ್ನು ಹೊರಡಿಸಬಹುದು.

**68. ಸದಸ್ಯೇತರರೊಂದಿಗೆ ನಡೆಸುವ ಇತರ ವ್ಯವಹಾರಗಳ ಮೇಲೆ ನಿರ್ಬಂಧ.–** 66 ಮತ್ತು 67ನೇ ಪ್ರಕರಣಗಳಲ್ಲಿ ಉಪಬಂಧಿಸಿದುದನ್ನುಳಿದು, ಸದಸ್ಯನ ಹೊರತಾದ ಯಾರೇ ಇತರ ವ್ಯಕ್ತಿಯೊಂದಿಗೆ ನಡೆಸುವ ಬಹು–ರಾಜ್ಯ ಸಹಕಾರಿ ಸೊಸೈಟಿಯು ನಡೆಸುವ ವ್ಯವಹಾರವು ಉಪ–ವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದ ನಿಷೇಧಗಳು ಮತ್ತು ನಿರ್ಬಂಧಗಳು, ಯಾವುವಾದರೂ ಇದ್ದರೆ, ಅವುಗಳಿಗೆ ಒಳಪಟ್ಟಿರತಕ್ಕದ್ದು.

**69. ವಂತಿಗೆ ಭವಿಷ್ಯ ನಿಧಿ.–** (1) ನೌಕರರ ಭವಿಷ್ಯ ನಿಧಿ ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, 1952 (1952ರ 19) ರ ಉಪಬಂಧಗಳಿಗೆ ಒಳಪಟ್ಟು, ನಿಯಮಿಸಬಹುದುದಾದಂಥ ಸಂಖ್ಯೆಯ ಅಥವಾ ವರ್ಗದ ನೌಕರರನ್ನು ಹೊಂದಿರುವ ಬಹು–ರಾಜ್ಯ ಸಹಕಾರಿ ಸೊಸೈಟಿಯು ತನ್ನ ನೌಕರರ ಪ್ರಯೋಜನಕ್ಕಾಗಿ ವಂತಿಗೆ ಭವಿಷ್ಯ ನಿಧಿಯನ್ನು ಸ್ಥಾಪಿಸಬಹುದು, ಮತ್ತು ಸೊಸೈಟಿಯ ಉಪ–ವಿಧಿಗಳಿಗೆ ಅನುಸಾರವಾಗಿ ಸೊಸೈಟಿಯ ನೌಕರರು ಮತ್ತು ಸೊಸೈಟಿಯು ನೀಡಿದ ಎಲ್ಲ ವಂತಿಗೆಗಳನ್ನು ಅದಕ್ಕೆ ಜಮೆ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಬಹು–ರಾಜ್ಯ ಸಹಕಾರಿ ಸೊಸೈಟಿಯು ಸ್ಥಾಪಿಸಿದ ಯಾವುದೇ ವಂತಿಗೆ ಭವಿಷ್ಯ ನಿಧಿಗೆ ಜಮೆಯಾಗಿರುವ ಹಣವನ್ನು,-

(ಎ) ಸೊಸೈಟಿಯ ವ್ಯವಹಾರದಲ್ಲಿ ಬಳಸತಕ್ಕದ್ದಲ್ಲ;

(ಬಿ) ಸೊಸೈಟಿಯ ಆಸ್ತಿಗಳ ಭಾಗವಾಗಿರತಕ್ಕದ್ದಲ್ಲ;

(ಸಿ) ಜಪ್ತಿಗೆ ಗುರಿಯಾಗತಕ್ಕದ್ದಲ್ಲ ಅಥವಾ ಯಾವುದೇ ನ್ಯಾಯಾಲಯ ಅಥವಾ ಇತರ ಪ್ರಾಧಿಕಾರದ ಯಾವುದೇ ಇತರ ಪ್ರಕ್ರಿಯೆಗೆ ಒಳಪಡತಕ್ಕದ್ದಲ್ಲ.

## ಅಧ್ಯಾಯ – VIII

### ಲೆಕ್ಕ ಪರಿಶೋಧನೆ, ವಿಚಾರಣೆ, ಪರಿಶೀಲನೆ ಮತ್ತು ಸರ್ ಚಾರ್ಜ್

**70. ಲೆಕ್ಕಪರಿಶೋಧಕರ ನೇಮಕ ಮತ್ತು ಅವರ ಸಂಭಾವನೆ.–** (1) ಪ್ರತಿಯೊಂದು ಬಹು–ರಾಜ್ಯ ಸಹಕಾರಿ ಸೊಸೈಟಿಯು ಪ್ರತಿ ವರ್ಷ ಕನಿಷ್ಠ ಒಂದು ಸಲ ತನ್ನ ಲೆಕ್ಕಪತ್ರಗಳ ಪರಿಶೋಧನೆಯನ್ನು (2)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಲೆಕ್ಕ ಪರಿಶೋಧಕನಿಂದ ಮಾಡಿಸತಕ್ಕದ್ದು.

(2) ಪ್ರತಿಯೊಂದು ಬಹು–ರಾಜ್ಯ ಸಹಕಾರಿ ಸೊಸೈಟಿಯು ತನ್ನ ಪ್ರತಿಯೊಂದು ವಾರ್ಷಿಕ ಸಾಮಾನ್ಯ ಸಭೆಯಲ್ಲಿ, ಆ ಸಭೆಯ ಮುಕ್ತಾಯದಿಂದ, ಮುಂದಿನ ವಾರ್ಷಿಕ ಸಾಮಾನ್ಯ ಸಭೆಯ ಮುಕ್ತಾಯದವರೆಗೆ ಪದಧಾರಣೆ ಮಾಡಲು ಲೆಕ್ಕ ಪರಿಶೋಧಕನನ್ನು ಅಥವಾ ಲೆಕ್ಕ ಪರಿಶೋಧಕರನ್ನು ನೇಮಕಮಾಡತಕ್ಕದ್ದು ಮತ್ತು ನೇಮಕವಾದ ಏಳು ದಿನಗಳೊಳಗೆ ಹಾಗೆ ನೇಮಕ ಮಾಡಿದ ಪ್ರತಿಯೊಬ್ಬ ಲೆಕ್ಕ ಪರಿಶೋಧಕನಿಗೆ ಅದರ ಬಗ್ಗೆ ತಿಳಿಸತಕ್ಕದ್ದು:

ಪರಂತು, ಅಂಥ ಲೆಕ್ಕ ಪರಿಶೋಧಕನನ್ನು ಅಥವಾ ಲೆಕ್ಕ ಪರಿಶೋಧಕರನ್ನು ಕೇಂದ್ರ ರಿಜಿಸ್ಟ್ರಾರನು ಅನುಮೋದಿಸಿದ ಲೆಕ್ಕ ಪರಿಶೋಧಕರ ಪಟ್ಟಿಯೊಳಗಿಂದ ಅಥವಾ ಬಹು–ರಾಜ್ಯ ಸಹಕಾರಿ ಸೊಸೈಟಿಯು ಸಿದ್ಧಪಡಿಸಿದ ಲೆಕ್ಕ ಪರಿಶೋಧಕರ ಪಟ್ಟಿ, ಯಾವುದಾದರೂ ಇದ್ದರೆ, ಅದರೊಳಗಿಂದ ನೇಮಕ ಮಾಡಬಹುದು.

(3) (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ ಲೆಕ್ಕ ಪರಿಶೋಧಕನು ತನ್ನ ನೇಮಕದ ಸೂಚನೆಯನ್ನು ಬಹು–ರಾಜ್ಯ ಸಹಕಾರಿ ಸೊಸೈಟಿಯಿಂದ ತನ್ನ ನೇಮಕದ ಸೂಚನೆಯನ್ನು ಪಡೆದ ಮೂವತ್ತು ದಿವಸಗಳೊಳಗೆ ತಾನು ಆ ನೇಮಕವನ್ನು ಅಂಗೀಕರಿಸಿದ್ದೇನೆಂದು ಅಥವಾ ಅಂಗೀಕರಿಸಲು ನಿರಾಕರಿಸಿದ್ದೇನೆಂದು ಲಿಖಿತದಲ್ಲಿ ಕೇಂದ್ರ ರಿಜಿಸ್ಟ್ರಾರನಿಗೆ ತಿಳಿಸತಕ್ಕದ್ದು.

(4) ನಿವೃತ್ತಿಯಾಗಲಿರುವ ಲೆಕ್ಕಪರಿಶೋಧಕನನ್ನು,-

(ಎ) ಅವನು ಮರು ನೇಮಕಕ್ಕೆ ಅರ್ಹನಾಗಿಲ್ಲದ ಹೊರತು;

(ಬಿ) ಅವನು ಮರು ನೇಮಕಕ್ಕೆ ತನಗೆ ಇಷ್ಟವಿಲ್ಲದಿರುವುದರ ಬಗ್ಗೆ ಲಿಖಿತ ನೋಟೀಸನ್ನು ಬಹು–ರಾಜ್ಯ ಸಹಕಾರಿ ಸೊಸೈಟಿಗೆ ನೀಡಿದ ಹೊರತು;

(ಸಿ) ಆತನ ಬದಲಾಗಿ ಬೇರೆಯವರನ್ನು ನೇಮಕ ಮಾಡಲಾಗುವುದೆಂದು ಅಥವಾ ಆತನನ್ನು ಮರು ನೇಮಕಾತಿ ಮಾಡತಕ್ಕದ್ದಲ್ಲವೆಂದು ಸ್ಪಷ್ಟವಾಗಿ ವ್ಯಕ್ತಪಡಿಸಿದ ಠರಾವನ್ನು ಸದಸ್ಯರ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಿದ ಹೊರತು;

(ಡಿ) ನಿವೃತ್ತಿಯಾಗುವ ಲೆಕ್ಕ ಪರಿಶೋಧಕನ ಸ್ಥಾನದಲ್ಲಿ ಬೇರೆ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳನ್ನು ನೇಮಕ ಮಾಡಲು ಉದ್ದೇಶಿತ ಠರಾವಿನ ನೋಟೀಸನ್ನು ನೀಡಿರುವಲ್ಲಿ ಮತ್ತು ಸಂದರ್ಭಾನುಸಾರ ಆ ವ್ಯಕ್ತಿಯ ಅಥವಾ ಎಲ್ಲ ವ್ಯಕ್ತಿಗಳ ಮರಣದ, ಅಸಮರ್ಥತೆಯ ಅಥವಾ ಅನರ್ಹತೆಯ ಕಾರಣದಿಂದ ಆ ಠರಾವನ್ನು ಜಾರಿಗೊಳಿಸಲು ಸಾಧ್ಯವಾಗದಿರುವಲ್ಲಿ

– ಮರುನೇಮಕ ಮಾಡತಕ್ಕದ್ದು.

(5) ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಲೆಕ್ಕ ಪರಿಶೋಧಕರನ್ನು ನೇಮಕ ಮಾಡದಿದ್ದಲ್ಲಿ ಅಥವಾ ಮರು ನೇಮಕ ಮಾಡದಿದ್ದಲ್ಲಿ, ಕೇಂದ್ರ ರಿಜಿಸ್ಟ್ರಾರನು ಖಾಲಿಸ್ಥಾನವನ್ನು ಭರ್ತಿ ಮಾಡಲು ಒಬ್ಬ ವ್ಯಕ್ತಿಯನ್ನು ನೇಮಕ ಮಾಡಬಹುದು.

(6) ಬಹು–ರಾಜ್ಯ ಸಹಕಾರಿ ಸೊಸೈಟಿಯ ಮೊದಲ ಲೆಕ್ಕಪರಿಶೋಧಕನನ್ನು ಅಥವಾ ಲೆಕ್ಕಪರಿಶೋಧಕರನ್ನು ಅಂಥ ಸೊಸೈಟಿಯ ನೋಂದಣಿ ದಿನಾಂಕದ ಒಂದು ತಿಂಗಳೊಳಗೆ ಮಂಡಲಿಯು ನೇಮಕ ಮಾಡತಕ್ಕದ್ದು ಮತ್ತು ಹಾಗೆ ನೇಮಕಗೊಂಡ ಲೆಕ್ಕ ಪರಿಶೋಧಕನು ಅಥವಾ ಲೆಕ್ಕ ಪರಿಶೋಧಕರು ಮೊದಲ ವಾರ್ಷಿಕ ಸಾಮಾನ್ಯ ಸಭೆಯು ಮುಕ್ತಾಯವಾಗುವವರೆಗೆ ಪದಧಾರಣ ಮಾಡತಕ್ಕದ್ದು:

ಪರಂತು,–

(ಎ) ಬಹು–ರಾಜ್ಯ ಸಹಕಾರಿ ಸೊಸೈಟಿಯು ತನ್ನ ಸಾಮಾನ್ಯ ಸಭೆಯಲ್ಲಿ ಅಂಥ ಯಾರೇ ಲೆಕ್ಕ ಪರಿಶೋಧಕನನ್ನು ಅಥವಾ ಅಂಥ ಎಲ್ಲ ಅಥವಾ ಅವರಲ್ಲಿ ಯಾರೇ ಲೆಕ್ಕಪರಿಶೋಧಕನನ್ನು ತೆಗೆದುಹಾಕಬಹುದು ಮತ್ತು ಆತನ ಅಥವಾ ಅವರ ಸ್ಥಾನದಲ್ಲಿ, ಬಹು–ರಾಜ್ಯ ಸಹಕಾರಿ ಸೊಸೈಟಿಯ ಯಾರೇ ಸದಸ್ಯನು ನೇಮಕಕ್ಕಾಗಿ ಯಾರನ್ನು ನಾಮನಿರ್ದೇಶನ ಮಾಡಲಾಗಿದೆಯೋ ಮತ್ತು ಯಾರ ನಾಮನಿರ್ದೇಶನದ ನೋಟೀಸನ್ನು ಸಭೆಯ ದಿನಾಂಕಕ್ಕೆ ಮುಂಚೆ ಹದಿನಾಲ್ಕು ದಿನಗಳಿಗಿಂತ ಕಡಿಮೆಯಿಲ್ಲದಂತೆ ಬಹು–ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯರಿಗೆ ನೀಡಲಾಗಿದೆಯೋ ಆ ಯಾರೇ ಇತರ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳನ್ನು ನೇಮಕ ಮಾಡಬಹುದು; ಮತ್ತು

(ಬಿ) ಮಂಡಲಿಯು ಈ ಉಪಪ್ರಕರಣದ ಮೇರೆಗೆ ತನ್ನ ಅಧಿಕಾರಗಳನ್ನು ಚಲಾಯಿಸಲು ವಿಫಲವಾದಲ್ಲಿ, ಬಹು–ರಾಜ್ಯ ಸಹಕಾರಿ ಸೊಸೈಟಿಯು ತನ್ನ ಸಾಮಾನ್ಯ ಸಭೆಯಲ್ಲಿ ಮೊದಲಿನ ಲೆಕ್ಕ ಪರಿಶೋಧಕನನ್ನು ಅಥವಾ ಲೆಕ್ಕ ಪರಿಶೋಧಕರನ್ನು ನೇಮಕ ಮಾಡಬಹುದು.

(7) (ಎ) ಬಹು–ರಾಜ್ಯ ಸಹಕಾರಿ ಸೊಸೈಟಿಯು ಲೆಕ್ಕ ಪರಿಶೋಧಕನ ಪದದಲ್ಲಿನ ಯಾವುದೇ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಬಹುದು; ಆದರೆ ಅಂಥ ಯಾವುದೇ ಖಾಲಿ ಸ್ಥಾನವು ಮುಂದುವರೆದರೆ, ಉಳಿದ ಲೆಕ್ಕಪರಿಶೋಧಕನು ಅಥವಾ ಲೆಕ್ಕ ಪರಿಶೋಧಕರು, ಯಾರಾದರೂ ಇದ್ದರೆ, ಅವರು ಕಾರ್ಯನಿರ್ವಹಿಸಬಹುದು:

ಪರಂತು, ಅಂಥ ಖಾಲಿ ಸ್ಥಾನವು ಲೆಕ್ಕಪರಿಶೋಧಕನ ರಾಜೀನಾಮೆಯಿಂದ ಉಂಟಾದಲ್ಲಿ, ಆ ಖಾಲಿ ಸ್ಥಾನವನ್ನು ಬಹು–ರಾಜ್ಯ ಸಹಕಾರಿ ಸೊಸೈಟಿಯು ತನ್ನ ಸಾಮಾನ್ಯ ಸಭೆಯಲ್ಲಿ ಮಾತ್ರವೇ ಭರ್ತಿ ಮಾಡತಕ್ಕದ್ದು.

(ಬಿ) ಆಕಸ್ಮಿಕ ಖಾಲಿ ಸ್ಥಾನದಲ್ಲಿ ನೇಮಕಗೊಂಡ ಯಾರೇ ಲೆಕ್ಕಪರಿಶೋಧಕನು ಮುಂದಿನ ವಾರ್ಷಿಕ ಸಾಮಾನ್ಯ ಸಭೆಯ ಮುಕ್ತಾಯದವರೆಗೆ ಪದಧಾರಣ ಮಾಡತಕ್ಕದ್ದು.

(8) ಈ ಪ್ರಕರಣದ ಮೇರೆಗೆ ನೇಮಕಗೊಂಡ ಯಾರೇ ಲೆಕ್ಕ ಪರಿಶೋಧಕನನ್ನು, ಬಹು–ರಾಜ್ಯ ಸಹಕಾರಿ ಸೊಸೈಟಿಯು ತನ್ನ ಸಾಮಾನ್ಯ ಸಭೆಯಲ್ಲಿ ಆತನ ಪದಾವಧಿಯ ಮುಕ್ತಾಯಕ್ಕೂ ಮುಂಚೆ ಪದದಿಂದ ತೆಗೆದುಹಾಕಬಹುದು.

(9) ಬಹು–ರಾಜ್ಯ ಸಹಕಾರಿ ಸೊಸೈಟಿಯ ಲೆಕ್ಕಪರಿಶೋಧಕರ ಸಂಭಾವನೆಯನ್ನು,–

(ಎ) ಮಂಡಲಿಯಿಂದ ಅಥವಾ ಕೇಂದ್ರ ರಿಜಿಸ್ಟ್ರಾರನಿಂದ ನೇಮಕಗೊಂಡ ಲೆಕ್ಕಪರಿಶೋಧಕನ ಸಂದರ್ಭದಲ್ಲಿ, ಸಂದರ್ಭಾನುಸಾರ, ಮಂಡಲಿಯು ಅಥವಾ ಕೇಂದ್ರ ರಿಜಿಸ್ಟ್ರಾರನು ನಿಗದಿಪಡಿಸಬಹುದು; ಮತ್ತು

(ಬಿ) (ಎ) ಖಂಡಕ್ಕೆ ಒಳಪಟ್ಟು, ಬಹು–ರಾಜ್ಯ ಸಹಕಾರಿ ಸೊಸೈಟಿಯು ಸಾಮಾನ್ಯ ಸಭೆಯಲ್ಲಿ ಅಥವಾ ಸಾಮಾನ್ಯ ಸಭೆಯಲ್ಲಿ ಬಹು–ರಾಜ್ಯ ಸಹಕಾರಿ ಸೊಸೈಟಿಯು ನಿರ್ಧರಿಸಬಹುದಾದಂಥ ರೀತಿಯಲ್ಲಿ ನಿಗದಿಪಡಿಸತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, ಲೆಕ್ಕಪರಿಶೋಧಕರ ವೆಚ್ಚಗಳಿಗೆ ಸಂಬಂಧಿಸಿದಂತೆ ಬಹು–ರಾಜ್ಯ ಸಹಕಾರಿ ಸೊಸೈಟಿಯು ಸಂದಾಯ ಮಾಡಿದ ಯಾವುದೇ ಮೊಬಲಗುಗಳು "ಸಂಭಾವನೆ" ಎಂಬ ಪದಾವಳಿಯಲ್ಲಿ ಒಳಗೊಂಡಿದೆಯೆಂದು ಭಾವಿಸತಕ್ಕದ್ದು.

**71. ಲೆಕ್ಕಪರಿಶೋಧಕರನ್ನು ನೇಮಕ ಮಾಡುವ ಅಥವಾ ತೆಗೆದುಹಾಕುವ ಠರಾವುಗಳ ಬಗ್ಗೆ ಉಪಬಂಧ.–** (1) ನಿವೃತ್ತನಾಗಲಿರುವ ಲೆಕ್ಕ ಪರಿಶೋಧಕನನ್ನು ಹೊರತುಪಡಿಸಿ ಇತರ ಯಾರೇ ವ್ಯಕ್ತಿಯನ್ನು ಲೆಕ್ಕಪರಿಶೋಧಕನಾಗಿ ನೇಮಕ ಮಾಡುವ ಅಥವಾ ನಿವೃತ್ತನಾಗಲಿರುವ ಲೆಕ್ಕ ಪರಿಶೋಧಕನನ್ನು ಮರು ನೇಮಕ ಮಾಡತಕ್ಕದ್ದಲ್ಲವೆಂದು ಸ್ಪಷ್ಟವಾಗಿ ವ್ಯಕ್ತಪಡಿಸುವ ಠರಾವನ್ನು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಾಡುವುದಕ್ಕಾಗಿ ವಿಶೇಷ ನೋಟೀಸಿನ ಅಗತ್ಯವಿರತಕ್ಕದ್ದು.

(2) ಅಂಥ ಠರಾವಿನ ನೋಟೀಸನ್ನು ಸ್ವೀಕರಿಸಿದ ಮೇಲೆ, ಬಹು–ರಾಜ್ಯ ಸಹಕಾರಿ ಸೊಸೈಟಿಯು ನಿವೃತ್ತನಾಗಲಿರುವ ಲೆಕ್ಕಪರಿಶೋಧಕನಿಗೆ ಅದರ ಪ್ರತಿಯನ್ನು ತಕ್ಷಣವೇ ಕಳುಹಿಸತಕ್ಕದ್ದು.

(3) ಅಂಥ ಠರಾವಿನ ನೋಟೀಸನ್ನು ನೀಡಿರುವಲ್ಲಿ ಮತ್ತು ನಿವೃತ್ತನಾಗಲಿರುವ ಲೆಕ್ಕಪರಿಶೋಧಕನು ಬಹು–ರಾಜ್ಯ ಸಹಕಾರಿ ಸೊಸೈಟಿಗೆ ಲಿಖಿತದಲ್ಲಿ ಆ ನೋಟೀಸಿಗೆ ಸಂಬಂಧಿಸಿದಂತೆ (ಅತಿ ದೀರ್ಘವಾಗಿರದ) ಮನವಿಗಳನ್ನು ಸಲ್ಲಿಸಿರುವ ಮತ್ತು ಬಹು–ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯರಿಗೆ ಅವುಗಳನ್ನು ತಿಳಿಸುವಂತೆ ಕೋರಿದರೆ, ಬಹು–ರಾಜ್ಯ ಸಹಕಾರಿ ಸೊಸೈಟಿಯು ಹಾಗೆ ಮಾಡಲು, ತುಂಬಾ ತಡವಾಗಿ ಅದು ಮನವಿಗಳನ್ನು ಸ್ವೀಕರಿಸಿದ್ದ ಹೊರತು,–

(ಎ) ಬಹು–ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯರಿಗೆ ನೀಡಲಾದ ಠರಾವಿನ ಯಾವುದೇ ನೋಟೀಸಿನಲ್ಲಿ ಮನವಿಗಳನ್ನು ಮಾಡಲಾಗಿದೆಯೆಂಬ ಸಂಗತಿಯನ್ನು ತಿಳಿಸತಕ್ಕದ್ದು; ಮತ್ತು

(ಬಿ) ಬಹು–ರಾಜ್ಯ ಸಹಕಾರಿ ಸೊಸೈಟಿಯು ಮನವಿಗಳನ್ನು ಸ್ವೀಕರಿಸುವ ಮುಂಚೆ ಅಥವಾ ಸ್ವೀಕರಿಸಿದ ನಂತರ, ಸಭೆಯ ನೋಟೀಸನ್ನು ಕಳುಹಿಸಿದ ಬಹು–ರಾಜ್ಯ ಸಹಕಾರಿ ಸೊಸೈಟಿಯ ಪ್ರತಿಯೊಬ್ಬ ಸದಸ್ಯನಿಗೆ ಮನವಿಯ ಪ್ರತಿಯನ್ನು ಕಳುಹಿಸತಕ್ಕದ್ದು

– ಮತ್ತು ಮನವಿಗಳನ್ನು ತುಂಬಾ ವಿಳಂಬವಾಗಿ ಸ್ವೀಕರಿಸಿದ ಕಾರಣ ಅಥವಾ ಬಹು–ರಾಜ್ಯ ಸಹಕಾರಿ ಸೊಸೈಟಿಯ ತಪ್ಪಿನಿಂದಾಗಿ ಮನವಿಯ ಪ್ರತಿಯನ್ನು ಮೇಲೆ ಹೇಳಿದಂತೆ ಕಳುಹಿಸದಿದ್ದರೆ, (ಮೌಖಿಕವಾಗಿ ಆಲಿಸುವ ಆತನ ಹಕ್ಕಿಗೆ ಬಾಧಕವಾಗದಂತೆ) ಲೆಕ್ಕಪರಿಶೋಧಕನು ಸಭೆಯಲ್ಲಿ ಮನವಿಗಳನ್ನು ಓದತಕ್ಕದ್ದೆಂದು, ಅಗತ್ಯಪಡಿಸಬಹುದು.

**72. ಲೆಕ್ಕಪರಿಶೋಧಕರ ಅರ್ಹತೆಗಳು ಮತ್ತು ಅನರ್ಹತೆಗಳು.–** (1) ಚಾರ್ಟರ್ಡ್ ಅಕೌಂಟೆಂಟರ ಅಧಿನಿಯಮ, 1949 (1949ರ 38)ರ ಅರ್ಥವ್ಯಾಪ್ತಿಯೊಳಗೆ ಒಬ್ಬ ವ್ಯಕ್ತಿಯು ಚಾರ್ಟರ್ಡ್ ಅಕೌಂಟೆಂಟನಾಗಿರುವ ಹೊರತು, ಅವನು ಬಹು–ರಾಜ್ಯ ಸಹಕಾರಿ ಸೊಸೈಟಿಯ ಲೆಕ್ಕಪರಿಶೋಧಕನಾಗಿ ನೇಮಕವಾಗಲು ಅರ್ಹನಾಗಿರತಕ್ಕದ್ದಲ್ಲ.

(2) ಈ ಕೆಳಕಂಡ ವ್ಯಕ್ತಿಗಳ ಪೈಕಿ ಯಾರೂ ಬಹು–ರಾಜ್ಯ ಸಹಕಾರಿ ಸೊಸೈಟಿಯ ಲೆಕ್ಕಪರಿಶೋಧಕನಾಗಿ ನೇಮಕವಾಗಲು ಅರ್ಹರಾಗಿರತಕ್ಕದ್ದಲ್ಲ,–

(ಎ) ನಿಗಮಿತ ನಿಕಾಯ;

(ಬಿ) ಬಹು–ರಾಜ್ಯ ಸಹಕಾರಿ ಸೊಸೈಟಿಯ ಅಧಿಕಾರಿ ಅಥವಾ ನೌಕರ;

(ಸಿ) ಬಹು–ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯನಾಗಿರುವ ಅಥವಾ ಅಧಿಕಾರಿಯಾಗಿರುವ ಅಥವಾ ಅದರಲ್ಲಿ ನೌಕರನಾಗಿರುವ ವ್ಯಕ್ತಿ;

(ಡಿ) ಬಹು–ರಾಜ್ಯ ಸಹಕಾರಿ ಸೊಸೈಟಿಗೆ ಋಣಿಯಾಗಿರುವ ಅಥವಾ ಒಂದು ಸಾವಿರ ರೂಪಾಯಿಗಳನ್ನು ಮೀರಿದ ಮೊಬಲಗಿಗಾಗಿ ಯಾರೇ ಮೂರನೇ ವ್ಯಕ್ತಿಯ ಋಣಕ್ಕೆ ಸಂಬಂಧಿಸಿದಂತೆ ಬಹು–ರಾಜ್ಯ ಸಹಕಾರಿ ಸೊಸೈಟಿಗೆ ಯಾವುದೇ ಖಾತರಿಯನ್ನು ನೀಡಿರುವ ಅಥವಾ ಯಾವುದೇ ಭದ್ರತೆಯನ್ನು ಒದಗಿಸಿರುವ ವ್ಯಕ್ತಿ;

(3) ಒಬ್ಬ ವ್ಯಕ್ತಿಯು (2)ನೇ ಉಪಪ್ರಕರಣದ ಮೇರೆಗೆ ಯಾವುದೇ ಇತರ ನಿಗಮಿತ ನಿಕಾಯದ ಅಥವಾ ಬಹು–ರಾಜ್ಯ ಸಹಕಾರಿ ಸೊಸೈಟಿಯ ಅಥವಾ ಸಹಕಾರಿ ಸೊಸೈಟಿಯ ಲೆಕ್ಕಪರಿಶೋಧಕನಾಗಿ ನೇಮಕಗೊಳ್ಳುವುದಕ್ಕೆ ಅನರ್ಹನಾಗಿದ್ದರೆ, ಅವನು ಬಹು–ರಾಜ್ಯ ಸಹಕಾರಿ ಸೊಸೈಟಿಯ ಲೆಕ್ಕ ಪರಿಶೋಧಕನಾಗಿ ನೇಮಕಗೊಳ್ಳುವುದಕ್ಕೂ ಸಹ ಅರ್ಹನಾಗತಕ್ಕದ್ದಲ್ಲ.

(4) ಲೆಕ್ಕಪರಿಶೋಧಕನು, ಅವನ ನೇಮಕದ ನಂತರ, (2)ನೇ ಮತ್ತು (3)ನೇ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅನರ್ಹತೆಗಳಿಗೆ ಒಳಪಟ್ಟಿದ್ದರೆ, ಅವನು ತನ್ನ ಅಂಥ ಪದವನ್ನು ಖಾಲಿ ಮಾಡಿದ್ದಾನೆಂದು ಭಾವಿಸತಕ್ಕದ್ದು.

**73. ಲೆಕ್ಕಪರಿಶೋಧಕರ ಅಧಿಕಾರಗಳು ಮತ್ತು ಕರ್ತವ್ಯಗಳು.–** (1) ಬಹು–ರಾಜ್ಯ ಸಹಕಾರಿ ಸೊಸೈಟಿಯ ಪ್ರತಿಯೊಬ್ಬ ಲೆಕ್ಕಪರಿಶೋಧಕನು, ಬಹು–ರಾಜ್ಯ ಸಹಕಾರಿ ಸೊಸೈಟಿಯ ಪ್ರಧಾನ ಕಚೇರಿಯಲ್ಲಿ ಅಥವಾ ಬೇರೆ ಕಡೆ ಇಟ್ಟಿರುವ ಬಹು–ರಾಜ್ಯ ಸಹಕಾರಿ ಸೊಸೈಟಿಯ ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು ಮತ್ತು ವೋಚರುಗಳನ್ನು ನೋಡುವ ಹಕ್ಕನ್ನು ಹೊಂದಿರತಕ್ಕದ್ದು, ಮತ್ತು ಲೆಕ್ಕಪರಿಶೋಧಕನಾಗಿ ತನ್ನ ಕರ್ತವ್ಯಗಳನ್ನು ನೆರವೇರಿಸಲು

ಅವಶ್ಯವೆಂದು ಭಾವಿಸಬಹುದಾದಂಥ ಮಾಹಿತಿಯನ್ನು ಮತ್ತು ವಿವರಣೆಗಳನ್ನು ನೀಡುವಂತೆ ಬಹು-ರಾಜ್ಯ ಸಹಕಾರಿ ಸೊಸೈಟಿಯ ಅಧಿಕಾರಿಗಳನ್ನು ಅಥವಾ ಇತರ ನೌಕರರನ್ನು ಅಗತ್ಯಪಡಿಸಲು ಹಕ್ಕುಳ್ಳವನಾಗಿರತಕ್ಕದ್ದು.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಲೆಕ್ಕಪರಿಶೋಧಕನು,-

(ಎ) ಭದ್ರತೆಯ ಆಧಾರದ ಮೇಲೆ ಬಹು-ರಾಜ್ಯ ಸಹಕಾರಿ ಸೊಸೈಟಿಯು ನೀಡಿದ ಸಾಲಗಳನ್ನು ಮತ್ತು ಮುಂಗಡಗಳನ್ನು ಸೂಕ್ತ ಭದ್ರತೆ ಪಡೆದು ನೀಡಲಾಗಿದೆಯೇ ಮತ್ತು ಯಾವ ನಿಬಂಧನೆಗಳ ಮೇರೆಗೆ ಅವುಗಳನ್ನು ನೀಡಲಾಗಿದೆಯೋ ಆ ನಿಬಂಧನೆಗಳು ಬಹು-ರಾಜ್ಯ ಸಹಕಾರಿ ಸೊಸೈಟಿಯ ಅಥವಾ ಅದರ ಸದಸ್ಯರ ಹಿತಾಸಕ್ತಿಗಳಿಗೆ ಬಾಧಕವಾಗಿಲ್ಲವೇ;

(ಬಿ) ಪುಸ್ತಕದಲ್ಲಿ ನಮೂದುಗಳನ್ನು ಮಾತ್ರ ಮಾಡಿ ತೋರಿಸಿರುವ ಬಹು-ರಾಜ್ಯ ಸಹಕಾರಿ ಸೊಸೈಟಿಯ ವ್ಯವಹಾರಗಳು ಬಹು-ರಾಜ್ಯ ಸಹಕಾರಿ ಸೊಸೈಟಿಯ ಹಿತಾಸಕ್ತಿಗಳಿಗೆ ಬಾಧಕವಾಗಿಲ್ಲವೇ;

(ಸಿ) ವೈಯಕ್ತಿಕ ವೆಚ್ಚಗಳನ್ನು ರಾಜಸ್ವ ಲೆಕ್ಕಕ್ಕೆ ಖರ್ಚು ಹಾಕಲಾಗಿದೆಯೇ; ಮತ್ತು

(ಡಿ) ನಗದಿಗಾಗಿ ಯಾವುದೇ ಷೇರುಗಳನ್ನು ಮಂಜೂರು ಮಾಡಲಾಗಿದೆಯೆಂದು ಬಹು-ರಾಜ್ಯ ಸಹಕಾರಿ ಸೊಸೈಟಿಯ ಪುಸ್ತಕಗಳಲ್ಲಿ ಮತ್ತು ಕಾಗದಪತ್ರಗಳಲ್ಲಿ ಹೇಳಿದ್ದರೆ, ಅಂಥ ಹಂಚಿಕೆಗೆ ಸಂಬಂಧಿಸಿದಂತೆ ನಗದನ್ನು ವಾಸ್ತವಿಕವಾಗಿ ಸ್ವೀಕರಿಸಲಾಗಿದೆಯೇ ಮತ್ತು ವಾಸ್ತವಿಕವಾಗಿ ನಗದನ್ನು ಹಾಗೇ ಸ್ವೀಕರಿಸಿರದಿದ್ದರೆ, ಲೆಕ್ಕಪುಸ್ತಕಗಳಲ್ಲಿ ಮತ್ತು ಜಮಾ-ಖರ್ಚುಪಟ್ಟಿಯಲ್ಲಿ ಹೇಳಿದ ವಸ್ತು ಸ್ಥಿತಿಯು ಸರಿಯಾಗಿದೆಯೇ, ಕ್ರಮಬದ್ಧವಾಗಿದೆಯೇ ಮತ್ತು ತಪ್ಪುದಾರಿಗೆ ಎಳೆಯುವಂತಿಲ್ಲವೇ

- ಎಂಬುದರ ಬಗ್ಗೆ ವಿಚಾರಣೆಯನ್ನು ನಡೆಸತಕ್ಕದ್ದು.

(3) ಲೆಕ್ಕಪರಿಶೋಧಕನು, ತಾನು ಪರಿಶೀಲಿಸಿದ ಲೆಕ್ಕಪತ್ರಗಳ ಬಗ್ಗೆ ಮತ್ತು ಅವನ ಪದಾವಧಿಯಲ್ಲಿ, ಬಹು-ರಾಜ್ಯ ಸಹಕಾರಿ ಸೊಸೈಟಿಯ ಸಾಮಾನ್ಯ ಸಭೆಯ ಮುಂದೆ ಮಂಡಿಸಿದ ಪ್ರತಿಯೊಂದು ಜಮಾ-ಖರ್ಚು ಪಟ್ಟಿಯ ಮತ್ತು ಲಾಭ ಮತ್ತು ನಷ್ಟದ ಲೆಕ್ಕದ ಬಗ್ಗೆ ಮತ್ತು ಜಮಾ-ಖರ್ಚು ಪಟ್ಟಿಯ ಅಥವಾ ಲಾಭ ಮತ್ತು ನಷ್ಟದ ಲೆಕ್ಕಗಳ ಭಾಗವಾಗಬೇಕೆಂದು ಅಥವಾ ಅವುಗಳಿಗೆ ಲಗತ್ತಿಸಿರಬೇಕೆಂದು ಅಗತ್ಯಪಡಿಸಿದ ಪ್ರತಿಯೊಂದು ಇತರ ದಾಖಲೆಯ ಬಗ್ಗೆ ಬಹು-ರಾಜ್ಯ ಸಹಕಾರಿ ಸೊಸೈಟಿಯು ಸದಸ್ಯರಿಗೆ ವರದಿ ಸಲ್ಲಿಸತಕ್ಕದ್ದು ಮತ್ತು ಆ ವರದಿಯು, ಅವನ ಅಭಿಪ್ರಾಯದಲ್ಲಿ ಮತ್ತು ಅವನಿಗೆ ಮಾಹಿತಿ ಇರುವಷ್ಟರಮಟ್ಟಿಗೆ ಮತ್ತು ಅವನಿಗೆ ಒದಗಿಸಲಾದ ವಿವರಣೆಗಳಿಗೆ ಅನುಸಾರವಾಗಿ ಈ ಅಧಿನಿಯಮದ ಮೂಲಕ ಅಗತ್ಯಪಡಿಸಿದ ಮಾಹಿತಿಯನ್ನು ಹಾಗೆ ಅಗತ್ಯಪಡಿಸಿದ ರೀತಿಯಲ್ಲಿ ಸದರಿ ಲೆಕ್ಕಪತ್ರಗಳು ನೀಡಿವೆಯೇ ಮತ್ತು,-

(ಎ) ಜಮಾ-ಖರ್ಚು ಪಟ್ಟಿಯ ಸಂದರ್ಭದಲ್ಲಿ, ಹಣಕಾಸು ವರ್ಷದ ಅಂತ್ಯದಲ್ಲಿ ಬಹು-ರಾಜ್ಯ ಸಹಕಾರಿ ಸೊಸೈಟಿಯ ವ್ಯವಹಾರಗಳ ಸ್ಥಿತಿಯ ಬಗ್ಗೆ ;

(ಬಿ) ಲಾಭ ಮತ್ತು ನಷ್ಟದ ಲೆಕ್ಕದ ಸಂದರ್ಭದಲ್ಲಿ, ಅದರ ಹಣಕಾಸು ವರ್ಷದ ಲಾಭ ಅಥವಾ ನಷ್ಟದ ಬಗ್ಗೆ

- ನಿಜವಾದ ಮತ್ತು ನ್ಯಾಯಯುತವಾದ ಅಭಿಪ್ರಾಯವನ್ನು ನೀಡಿದೆಯೇ ಎಂಬುದನ್ನು ಆ ವರದಿಯು ನಿರೂಪಿಸತಕ್ಕದ್ದು.

(4) ಲೆಕ್ಕಪರಿಶೋಧಕರ ವರದಿಯು,-

(ಎ) ತನ್ನ ಲೆಕ್ಕಪರಿಶೋಧನೆಯ ಉದ್ದೇಶಗಳಿಗೆ ತಾನು ತಿಳಿದಿರುವಷ್ಟರ ಮತ್ತು ನಂಬಿರುವಷ್ಟರ ಮಟ್ಟಿಗೆ ಅವಶ್ಯವಾದ ಎಲ್ಲ ಮಾಹಿತಿಯನ್ನು ಮತ್ತು ವಿವರಣೆಗಳನ್ನು ಅವನು ಪಡೆದುಕೊಂಡಿದ್ದಾನೆಯೇ ಎಂಬ ಬಗ್ಗೆ;

(ಬಿ) ಆತನ ಅಭಿಪ್ರಾಯದಲ್ಲಿ ಆ ಪುಸ್ತಕಗಳ ಪರಿಶೀಲನೆಯಿಂದ ಕಂಡು ಬರಬಹುದಾದಷ್ಟರ ಮಟ್ಟಿಗೆ ಬಹು-ರಾಜ್ಯ ಸಹಕಾರಿ ಸೊಸೈಟಿಯು ಲೆಕ್ಕ ಪತ್ರಗಳ ಪುಸ್ತಕಗಳನ್ನು ಇಟ್ಟುಕೊಂಡು ಬರಲಾಗಿದೆಯೇ ಮತ್ತು ತನ್ನ ಲೆಕ್ಕಪರಿಶೋಧನೆಯ ಉದ್ದೇಶಗಳಿಗೆ ಸಾಕಷ್ಟಾದ ಸೂಕ್ತ ವಿವರಪಟ್ಟಿಕೆಗಳನ್ನು ತಾನು ಭೇಟಿ ನೀಡಿಲ್ಲದ ಬಹು-ರಾಜ್ಯ ಸಹಕಾರಿ ಸೊಸೈಟಿಯ ಶಾಖೆಗಳಿಂದ ಅಥವಾ ಕಚೇರಿಗಳಿಂದ ಪಡೆಯಲಾಗಿದೆಯೇ ಎಂಬ ಬಗ್ಗೆ;

(ಸಿ) ಬಹು-ರಾಜ್ಯ ಸಹಕಾರಿ ಸೊಸೈಟಿಯ ಲೆಕ್ಕ ಪರಿಶೋಧಕನನ್ನು ಹೊರತುಪಡಿಸಿ ಇತರ ವ್ಯಕ್ತಿಯು ಲೆಕ್ಕಪರಿಶೋಧನೆ ಮಾಡಿದ ಯಾವುದೇ ಶಾಖಾ ಕಚೇರಿಯ ಲೆಕ್ಕಪತ್ರಗಳ ವರದಿಯನ್ನು ತನಗೆ ಕಳುಹಿಸಲಾಗಿದೆಯೇ ಮತ್ತು ಲೆಕ್ಕಪರಿಶೋಧಕನ ವರದಿಯನ್ನು ತಯಾರಿಸುವಲ್ಲಿ ಅದನ್ನು ತಾನು ಹೇಗೆ ಪರಿಶೀಲಿಸಿರುತ್ತೇನೆ ಎಂಬ ಬಗ್ಗೆ;

(ಡಿ) ವರದಿಯಲ್ಲಿ ವಿವರಿಸಿದ ಬಹು-ರಾಜ್ಯ ಸಹಕಾರಿ ಸೊಸೈಟಿಯ ಜಮಾ-ಖರ್ಚು ಪಟ್ಟಿಯು ಮತ್ತು ಲಾಭ ಮತ್ತು ನಷ್ಟದ ಲೆಕ್ಕವು, ಲೆಕ್ಕಪತ್ರಗಳ ಪುಸ್ತಕಗಳೊಂದಿಗೆ ಮತ್ತು ವಿವರಪಟ್ಟಿಕೆಗಳೊಂದಿಗೆ ಹೊಂದಾಣಿಕೆಯಾಗುತ್ತಿವೆಯೇ ಎಂಬುದರ ಬಗ್ಗೆಯೂ

- ಸಹ ತಿಳಿಸತಕ್ಕದ್ದು.

(5) (3)ನೇ ಉಪಪ್ರಕರಣದ (ಎ) ಮತ್ತು (ಬಿ) ಖಂಡಗಳಲ್ಲಿ ಅಥವಾ (4)ನೇ ಉಪಪ್ರಕರಣದ (ಎ), (ಬಿ), (ಸಿ) ಮತ್ತು (ಡಿ) ಖಂಡಗಳಲ್ಲಿ ಉಲ್ಲೇಖಿಸಿದ ಯಾವುವೇ ವಿಷಯಗಳಿಗೆ ನಕಾರಾತ್ಮಕವಾಗಿ ಅಥವಾ ಷರತ್ತುಗಳೊಂದಿಗೆ ಉತ್ತರಿಸಿದ್ದರೆ, ಲೆಕ್ಕಪರಿಶೋಧಕನ ವರದಿಯು ಆ ಉತ್ತರಕ್ಕೆ ಕಾರಣವನ್ನು ತಿಳಿಸತಕ್ಕದ್ದು.

**74. ಲೆಕ್ಕಪರಿಶೋಧನಾ ವರದಿ, ಇತ್ಯಾದಿಗೆ ಸಹಿ.-** ಬಹು-ರಾಜ್ಯ ಸಹಕಾರಿ ಸೊಸೈಟಿಯ ಲೆಕ್ಕ ಪರಿಶೋಧಕನಾಗಿ ನೇಮಕಗೊಂಡ ವ್ಯಕ್ತಿ ಮಾತ್ರವೇ ಲೆಕ್ಕಪರಿಶೋಧಕನ ವರದಿಗೆ ಸಹಿ ಮಾಡತಕ್ಕದ್ದು ಅಥವಾ ಲೆಕ್ಕಪರಿಶೋಧಕನು ಸಹಿ ಮಾಡುವಂತೆ ಅಥವಾ ಅಧಿಪ್ರಮಾಣೀಕರಿಸುವಂತೆ ಕಾನೂನು ಅಗತ್ಯಪಡಿಸಿದ ಬಹು-ರಾಜ್ಯ ಸಹಕಾರಿ ಸೊಸೈಟಿಯ ಯಾವುದೇ ಇತರ ದಸ್ತಾವೇಜಿಗೆ ಆತನು ಸಹಿ ಮಾಡತಕ್ಕದ್ದು ಅಥವಾ ಅದನ್ನು ಅಧಿಪ್ರಮಾಣೀಕರಿಸತಕ್ಕದ್ದು.

**75. ಲೆಕ್ಕಪರಿಶೋಧಕರ ವರದಿಯನ್ನು ಓದುವುದು ಮತ್ತು ಪರಿಶೀಲಿಸುವುದು.-** ಲೆಕ್ಕಪರಿಶೋಧಕನ ವರದಿಯನ್ನು ಬಹು-ರಾಜ್ಯ ಸಹಕಾರಿ ಸೊಸೈಟಿಯ ಸಾಮಾನ್ಯ ಸಭೆಯಲ್ಲಿ ಓದತಕ್ಕದ್ದು ಮತ್ತು ಬಹು-ರಾಜ್ಯ ಸಹಕಾರಿ ಸೊಸೈಟಿಯ ಯಾರೇ ಸದಸ್ಯನ ಪರಿಶೀಲನೆಗೆ ಅದು ಮುಕ್ತವಾಗಿರತಕ್ಕದ್ದು.

**76. ಸಾಮಾನ್ಯ ಸಭೆಗೆ ಹಾಜರಾಗುವುದಕ್ಕೆ ಲೆಕ್ಕಪರಿಶೋಧಕನಿಗೆ ಇರುವ ಹಕ್ಕು.-** ಬಹು-ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯನು ಬಹು-ರಾಜ್ಯ ಸಹಕಾರಿ ಸೊಸೈಟಿಯ ಯಾವುದೇ ಸಾಮಾನ್ಯ ಸಭೆಯ ಎಲ್ಲ

ನೋಟೀಸುಗಳನ್ನು ಮತ್ತು ಅದಕ್ಕೆ ಸಂಬಂಧಿಸಿದ ಇತರ ಪತ್ರಗಳನ್ನು ಪಡೆದುಕೊಳ್ಳಲು ಹಕ್ಕುಳ್ಳವನಾಗಿರುವನೋ ಆ ಎಲ್ಲ ನೋಟೀಸುಗಳನ್ನು ಮತ್ತು ಆ ಇತರ ಪತ್ರಗಳನ್ನು ಬಹು–ರಾಜ್ಯ ಸಹಕಾರಿ ಸೊಸೈಟಿಯ ಲೆಕ್ಕಪರಿಶೋಧಕನಿಗೆ ಸಹ ಕಳುಹಿಸತಕ್ಕದ್ದು ಮತ್ತು ಲೆಕ್ಕಪರಿಶೋಧಕನು ಯಾವುದೇ ಸಾಮಾನ್ಯ ಸಭೆಗೆ ಹಾಜರಾಗುವುದಕ್ಕೆ ಮತ್ತು ಲೆಕ್ಕಪರಿಶೋಧಕನಾಗಿ ತನಗೆ ಸಂಬಂಧಿಸಿದ ಕಾರ್ಯಕಲಾಪದ ಯಾವುದೇ ಭಾಗದಲ್ಲಿ ಹಾಜರಾಗಿ ಆ ಯಾವುದೇ ಸಾಮಾನ್ಯ ಸಭೆಯಲ್ಲಿ ತನ್ನ ಅಹವಾಲನ್ನು ಮಂಡಿಸಲು ಹಕ್ಕುಳ್ಳವನಾಗಿರತಕ್ಕದ್ದು.

**77. ಕೆಲವು ಸಂದರ್ಭಗಳಲ್ಲಿ ವಿಶೇಷ ಲೆಕ್ಕಪರಿಶೋಧನೆ ಮಾಡುವಂತೆ ನಿರ್ದೇಶನ ನೀಡಲು ಕೇಂದ್ರ ಸರ್ಕಾರದ ಅಧಿಕಾರ.**– ಕೇಂದ್ರ ಸರ್ಕಾರವು,–

(ಎ) ಯಾವುದೇ ಬಹು–ರಾಜ್ಯ ಸಹಕಾರಿ ಸೊಸೈಟಿಯ ವ್ಯವಹಾರಗಳನ್ನು ಸ್ವ–ಸಹಾಯ ಮತ್ತು ಪರಸ್ಪರ ನೆರವು ಮತ್ತು ಸಹಕಾರಿ ತತ್ವಗಳಿಗೆ ಅಥವಾ ವಿವೇಕಯುತ ವಾಣಿಜ್ಯ ಪದ್ಧತಿಗಳಿಗೆ ಅಥವಾ ನ್ಯಾಯ ಸಮ್ಮತ ವ್ಯವಹಾರ ತತ್ವಗಳಿಗೆ ಅನುಸಾರವಾಗಿ ನಿರ್ವಹಿಸಲಾಗುತ್ತಿಲ್ಲವೆಂದು; ಅಥವಾ

(ಬಿ) ಯಾವುದೇ ಬಹು–ರಾಜ್ಯ ಸಹಕಾರಿ ಸೊಸೈಟಿಯನ್ನು, ಅದಕ್ಕೆ ಸಂಬಂಧಿಸಿದ ವ್ಯಾಪಾರದ, ಕೈಗಾರಿಕೆಯ ಅಥವಾ ವ್ಯವಹಾರದ ಹಿತಾಸಕ್ತಿಗಳಿಗೆ ಗಂಭೀರ ಹಾನಿ ಅಥವಾ ನಷ್ಟವನ್ನುಂಟು ಮಾಡುವ ಸಂಭವವಿರುವ ರೀತಿಯಲ್ಲಿ ನಿರ್ವಹಿಸಲಾಗುತ್ತಿದೆಯೆಂದು; ಅಥವಾ

(ಸಿ) ಯಾವುದೇ ಬಹು–ರಾಜ್ಯ ಸಹಕಾರಿ ಸೊಸೈಟಿಯ ಹಣಕಾಸು ಪರಿಸ್ಥಿತಿಯು ಅದರ ಸಾಲ ತೀರಿಸುವ ಶಕ್ತಿಗೆ ಅಪಾಯವುಂಟು ಮಾಡುವಂತಿದೆಯೆಂದು ಅಭಿಪ್ರಾಯಪಟ್ಟಲ್ಲಿ

– ಕೇಂದ್ರ ಸರ್ಕಾರವು ಯಾವುದೇ ಕಾಲದಲ್ಲಿ, ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಗೆ ಅಥವಾ ಅವಧಿಗಳಿಗೆ ಬಹು–ರಾಜ್ಯ ಸಹಕಾರಿ ಸೊಸೈಟಿಯ ಲೆಕ್ಕಪತ್ರಗಳ ವಿಶೇಷ ಲೆಕ್ಕ ಪರಿಶೋಧನೆಯನ್ನು ನಡೆಸತಕ್ಕದ್ದೆಂದು ನಿರ್ದೇಶಿಸಬಹುದು ಮತ್ತು ಅದೇ ಆದೇಶದ ಮೂಲಕ ಅಥವಾ ಬೇರೆ ಆದೇಶದ ಮೂಲಕ ವಿಶೇಷ ಲೆಕ್ಕ ಪರಿಶೋಧನೆಯನ್ನು ನಡೆಸುವುದಕ್ಕೆ ಚಾರ್ಟರ್ಡ್ ಅಕೌಂಟೆಂಟರ ಅಧಿನಿಯಮ, 1949 (1949ರ 38)ರ 2ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಪರಿಭಾಷಿಸಿದಂತೆ ಚಾರ್ಟರ್ಡ್ ಅಕೌಂಟೆಂಟನನ್ನಾಗಲಿ ಅಥವಾ ಬಹು–ರಾಜ್ಯ ಸಹಕಾರಿ ಸೊಸೈಟಿಯ ಲೆಕ್ಕಪರಿಶೋಧಕನನ್ನೇ ಆಗಲಿ ನೇಮಕಮಾಡಬಹುದು:

ಪರಂತು, ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಸ್ವತಃ ತಾನೇ ಆಗಲಿ ಅಥವಾ ಅವೆರಡೂ ಒಟ್ಟಿಗೆ ಆಗಲಿ ಬಹು–ರಾಜ್ಯ ಸಹಕಾರಿ ಸೊಸೈಟಿಯ ಸಂದಾಯಿತ ಷೇರು ಬಂಡವಾಳದಲ್ಲಿ ಅಥವಾ ಷೇರುಗಳಲ್ಲಿ ಶೇಕಡಾ ಐವತ್ತೊಂದಕ್ಕಿಂತ ಕಡಿಮೆ ಹೊಂದಿದ್ದರೆ, ಅಂಥ ಬಹು–ರಾಜ್ಯ ಸಹಕಾರಿ ಸೊಸೈಟಿಯ ಲೆಕ್ಕಪತ್ರಗಳ ವಿಶೇಷ ಲೆಕ್ಕಪರಿಶೋಧನೆ ಮಾಡುವುದಕ್ಕೆ ಕೇಂದ್ರ ಸರ್ಕಾರವು ಆದೇಶ ಮಾಡತಕ್ಕದ್ದಲ್ಲ.

(2) ಮೇಲೆ ಹೇಳಿದಂತೆ ವಿಶೇಷ ಲೆಕ್ಕಪರಿಶೋಧನೆಯನ್ನು ನಡೆಸುವುದಕ್ಕೆ (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಚಾರ್ಟರ್ಡ್ ಅಕೌಂಟೆಂಟ್‍ನನ್ನು ಅಥವಾ ಬಹು–ರಾಜ್ಯ ಸಹಕಾರಿ ಸೊಸೈಟಿಯ ಲೆಕ್ಕಪರಿಶೋಧಕನನ್ನು ಈ ಪ್ರಕರಣದಲ್ಲಿ ಇನ್ನು ಮುಂದೆ ವಿಶೇಷ ಲೆಕ್ಕಪರಿಶೋಧಕನೆಂದು ಉಲ್ಲೇಖಿಸಲಾಗಿದೆ.

(3) ವಿಶೇಷ ಲೆಕ್ಕಪರಿಶೋಧಕನು ವಿಶೇಷ ಲೆಕ್ಕ ಪರಿಶೋಧನೆಗೆ ಸಂಬಂಧಿಸಿದಂತೆ, 73ನೇ ಪ್ರಕರಣದ ಮೇರೆಗೆ ಬಹು–ರಾಜ್ಯ ಸಹಕಾರಿ ಸೊಸೈಟಿಯ ಲೆಕ್ಕಪರಿಶೋಧಕನು ಹೊಂದಿರುವಂಥವೇ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಹೊಂದಿರತಕ್ಕದ್ದು:

ಪರಂತು, ವಿಶೇಷ ಲೆಕ್ಕಪರಿಶೋಧಕನು ತನ್ನ ವರದಿಯನ್ನು ಬಹು–ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯರಿಗೆ ಸಲ್ಲಿಸುವ ಬದಲಾಗಿ ಅದನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(4) ವಿಶೇಷ ಲೆಕ್ಕಪರಿಶೋಧಕನ ವರದಿಯು ಸಾಧ್ಯವಾದಷ್ಟು 73ನೇ ಪ್ರಕರಣದ ಮೇರೆಗೆ ಲೆಕ್ಕಪರಿಶೋಧಕನ ವರದಿಯಲ್ಲಿ ಒಳಗೊಳ್ಳಬೇಕೆಂದು ಅಗತ್ಯಪಡಿಸಿದ ಎಲ್ಲ ವಿಷಯಗಳನ್ನು ಒಳಗೊಳ್ಳತಕ್ಕದ್ದು ಮತ್ತು ಕೇಂದ್ರ ಸರ್ಕಾರವು, ಅವನಿಗೆ ಯಾವ ವಿಷಯವನ್ನು ಉಲ್ಲೇಖಿಸಬಹುದೋ ಆ ಯಾವುದೇ ಇತರ ವಿಷಯದ ಬಗೆಗಿನ ಹೇಳಿಕೆಯನ್ನು ಸಹ ಅದು ಹಾಗೆ ನಿರ್ದೇಶಿಸಿದರೆ ಒಳಗೊಳ್ಳತಕ್ಕದ್ದು.

(5) ಕೇಂದ್ರ ಸರ್ಕಾರವು ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಯಾರೇ ವ್ಯಕ್ತಿಗೆ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯೊಳಗೆ ವಿಶೇಷ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ವಿಶೇಷ ಲೆಕ್ಕಪರಿಶೋಧಕನು ಅಗತ್ಯಪಡಿಸಬಹುದಾದಂಥ ಮಾಹಿತಿಯನ್ನು ಅಥವಾ ಹೆಚ್ಚುವರಿ ಮಾಹಿತಿಯನ್ನು ವಿಶೇಷ ಲೆಕ್ಕಪರಿಶೋಧಕನಿಗೆ ಒದಗಿಸುವಂತೆ ನಿರ್ದೇಶಿಸಬಹುದು.

(6) ವಿಶೇಷ ಲೆಕ್ಕ ಪರಿಶೋಧಕನ ವರದಿಯನ್ನು ಸ್ವೀಕರಿಸಿದ ಮೇಲೆ, ಕೇಂದ್ರ ಸರ್ಕಾರವು, ಈ ಅಧಿನಿಯಮದ ಉಪಬಂಧಗಳ ಅನುಸಾರ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿಗನುಸಾರ, ವರದಿಯ ಮೇಲೆ ತಾನು ಅವಶ್ಯವೆಂದು ಪರಿಗಣಿಸುವಂಥ ಕ್ರಮವನ್ನು ತೆಗೆದುಕೊಳ್ಳಬಹುದು:

ಪರಂತು, ಕೇಂದ್ರ ಸರ್ಕಾರವು, ಅದನ್ನು ಸ್ವೀಕರಿಸಿದ ದಿನಾಂಕದಿಂದ ನಾಲ್ಕು ತಿಂಗಳುಗಳ ಅವಧಿಯೊಳಗೆ ಆ ವರದಿಯ ಬಗ್ಗೆ ಯಾವುದೇ ಕ್ರಮವನ್ನು ಕೈಗೊಳ್ಳದಿದ್ದರೆ, ಆ ಸರ್ಕಾರವು, ಅದರ ಮೇಲಿನ ತನ್ನ ಟೀಕೆ ಟಿಪ್ಪಣಿಗಳೊಂದಿಗೆ ವರದಿಯ ಪ್ರತಿಯನ್ನು ಅಥವಾ ಅದರ ಸುಸಂಬದ್ಧ ಉದ್ಧೃತ ಭಾಗವನ್ನು ಬಹು–ರಾಜ್ಯ ಸಹಕಾರಿ ಸೊಸೈಟಿಗೆ ಕಳುಹಿಸತಕ್ಕದ್ದು ಮತ್ತು ಸದಸ್ಯರಿಗೆ ಆ ಪ್ರತಿಯನ್ನು ಅಥವಾ ಉದ್ಧೃತ ಭಾಗಗಳನ್ನು ತಲುಪಿಸುವುದಕ್ಕೆ ಅಥವಾ ಅಂಥ ಪ್ರತಿಯನ್ನು ಅಥವಾ ಉದ್ಧೃತ ಭಾಗಗಳನ್ನು ಬಹು–ರಾಜ್ಯ ಸಹಕಾರಿ ಸೊಸೈಟಿಯ ಮುಂದೆ ಅದರ ಮುಂದಿನ ಸಾಮಾನ್ಯ ಸಭೆಯಲ್ಲಿ ಓದುವುದಕ್ಕೆ ಬಹು–ರಾಜ್ಯ ಸಹಕಾರಿ ಸೊಸೈಟಿಯನ್ನು ಅಗತ್ಯಪಡಿಸತಕ್ಕದ್ದು.

(7) ಈ ಪ್ರಕರಣದ ಮೇರೆಗೆ ಯಾವುದೇ ವಿಶೇಷ ಲೆಕ್ಕಪರಿಶೋಧನೆಯ ಮತ್ತು ಅದಕ್ಕೆ ಪ್ರಾಸಂಗಿಕವಾದ ವೆಚ್ಚಗಳನ್ನು (ವಿಶೇಷ ಲೆಕ್ಕಪರಿಶೋಧಕನ ಸಂಭಾವನೆಯನ್ನೂ ಒಳಗೊಂಡು) ಕೇಂದ್ರ ಸರ್ಕಾರವು ನಿರ್ಧರಿಸತಕ್ಕದ್ದು. ಅದರ ನಿರ್ಧಾರವು ಅಂತಿಮವಾಗಿರತಕ್ಕದ್ದು ಮತ್ತು ಅವುಗಳನ್ನು ಬಹು–ರಾಜ್ಯ ಸಹಕಾರಿ ಸೊಸೈಟಿಯೇ ಸಂದಾಯ ಮಾಡತಕ್ಕದ್ದು, ಹಾಗೆ ಸಂದಾಯ ಮಾಡಲು ತಪ್ಪಿದಲ್ಲಿ, ಅದು ಭೂ ಕಂದಾಯದ ಬಾಕಿಯೆಂಬಂತೆ ಬಹು–ರಾಜ್ಯ ಸಹಕಾರಿ ಸೊಸೈಟಿಯಿಂದ ವಸೂಲೀಯವಾಗಿರತಕ್ಕದ್ದು.

**78. ಕೇಂದ್ರ ರಿಜಿಸ್ಟ್ರಾರನಿಂದ ವಿಚಾರಣೆ.–** (1) ಕೇಂದ್ರ ರಿಜಿಸ್ಟ್ರಾರನು, ಯಾವ ಒಕ್ಕೂಟ ಸಹಕಾರಿ ಸೊಸೈಟಿಗೆ ಬಹು–ರಾಜ್ಯ ಸಹಕಾರಿ ಸೊಸೈಟಿಯು ಸಂಯೋಜಿತವಾಗಿದೆಯೋ ಆ ಒಕ್ಕೂಟ ಸಹಕಾರಿ ಸೊಸೈಟಿಯಿಂದ ಅಥವಾ ಸಾಲಕೊಡುವವನಿಂದ ಅಥವಾ ಮಂಡಲಿಯ ಮೂರನೇ ಒಂದಕ್ಕಿಂತ ಕಡಿಮೆಯಿಲ್ಲದ ಸದಸ್ಯರಿಂದ ಅಥವಾ ಬಹು–ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯರ ಒಟ್ಟು ಸಂಖ್ಯೆಯ ಐದನೇ ಒಂದಕ್ಕಿಂತ ಕಡಿಮೆ ಇಲ್ಲದ ಸದಸ್ಯರಿಂದ ಬಂದ

ಕೋರಿಕೆಯ ಮೇರೆಗೆ, ಬಹು–ರಾಜ್ಯ ಸಹಕಾರಿ ಸೊಸೈಟಿಯ ರಚನೆ, ಕಾರ್ಯನಿರ್ವಹಣೆ ಮತ್ತು ಹಣಕಾಸಿನ ಪರಿಸ್ಥಿತಿಯ ಬಗ್ಗೆ ವಿಚಾರಣೆ ನಡೆಸಬಹುದು ಅಥವಾ ಈ ಬಗ್ಗೆ ಲಿಖಿತ ಆದೇಶದ ಮೂಲಕ ತಾನು ಅಧಿಕೃತಗೊಳಿಸಿದ ವ್ಯಕ್ತಿಗೆ ವಿಚಾರಣೆ ನಡೆಸುವುದಕ್ಕೆ ನಿರ್ದೇಶನ ನೀಡಬಹುದು:

ಪರಂತು, ಈ ಪ್ರಕರಣದ ಮೇರೆಗೆ ವಿಚಾರಣೆಯನ್ನು ಬಹು–ರಾಜ್ಯ ಸಹಕಾರಿ ಸೊಸೈಟಿಗೆ ಹದಿನೈದು ದಿವಸಗಳಿಗಿಂತ ಕಡಿಮೆಯಿಲ್ಲದಂತೆ ನೋಟೀಸನ್ನು ನೀಡಿದ ಹೊರತು ನಡೆಸತಕ್ಕದ್ದಲ್ಲ.

(2) ಕೇಂದ್ರ ರಿಜಿಸ್ಟ್ರಾರನು ಅಥವಾ (1)ನೇ ಉಪಪ್ರಕರಣದ ಮೇರೆಗೆ ಅವನು ಅಧಿಕೃತಗೊಳಿಸಿದ ವ್ಯಕ್ತಿಯು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ಬಹು–ರಾಜ್ಯ ಸಹಕಾರಿ ಸೊಸೈಟಿಗೆ ಸೇರಿದ ಅಥವಾ ಅದರ ಅಭಿರಕ್ಷೆಯಲ್ಲಿರುವ ಪುಸ್ತಕಗಳನ್ನು, ಲೆಕ್ಕಗಳನ್ನು, ದಸ್ತಾವೇಜುಗಳನ್ನು, ಭದ್ರತೆಗಳನ್ನು, ನಗದು ಮತ್ತು ಇತರ ಸ್ವತ್ತುಗಳನ್ನು ಎಲ್ಲ ಸೂಕ್ತ ಸಮಯಗಳಲ್ಲಿ ನೋಡಲು ಮುಕ್ತ ಅವಕಾಶ ಇರತಕ್ಕದ್ದು, ಮತ್ತು ಅಂಥ ಯಾವುವೇ ಪುಸ್ತಕಗಳನ್ನು, ಲೆಕ್ಕಗಳನ್ನು, ದಸ್ತಾವೇಜುಗಳನ್ನು, ಭದ್ರತೆಗಳನ್ನು, ನಗದನ್ನು ಅಥವಾ ಇತರ ಸ್ವತ್ತುಗಳನ್ನು ಸ್ವಾಧೀನ ಹೊಂದಿರುವ ಅಥವಾ ಅದರ ಅಭಿರಕ್ಷೆಯ ಜವಾಬ್ದಾರಿ ಹೊಂದಿರುವ ಯಾರೇ ವ್ಯಕ್ತಿಗೆ, ಅವನು ನಿರ್ದಿಷ್ಟಪಡಿಸಿದ ಯಾವುದೇ ಸ್ಥಳದಲ್ಲಿ ಅವುಗಳನ್ನು ಹಾಜರುಪಡಿಸುವುದಕ್ಕೆ ಲೆಕ್ಕಪರಿಶೋಧಕನು ಸಮನು ನೀಡಬಹುದು.

(ಬಿ) ಬಹು–ರಾಜ್ಯ ಸಹಕಾರಿ ಸೊಸೈಟಿಯ ಸಾಮಾನ್ಯ ಸಭೆಯ ನೋಟೀಸಿನ ಅವಧಿಯನ್ನು ನಿರ್ದಿಷ್ಟಪಡಿಸುವ ಯಾವುದೇ ಉಪವಿಧಿ ಏನೇ ಇದ್ದಾಗ್ಯೂ, ಅವನು ನಿರ್ದೇಶಿಸಬಹುದಾದಂಥ ವಿಷಯಗಳನ್ನು ಪರಿಶೀಲಿಸುವುದಕ್ಕೆ ಸೊಸೈಟಿಯ ಕೇಂದ್ರ ಕಚೇರಿಯಲ್ಲಿ ಅಂಥ ಸಮಯದಲ್ಲಿ ಮತ್ತು ಸ್ಥಳದಲ್ಲಿ ಏಳು ದಿವಸಗಳಿಗಿಂತ ಕಡಿಮೆಯಿಲ್ಲದಂತೆ ನೋಟೀಸನ್ನು ನೀಡುವ ಮೂಲಕ ಸೊಸೈಟಿಯ ಸಾಮಾನ್ಯ ಸಭೆಯನ್ನು ಕರೆಯುವುದಕ್ಕೆ ಸೊಸೈಟಿಯ ಅಧಿಕಾರಿಗಳಿಗೆ ಅವನು ಅಗತ್ಯಪಡಿಸಬಹುದು; ಮತ್ತು ಸೊಸೈಟಿಯ ಅಧಿಕಾರಿಗಳು ಅಂಥ ಸಭೆಯನ್ನು ಕರೆಯುವುದಕ್ಕೆ ನಿರಾಕರಿಸಿದರೆ ಅಥವಾ ವಿಫಲರಾದರೆ, ಅವನು ಸ್ವತಃ ತಾನೇ ಸಭೆಯನ್ನು ಕರೆಯುವ ಅಧಿಕಾರವನ್ನು ಹೊಂದಿರತಕ್ಕದ್ದು.

(ಸಿ) ಬಹು–ರಾಜ್ಯ ಸಹಕಾರಿ ಸೊಸೈಟಿಯ ವ್ಯವಹಾರಗಳ ಬಗ್ಗೆ ಯಾವುದೇ ತಿಳಿವಳಿಕೆಯನ್ನು ಹೊಂದಿರುವನೆಂದು ಅವನು ಸೂಕ್ತವಾಗಿ ನಂಬಿದ ಯಾರೇ ವ್ಯಕ್ತಿಯನ್ನು ಸೊಸೈಟಿಯ ಕೇಂದ್ರ ಕಾರ್ಯ ಸ್ಥಾನದ ಯಾವುದೇ ಸ್ಥಳದಲ್ಲಿ ಅಥವಾ ಅದರ ಯಾವುದೇ ಶಾಖೆಯಲ್ಲಿ ತನ್ನ ಮುಂದೆ ಹಾಜರಾಗುವುದಕ್ಕೆ ಆ ವ್ಯಕ್ತಿಗೆ ಸಮನು ನೀಡಬಹುದು ಮತ್ತು ಅಂಥ ವ್ಯಕ್ತಿಯನ್ನು ಪ್ರಮಾಣ ಮಾಡಿಸಿ ಪರೀಕ್ಷಿಸಬಹುದು.

(3) (2)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಕರೆಯಲಾದ ಯಾವುದೇ ಸಭೆಯು ಸೊಸೈಟಿಯ ಉಪವಿಧಿಗಳ ಮೇರೆಗೆ ಕರೆಯಲಾದ ಸೊಸೈಟಿಯ ಸಾಮಾನ್ಯ ಸಭೆಯ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅದರ ವ್ಯವಹರಣೆಗಳನ್ನು ಅಂಥ ಉಪ ವಿಧಿಗಳ ಮೂಲಕ ವಿನಿಯಮಿಸತಕ್ಕದ್ದು.

(4) ಕೇಂದ್ರ ರಿಜಿಸ್ಟ್ರಾರನು ವರದಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ, ವಿಚಾರಣಾ ವರದಿಯನ್ನು ಬಹು–ರಾಜ್ಯ ಸಹಕಾರಿ ಸೊಸೈಟಿಗೆ, ಸೊಸೈಟಿಯು ಸಂಯೋಜನೆಗೊಂಡ ಹಣಕಾಸು ಸಂಸ್ಥೆಗಳು, ಯಾವುವಾದರೂ ಇದ್ದರೆ, ಅವುಗಳಿಗೆ ಮತ್ತು ಯಾರ

ಸೂಚನೆಯಂತೆ ವಿಚಾರಣೆಯನ್ನು ಮಾಡಲಾಗಿದೆಯೋ ಆ ವ್ಯಕ್ತಿ ಅಥವಾ ಪ್ರಾಧಿಕಾರಿ, ಯಾರಾದರೂ ಇದ್ದರೆ, ಅವರಿಗೆ ತಿಳಿಸತಕ್ಕದ್ದು.

**79. ಬಹು-ರಾಜ್ಯ ಸಹಕಾರಿ ಸೊಸೈಟಿಗಳ ತಪಾಸಣೆ.-** (1) ಕೇಂದ್ರ ರಿಜಿಸ್ಟ್ರಾರನು, ಯಾವ ಸಹಕಾರಿ ಮಹಾ ಮಂಡಲಕ್ಕೆ ಬಹು-ರಾಜ್ಯ ಸಹಕಾರಿ ಸೊಸೈಟಿಯು ಸಂಯೋಜನೆಗೊಂಡಿದೆಯೋ ಆ ಸಹಕಾರಿ ಮಹಾ ಮಂಡಲದಿಂದ ಅಥವಾ ಸಾಲಕೊಟ್ಟವನಿಂದ ಅಥವಾ ಮಂಡಲಿಯ ಸದಸ್ಯರ ಮೂರನೇ ಒಂದಕ್ಕಿಂತ ಕಡಿಮೆಯಲ್ಲದ ಸದಸ್ಯರಿಂದ ಅಥವಾ ಬಹು-ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯರ ಒಟ್ಟು ಸಂಖ್ಯೆಯ ಐದನೇ ಒಂದಕ್ಕಿಂತ ಕಡಿಮೆಯಿಲ್ಲದ ಸದಸ್ಯರಿಂದ ಬಂದ ಕೋರಿಕೆಯ ಮೇರೆಗೆ, ಈ ಬಗ್ಗೆ ಸಾಮಾನ್ಯ ಅಥವಾ ವಿಶೇಷ ಲಿಖಿತ ಆದೇಶದ ಮೂಲಕ ಬಹು-ರಾಜ್ಯ ಸಹಕಾರಿ ಸೊಸೈಟಿಯ ರಚನೆ, ಕಾರ್ಯನಿರ್ವಹಣೆ ಮತ್ತು ಹಣಕಾಸು ಪರಿಸ್ಥಿತಿಯ ಬಗ್ಗೆ ತಪಾಸಣೆ ಮಾಡಬಹುದು ಅಥವಾ ಈ ಬಗ್ಗೆ ಲಿಖಿತ ಆದೇಶದ ಮೂಲಕ ಅವನು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಗೆ ತಪಾಸಣೆ ಮಾಡುವಂತೆ ನಿರ್ದೇಶಿಸಬಹುದು:

ಪರಂತು, ಈ ಉಪಪ್ರಕರಣದ ಮೇರೆಗಿನ ತಪಾಸಣೆಯನ್ನು ಬಹು-ರಾಜ್ಯ ಸಹಕಾರಿ ಸೊಸೈಟಿಗೆ ಹದಿನೈದು ದಿನಗಳಿಗಿಂತ ಕಡಿಮೆಯಿಲ್ಲದ ನೋಟೀಸನ್ನು ನೀಡಿದ ಹೊರತು ಮಾಡತಕ್ಕದ್ದಲ್ಲ.

(2) (ಎ) (1)ನೇ ಉಪಪ್ರಕರಣದ ಮೇರೆಗಿನ ತಪಾಸಣೆಯ ಉದ್ದೇಶಕ್ಕಾಗಿ ಕೇಂದ್ರ ರಿಜಿಸ್ಟ್ರಾರನು ಅಥವಾ ಆ ಉಪಪ್ರಕರಣದ ಮೇರೆಗೆ ಅವನು ಅಧಿಕೃತಗೊಳಿಸಿದ ವ್ಯಕ್ತಿಯು ಆ ಸೊಸೈಟಿಯ ಎಲ್ಲ ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ಕಾಗದಪತ್ರಗಳನ್ನು, ವೋಚರುಗಳನ್ನು, ಭದ್ರತೆಗಳನ್ನು, ದಾಸ್ತಾನನ್ನು ಮತ್ತು ಇತರ ಸ್ವತ್ತನ್ನು ಎಲ್ಲ ಕಾಲಗಳಲ್ಲಿ ನೋಡುವ ಅವಕಾಶ ಇರತಕ್ಕದ್ದು ಮತ್ತು ತಪಾಸಣೆ ಮಾಡುವಾಗ ಗುರುತರ ಅಕ್ರಮಗಳೇನಾದರೂ ಕಂಡು ಬಂದಲ್ಲಿ ಅವುಗಳನ್ನು ವಶಕ್ಕೆ ತೆಗೆದುಕೊಳ್ಳಬಹುದು ಮತ್ತು ಸೊಸೈಟಿಯ ನಗದು ಶಿಲ್ಕನ್ನು ಪರಿಶೀಲಿಸುವ ಮತ್ತು ಕೇಂದ್ರ ರಿಜಿಸ್ಟ್ರಾರನ ಸಾಮಾನ್ಯ ಅಥವಾ ವಿಶೇಷ ಆದೇಶಕ್ಕೆ ಒಳಪಟ್ಟು ಮಂಡಲಿಯ ಸಭೆಯನ್ನು ಮತ್ತು ಸೊಸೈಟಿಯ ಸಾಮಾನ್ಯ ಸಭೆಯನ್ನು ಕರೆಯುವುದು ಅವಶ್ಯವೆಂದು ಅವನು ಅಭಿಪ್ರಾಯಪಟ್ಟರೆ ಅಂಥ ಸಾಮಾನ್ಯ ಸಭೆಯನ್ನು ಸಹ ಕರೆಯುವ ಅಧಿಕಾರವನ್ನು ಹೊಂದಿರತಕ್ಕದ್ದು.

(ಬಿ) ಬಹು-ರಾಜ್ಯ ಸಹಕಾರಿ ಸೊಸೈಟಿಯ ಪ್ರತಿಯೊಬ್ಬ ಅಧಿಕಾರಿಯು ಅಥವಾ ಸದಸ್ಯನು, ಕೇಂದ್ರ ರಿಜಿಸ್ಟ್ರಾರನು ಅಥವಾ ಅಂಥ ತಪಾಸಣೆ ಮಾಡುವ ವ್ಯಕ್ತಿಯು ಅಗತ್ಯಪಡಿಸಬಹುದಾದ ಸೊಸೈಟಿಯ ಕಾರ್ಯಕ್ಕೆ ಸಂಬಂಧಿಸಿದಂಥ ಮಾಹಿತಿಯನ್ನು ಒದಗಿಸತಕ್ಕದ್ದು.

(3) ಈ ಪ್ರಕರಣದ ಮೇರೆಗಿನ ತಪಾಸಣಾ ವರದಿಯ ಪ್ರತಿಯನ್ನು ಅಂಥ ತಪಾಸಣೆಯು ಪೂರ್ಣಗೊಂಡ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯೊಳಗೆ ಬಹು-ರಾಜ್ಯ ಸಹಕಾರಿ ಸೊಸೈಟಿಗೆ ಕಳುಹಿಸತಕ್ಕದ್ದು.

**80. ಋಣಿಯಾಗಿರುವ ಬಹು-ರಾಜ್ಯ ಸಹಕಾರಿ ಸೊಸೈಟಿಗಳ ಪುಸ್ತಕಗಳ ತಪಾಸಣೆ.-** (1) ಕೇಂದ್ರ ರಿಜಿಸ್ಟ್ರಾರನು, ಬಹು-ರಾಜ್ಯ ಸಹಕಾರಿ ಸೊಸೈಟಿಗೆ ಸಾಲ ಕೊಟ್ಟವನ ಅರ್ಜಿಯ ಮೇರೆಗೆ, ಸೊಸೈಟಿಯ ಪುಸ್ತಕವನ್ನು ತಪಾಸಣೆ ಮಾಡತಕ್ಕದ್ದು ಅಥವಾ ಈ ಬಗ್ಗೆ ಲಿಖಿತ ಆದೇಶದ ಮೂಲಕ ಅವನು ಅಧಿಕೃತಗೊಳಿಸಿದ ವ್ಯಕ್ತಿಗೆ ತಪಾಸಣೆ ಮಾಡುವುದಕ್ಕೆ ನಿರ್ದೇಶಿಸತಕ್ಕದ್ದು:

ಪರಂತು, ಅರ್ಜಿದಾರನು,-

(ಎ) ಸಾಲವು ಆಗ ಬಾಕಿಯಿರುವ ಮೊಬಲಗು ಎಂದು ಮತ್ತು ಅದನ್ನು ಸಂದಾಯ ಮಾಡುವಂತೆ ತಗಾದೆ ಮಾಡಿದ್ದೆನೆಂದು ಮತ್ತು ಸೂಕ್ತ ಸಮಯದೊಳಗೆ ತೀರಿಸಿರಲಿಲ್ಲವೆಂದು ಕೇಂದ್ರ ರಿಜಿಸ್ಟ್ರಾರನಿಗೆ ಮನದಟ್ಟು ಮಾಡಿಕೊಟ್ಟ ಹೊರತು;

(ಬಿ) ಪ್ರಸ್ತಾವಿತ ತಪಾಸಣೆಯ ವೆಚ್ಚಗಳಿಗೆ ಭದ್ರತೆಯಾಗಿ ಕೇಂದ್ರ ರಿಜಿಸ್ಟ್ರಾರನು ಅಗತ್ಯಪಡಿಸಬಹುದಾದ ಅಂಥ ಮೊಬಲಗನ್ನು ಕೇಂದ್ರ ರಿಜಿಸ್ಟ್ರಾರನ ಬಳಿ ಠೇವಣಿ ಇಟ್ಟಿದ್ದ ಹೊರತು

– ಅಂಥ ತಪಾಸಣೆಯನ್ನು ಮಾಡತಕ್ಕದ್ದಲ್ಲ.

(2) ಯಾವುದೇ ಅಂಥ ತಪಾಸಣೆಯ ಫಲಿತಾಂಶವನ್ನು ಸಾಲ ಕೊಟ್ಟವನಿಗೆ ಕೇಂದ್ರ ರಿಜಿಸ್ಟ್ರಾರನು ತಿಳಿಸತಕ್ಕದ್ದು.

**81. ವಿಚಾರಣೆ ಮತ್ತು ತಪಾಸಣೆಯ ವೆಚ್ಚಗಳು.–** 78ನೇ ಪ್ರಕರಣದ ಮೇರೆಗೆ ವಿಚಾರಣೆಯನ್ನು ನಡೆಸಿದಲ್ಲಿ ಅಥವಾ 79ನೇ ಪ್ರಕರಣದ ಮೇರೆಗೆ ತಪಾಸಣೆಯನ್ನು ಮಾಡಿದಲ್ಲಿ, ಕೇಂದ್ರ ರಿಜಿಸ್ಟ್ರಾರನು, ವಿಚಾರಣೆಯನ್ನು ಅಥವಾ ತಪಾಸಣೆಯನ್ನು ಕೇಳಿರುವ ಬಹು–ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯರು ಅಥವಾ ಸಾಲಕೊಟ್ಟವರು ಮತ್ತು ಆ ಸೊಸೈಟಿಯ ಅಧಿಕಾರಿಗಳು ಅಥವಾ ಹಿಂದಿನ ಅಧಿಕಾರಿಗಳು ಮತ್ತು ಸದಸ್ಯರು ಅಥವಾ ಹಿಂದಿನ ಸದಸ್ಯರು ಇವರ ನಡುವೆ, ತಾನು ಸೂಕ್ತವೆಂದು ಆಲೋಚಿಸಬಹುದಾದಂತೆ ವೆಚ್ಚಗಳನ್ನು ಅಥವಾ ವೆಚ್ಚಗಳ ಅಂಥ ಭಾಗವನ್ನು ಹಂಚಬಹುದು:

ಪರಂತು,–

(ಎ) ವೆಚ್ಚಗಳ ಹಂಚಿಕೆಯ ಆದೇಶವನ್ನು, ಅದರ ಮೇರೆಗೆ ವೆಚ್ಚಗಳನ್ನು ಸಂದಾಯ ಮಾಡಲು ಹೊಣೆಗಾರರಾಗಿರುವ ಸೊಸೈಟಿಗೆ ಅಥವಾ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ಹೊರತು, ಈ ಪ್ರಕರಣದ ಮೇರೆಗೆ ಮಾಡತಕ್ಕದ್ದಲ್ಲ.

(ಬಿ) ಕೇಂದ್ರ ರಿಜಿಸ್ಟ್ರಾರನು ವೆಚ್ಚಗಳನ್ನು ಯಾವ ಆಧಾರಗಳ ಮೇಲೆ ಹಂಚಲಾಯಿತೋ ಆ ಆಧಾರಗಳನ್ನು ತನ್ನ ಸಹಿಯೊಂದಿಗೆ ಲಿಖಿತದಲ್ಲಿ ತಿಳಿಸತಕ್ಕದ್ದು.

**82. ವೆಚ್ಚಗಳ ವಸೂಲಿ.–** 81ನೇ ಪ್ರಕರಣದ ಮೇರೆಗೆ ವೆಚ್ಚಗಳ ರೂಪದಲ್ಲಿ ನೀಡಿದ ಯಾವುದೇ ಮೊಬಲಗನ್ನು, ಯಾರಿಂದ ಅದನ್ನು ಕ್ಲೇಮು ಮಾಡಲಾಗುತ್ತದೋ ಆ ವ್ಯಕ್ತಿಯು, ವಾಸ್ತವಿಕವಾಗಿ ಮತ್ತು ಸ್ವಯಿಚ್ಛೆಯಿಂದ ಯಾವ ಸ್ಥಳದಲ್ಲಿ ವಾಸಿಸುತ್ತಿರುವನೋ ಅಥವಾ ವ್ಯವಹಾರ ನಡೆಸುತ್ತಿರುವನೋ ಆ ಸ್ಥಳದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮ್ಯಾಜಿಸ್ಟ್ರೇಟನಿಗೆ ಅರ್ಜಿಯನ್ನು ಸಲ್ಲಿಸಿದಾಗ ವಸೂಲಿ ಮಾಡಬಹುದು ಮತ್ತು ಅಂಥ ಮ್ಯಾಜಿಸ್ಟ್ರೇಟನು ತಾನೇ ವಿಧಿಸಿದ ಜುಲ್ಮಾನೆಯಾಗಿದ್ದರೆ ಹೇಗೋ ಹಾಗೆ ಅದನ್ನು ವಸೂಲಿ ಮಾಡಬಹುದು.

**83. ಮರು ಸಂದಾಯ, ಇತ್ಯಾದಿ.–** (1) ಲೆಕ್ಕಪರಿಶೋಧನೆಯ, ವಿಚಾರಣೆಯ, ತಪಾಸಣೆಯ ಅಥವಾ ಬಹು–ರಾಜ್ಯ ಸಹಕಾರಿ ಸೊಸೈಟಿಯ ಸಮಾಪನದ ಸಂದರ್ಭದಲ್ಲಿ ಅಂಥ ಸೊಸೈಟಿಯ ರಚನೆ ಅಥವಾ ವ್ಯವಸ್ಥಾಪನೆಯನ್ನು ಯಾರಿಗೆ ವಹಿಸಿಕೊಡಲಾಗಿದೆಯೋ ಅಥವಾ ವಹಿಸಿಕೊಡಲಾಗಿತ್ತೋ ಅಥವಾ ಯಾವುದೇ ಕಾಲದಲ್ಲಿ ಸೊಸೈಟಿಯ ಅಧಿಕಾರಿಯಾಗಿರುವ ಅಥವಾ ನೌಕರನಾಗಿರುವ ಅಥವಾ ಅಧಿಕಾರಿಯಾಗಿದ್ದ ಅಥವಾ ನೌಕರನಾಗಿದ್ದ ಯಾರೇ ವ್ಯಕ್ತಿಯು, ಈ ಅಧಿನಿಯಮಕ್ಕೆ ಅಥವಾ ಉಪವಿಧಿಗಳಿಗೆ ವಿರುದ್ಧವಾಗಿ ಯಾವುದೇ

ಸಂದಾಯವನ್ನು ಮಾಡಿದ್ದಾನೆಂದು ಅಥವಾ ನಂಬಿಕೆದ್ರೋಹದಿಂದ ಅಥವಾ ಉದ್ದೇಶಪೂರ್ವಕ ನಿರ್ಲಕ್ಷ್ಯದಿಂದ ಸೊಸೈಟಿಯ ಆಸ್ತಿಗಳಲ್ಲಿ ಯಾವುದೇ ಕೊರತೆಯನ್ನುಂಟು ಮಾಡಿದ್ದಾನೆಂದು ಅಥವಾ ಅಂಥ ಸೊಸೈಟಿಗೆ ಸೇರಿದ ಯಾವುದೇ ಹಣವನ್ನು ಅಥವಾ ಇತರ ಸ್ವತ್ತನ್ನು ದುರುಪಯೋಗಪಡಿಸಿಕೊಂಡಿದ್ದಾನೆಂದು ಅಥವಾ ಮೋಸದಿಂದ ಇಟ್ಟುಕೊಂಡಿದ್ದಾನೆಂದು ಕಂಡು ಬಂದರೆ, ಕೇಂದ್ರ ರಿಜಿಸ್ಟ್ರಾರನು, ತಾನಾಗಿಯೇ ಅಥವಾ ಮಂಡಲಿಯ, ಸಮಾಪಕನ ಅಥವಾ ಯಾರೇ ಸಾಲಕೊಟ್ಟವನ ಅರ್ಜಿಯ ಮೇಲೆ, ಸ್ವತಃ ವಿಚಾರಣೆ ನಡೆಸಬಹುದು ಅಥವಾ ಈ ಬಗ್ಗೆ ಲಿಖಿತದಲ್ಲಿನ ಆದೇಶದ ಮೂಲಕ ಅಂಥ ವ್ಯಕ್ತಿಯ ವರ್ತನೆಯ ಬಗ್ಗೆ ಲೆಕ್ಕಪರಿಶೋಧನೆಯ, ತಪಾಸಣೆಯ ಅಥವಾ ವಿಚಾರಣೆಯ ವರದಿಯ ದಿನಾಂಕದಿಂದ ಅಥವಾ ಸಂದರ್ಭಾನುಸಾರ, ಸಮಾಪನದ ಆದೇಶದ ದಿನಾಂಕದಿಂದ ಎರಡು ವರ್ಷಗಳ ಅವಧಿಯೊಳಗೆ ವಿಚಾರಣೆ ನಡೆಸಲು, ತಾನು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಗೆ ನಿರ್ದೇಶನ ನೀಡಬಹುದು:

ಪರಂತು, ಅಂಥ ವಿಚಾರಣೆಯನ್ನು, ಮೋಸದ ಅಥವಾ ವಾಸ್ತವಾಂಶಗಳನ್ನು ಬಚ್ಚಿಟ್ಟ ಕಾರಣದಿಂದ ಮೇಲೆ ಹೇಳಿದ ಎರಡು ವರ್ಷಗಳ ಅವಧಿಯಲ್ಲಿ ಪ್ರಾರಂಭಿಸಲು ಆಗಲಿಲ್ಲವೆಂದು ಕೇಂದ್ರ ರಿಜಿಸ್ಟ್ರಾರನಿಗೆ ಮನದಟ್ಟಾದರೆ, ಅವನು ಲೆಕ್ಕಪರಿಶೋಧನೆಯ, ತಪಾಸಣೆಯ ಅಥವಾ ವಿಚಾರಣೆಯ ವರದಿಯ ದಿನಾಂಕದಿಂದ ಅಥವಾ ಸಮಾಪನದ ಆದೇಶದ ದಿನಾಂಕದಿಂದ ಆತನು ಸೂಕ್ತವೆಂದು ಆಲೋಚಿಸಬಹುದಾದಂಥ ಆರು ವರ್ಷಗಳಿಗೆ ಮೀರದ ಅವಧಿಯೊಳಗೆ ವಿಚಾರಣೆಯನ್ನು ಮಾಡಬಹುದು ಅಥವಾ ಮಾಡುವಂತೆ ನಿರ್ದೇಶಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ವಿಚಾರಣೆಯನ್ನು ಮಾಡಿದಲ್ಲಿ, ಸಂಬಂಧಪಟ್ಟ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ನಂತರ, ಹಣವನ್ನು ಅಥವಾ ಸ್ವತ್ತನ್ನು ಅಥವಾ ಅದರ ಯಾವುದೇ ಭಾಗವನ್ನು ಕೇಂದ್ರ ರಿಜಿಸ್ಟ್ರಾರನು ನ್ಯಾಯಯುತವಾದುದೆಂದು ಮತ್ತು ನ್ಯಾಯಬದ್ಧವಾದುದೆಂದು ಪರಿಗಣಿಸಬಹುದಾದಂತೆ ಅಂಥ ದರದಲ್ಲಿ ಬಡ್ಡಿ ಸಮೇತ ಮರುಸಂದಾಯ ಮಾಡುವುದಕ್ಕೆ ಅಥವಾ ವಾಪಸು ಕೊಡುವುದಕ್ಕೆ ಅಥವಾ ಅಂಥ ಪ್ರಮಾಣದಲ್ಲಿ ದೇಣಿಗೆಯನ್ನು ಮತ್ತು ವೆಚ್ಚಗಳನ್ನು ಅಥವಾ ನಷ್ಟಪರಿಹಾರವನ್ನು ಸಂದಾಯ ಮಾಡಲು ಅವನನ್ನು ಅಗತ್ಯಪಡಿಸುವ ಆದೇಶವನ್ನು ಮಾಡಬಹುದು.

## ಅಧ್ಯಾಯ – IX

## ವಿವಾದಗಳ ಇತ್ಯರ್ಥ

**84. ವಿವಾದಗಳ ಉಲ್ಲೇಖ.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ ಬಹು–ರಾಜ್ಯ ಸಹಕಾರಿ ಸೊಸೈಟಿಯು ತನ್ನ ಸಂಬಳ ಪಡೆಯುವ ನೌಕರನ ವಿರುದ್ಧ ಕೈಗೊಂಡ ಶಿಸ್ತು ಕ್ರಮದ ಅಥವಾ ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14)ರ 2ನೇ ಪ್ರಕರಣದ (ಕೆ) ಖಂಡದಲ್ಲಿ ಪರಿಭಾಷಿಸಿದಂತೆ ಕೈಗಾರಿಕಾ ವಿವಾದಕ್ಕೆ ಸಂಬಂಧಿಸಿದ ವಿವಾದವನ್ನು ಹೊರತುಪಡಿಸಿ ಬಹು–ರಾಜ್ಯ ಸಹಕಾರಿ ಸೊಸೈಟಿಯ ರಚನೆ, ವ್ಯವಸ್ಥಾಪನೆ ಅಥವಾ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾವುದೇ ವಿವಾದವು,–

(ಎ) ಸದಸ್ಯರು, ಹಿಂದಿನ ಸದಸ್ಯರು ಮತ್ತು ಸದಸ್ಯರ, ಹಿಂದಿನ ಸದಸ್ಯರ ಮತ್ತು ಮೃತ ಸದಸ್ಯರ ಪರವಾಗಿ ಕ್ಲೇಮು ಮಾಡುವ ವ್ಯಕ್ತಿಗಳ ನಡುವೆ;

(ಬಿ) ಸದಸ್ಯನ, ಹಿಂದಿನ ಸದಸ್ಯರ ಮತ್ತು ಸದಸ್ಯನ, ಹಿಂದಿನ ಸದಸ್ಯರ ಅಥವಾ ಮೃತ ಸದಸ್ಯನ ಪರವಾಗಿ ಕ್ಲೇಮು ಮಾಡುವ ವ್ಯಕ್ತಿಗಳ, ಮತ್ತು ಬಹು–ರಾಜ್ಯ ಸಹಕಾರಿ ಸೊಸೈಟಿಯ, ಅದರ ಮಂಡಲಿಯ

ಅಥವಾ ಬಹು–ರಾಜ್ಯ ಸಹಕಾರಿ ಸೊಸೈಟಿಯ ಯಾರೇ ಅಧಿಕಾರಿಯ, ಏಜೆಂಟ್‌ನ ಅಥವಾ ನೌಕರನ ಅಥವಾ ಹಿಂದಿನ ಅಥವಾ ಈಗಿನ ಸಮಾಪಕನ ನಡುವೆ; ಅಥವಾ

(ಸಿ) ಬಹು–ರಾಜ್ಯ ಸಹಕಾರಿ ಸೊಸೈಟಿಯ ಅಥವಾ ಅದರ ಮಂಡಲಿಯ ಮತ್ತು ಯಾವುದೇ ಹಿಂದಿನ ಮಂಡಲಿಯ, ಬಹು–ರಾಜ್ಯ ಸಹಕಾರಿ ಸೊಸೈಟಿಯ ಯಾರೇ ಅಧಿಕಾರಿಯ, ಏಜೆಂಟ್‌ನ ಅಥವಾ ನೌಕರನ ಅಥವಾ ಯಾರೇ ಹಿಂದಿನ ಅಧಿಕಾರಿಯ, ಹಿಂದಿನ ಏಜೆಂಟ್‌ನ ಅಥವಾ ಹಿಂದಿನ ನೌಕರನ ಯಾರೇ ಮೃತ ಅಧಿಕಾರಿಯ, ಮೃತ ಏಜೆಂಟ್‌ನ ಅಥವಾ ಮೃತ ನೌಕರನ ಉತ್ತರಾಧಿಕಾರಿಗಳ ಅಥವಾ ಕಾನೂನು ಸಮ್ಮತ ಪ್ರತಿನಿಧಿಗಳ ನಡುವೆ; ಅಥವಾ

(ಡಿ) ಬಹು–ರಾಜ್ಯ ಸಹಕಾರಿ ಸೊಸೈಟಿಯ ಮತ್ತು ಯಾವುದೇ ಇತರ ಬಹು–ರಾಜ್ಯ ಸಹಕಾರಿ ಸೊಸೈಟಿಯ ನಡುವೆ, ಬಹು–ರಾಜ್ಯ ಸಹಕಾರಿ ಸೊಸೈಟಿಯ ಮತ್ತು ಮತ್ತೊಂದು ಬಹು–ರಾಜ್ಯ ಸಹಕಾರಿ ಸೊಸೈಟಿಯ ಸಮಾಪಕನ ನಡುವೆ ಅಥವಾ ಒಂದು ಬಹು–ರಾಜ್ಯ ಸಹಕಾರಿ ಸೊಸೈಟಿಯ ಮತ್ತು ಮತ್ತೊಂದು ಬಹು–ರಾಜ್ಯ ಸಹಕಾರಿ ಸೊಸೈಟಿಯ ಸಮಾಪಕನ ನಡುವೆ

– ಉದ್ಭವಿಸಿದರೆ, ಅಂಥ ವಿವಾದವನ್ನು ಮಧ್ಯಸ್ಥಿಕೆಗೆ ಒಪ್ಪಿಸತಕ್ಕದ್ದು.

(2) (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, ಈ ಮುಂದಿನವುಗಳನ್ನು ಬಹು–ರಾಜ್ಯ ಸಹಕಾರಿ ಸೊಸೈಟಿಯ ರಚನೆ, ವ್ಯವಸ್ಥಾಪನೆ ಅಥವಾ ವ್ಯವಹಾರಕ್ಕೆ ಸಂಬಂಧಿಸಿದ ವಿವಾದಗಳೆಂಬುದಾಗಿ ಭಾವಿಸತಕ್ಕದ್ದು, ಎಂದರೆ:–

(ಎ) ಸದಸ್ಯನಿಂದ ಅಥವಾ ಮೃತ ಸದಸ್ಯನ ನಾಮನಿರ್ದೇಶಿತನಿಂದ, ಉತ್ತರಾಧಿಕಾರಿಗಳಿಂದ ಅಥವಾ ಕಾನೂನುಸಮ್ಮತ ಪ್ರತಿನಿಧಿಗಳಿಂದ ಅದಕ್ಕೆ ಬರಬೇಕಾದ ಯಾವುದೇ ಸಾಲಕ್ಕೆ ಅಥವಾ ತಗಾದೆಗೆ ಅಂಥ ಸಾಲವನ್ನು ಅಥವಾ ತಗಾದೆಯನ್ನು ಒಪ್ಪಲಿ ಅಥವಾ ಒಪ್ಪದಿರಲಿ, ಬಹು–ರಾಜ್ಯ ಸಹಕಾರಿ ಸೊಸೈಟಿಯು ಮಾಡುವ ಕ್ಲೇಮು;

(ಬಿ) ಪ್ರಧಾನ ಋಣಿಯು ಸಂದಾಯ ಮಾಡದೆ ತಪ್ಪಿದ ಪರಿಣಾಮವಾಗಿ ಪ್ರಧಾನ ಋಣಿಯಿಂದ ಬಹು–ರಾಜ್ಯ ಸಹಕಾರಿ ಸೊಸೈಟಿಗೆ ಬರಬೇಕಾದ ಯಾವುದೇ ಋಣಕ್ಕೆ ಅಥವಾ ತಗಾದೆಗೆ ಸಂಬಂಧಿಸಿದಂತೆ ಯಾವುದೇ ಮೊಬಲಗನ್ನು ಜಾಮೀನುದಾರನಿಂದ ಅದು ವಸೂಲಿ ಮಾಡಿದಲ್ಲಿ, ಅಂಥ ಋಣವನ್ನು ಅಥವಾ ತಗಾದೆಯನ್ನು ಒಪ್ಪಲಿ ಅಥವಾ ಒಪ್ಪದಿರಲಿ ಪ್ರಧಾನ ಋಣಿಯ ವಿರುದ್ಧ ಅಂಥ ಜಾಮೀನುದಾರನು ಮಾಡುವ ಕ್ಲೇಮು;

(ಸಿ) ಬಹು–ರಾಜ್ಯ ಸಹಕಾರಿ ಸೊಸೈಟಿಯ ಯಾರೇ ಅಧಿಕಾರಿಯ ಚುನಾವಣೆಗೆ ಸಂಬಂಧಿಸಿದಂತೆ ಉದ್ಭವಿಸುವ ಯಾವುದೇ ವಿವಾದ.

(3) ಈ ಪ್ರಕರಣದ ಮೇರೆಗೆ ಮಧ್ಯಸ್ಥಿಕೆಗೆ ವಹಿಸಿದ ವಿವಾದವು ಬಹು–ರಾಜ್ಯ ಸಹಕಾರಿ ಸೊಸೈಟಿಯ ರಚನೆಗೆ, ವ್ಯವಸ್ಥಾಪನೆಗೆ ಅಥವಾ ವ್ಯವಹಾರಕ್ಕೆ ಸಂಬಂಧಿಸಿದ ವಿವಾದವೇ ಅಥವಾ ಅಲ್ಲವೇ ಎನ್ನುವ ಯಾವುದೇ ಪ್ರಶ್ನೆ ಉದ್ಭವಿಸಿದರೆ ಅದರ ಬಗ್ಗೆ ಮಧ್ಯಸ್ಥಿಕೆದಾರನ ತೀರ್ಮಾನವೇ ಅಂತಿಮವಾಗಿರತಕ್ಕದ್ದು ಮತ್ತು ಆ ತೀರ್ಮಾನವನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

(4) (1)ನೇ ಉಪಪ್ರಕರಣದ ಮೇರೆಗೆ ವಿವಾದವನ್ನು ಮಧ್ಯಸ್ಥಿಕೆಗೆ ವಹಿಸಿದಲ್ಲಿ, ಅದನ್ನು ಕೇಂದ್ರ ರಿಜಿಸ್ಟ್ರಾರನು ನೇಮಕ ಮಾಡಿದ ಮಧ್ಯಸ್ಥಿಕೆದಾರನು ಇತ್ಯರ್ಥಪಡಿಸತಕ್ಕದ್ದು ಅಥವಾ ತೀರ್ಮಾನಿಸತಕ್ಕದ್ದು.

(5) ಈ ಅಧಿನಿಯಮದ ಮೇರೆಗೆ ಅನ್ಯಥಾ ಉಪಬಂಧಿಸಿರುವುದನ್ನುಳಿದು, ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮ, 1996ರ ಉಪಬಂಧಗಳು ಮಧ್ಯಸ್ಥಿಕೆಯ ವ್ಯವಹರಣೆಗಳನ್ನು ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮ, 1996 (1996ರ 26)ರ ಉಪಬಂಧಗಳ ಮೇರೆಗೆ ಇತ್ಯರ್ಥಕ್ಕೆ ಅಥವಾ ತೀರ್ಮಾನಕ್ಕೆ ವಹಿಸಿದ್ದರೆ ಹೇಗೋ ಹಾಗೆ ಈ ಅಧಿನಿಯಮದ ಮೇರೆಗಿನ ಎಲ್ಲ ಮಧ್ಯಸ್ಥಿಕೆಗಳಿಗೆ ಅನ್ವಯವಾಗತಕ್ಕದ್ದು.

**85. ಕಾಲಪರಿಮಿತಿ.–** (1) ಕಾಲ ಪರಿಮಿತಿ ಅಧಿನಿಯಮ, 1963 (1963ರ 36) ರಲ್ಲಿ ಏನೇ ಒಳಗೊಂಡಿದ್ದರೂ, ಆದರೆ, ಈ ಅಧಿನಿಯಮದಲ್ಲಿ ಮಾಡಿದ ನಿರ್ದಿಷ್ಟ ಉಪಬಂಧಗಳಿಗೆ ಒಳಪಟ್ಟು, ಮಧ್ಯಸ್ಥಿಕೆಗೆ ವಹಿಸಿದ ವಿವಾದದ ಸಂದರ್ಭದಲ್ಲಿ,–

(ಎ) ಬಹು–ರಾಜ್ಯ ಸಹಕಾರಿ ಸೊಸೈಟಿಗೆ ಅದರ ಸದಸ್ಯನಿಂದ ಬರಬೇಕಾದ ಯಾವುದೇ ಮೊತ್ತ ಹಾಗೂ ಅದರ ಮೇಲಿನ ಬಡ್ಡಿಯೂ ಸೇರಿದಂತೆ, ಯಾವುದೇ ಮೊತ್ತದ ವಸೂಲಾತಿಗೆ ಸಂಬಂಧಿಸಿದ ವಿವಾದವಾಗಿರುವಾಗ, ಅಂಥ ಸದಸ್ಯನು ಮರಣ ಹೊಂದಿದ ದಿನಾಂಕದಿಂದ ಅಥವಾ ಸೊಸೈಟಿಯ ಸದಸ್ಯನಾಗಿರುವುದು ನಿಂತು ಹೋದ ದಿನಾಂಕದಿಂದ ಕಾಲಪರಿಮಿತಿ ಅವಧಿಯನ್ನು ಲೆಕ್ಕಹಾಕತಕ್ಕದ್ದು;

(ಬಿ) (ಸಿ) ಖಂಡದಲ್ಲಿ ಅನ್ಯಥಾ ಉಪಬಂಧಿಸಿದನ್ನುಳಿದು, 84ನೇ ಪ್ರಕರಣದ (1)ನೇ ಉಪ ಪ್ರಕರಣದ (ಬಿ) ಖಂಡದಲ್ಲಿ ಅಥವಾ (ಸಿ) ಖಂಡದಲ್ಲಿ ಅಥವಾ (ಡಿ) ಖಂಡದಲ್ಲಿ ಉಲ್ಲೇಖಿಸಿದ ಪಕ್ಷಕಾರರ ಪೈಕಿ ಯಾರೇ ಪಕ್ಷಕಾರನ ಯಾವುದೇ ಕೃತ್ಯಕ್ಕೆ ಅಥವಾ ಲೋಪಕ್ಕೆ ಸಂಬಂಧಿಸಿದ ವಿವಾದವಾಗಿರುವಾಗ, ಯಾವುದಕ್ಕೆ ಸಂಬಂಧಿಸಿದಂತೆ ವಿವಾದವು ಉದ್ಭವವಾಗಿತ್ತೋ ಆ ಸಂಬಂಧದಲ್ಲಿ ಕೃತ್ಯವು ಅಥವಾ ಲೋಪವು ನಡೆದ ದಿನಾಂಕದಿಂದ, ಕಾಲ ಪರಿಮಿತಿ ಅವಧಿಯು ಆರು ವರ್ಷಗಳಾಗಿರತಕ್ಕದ್ದು.

(ಸಿ) ಬಹು–ರಾಜ್ಯ ಸಹಕಾರಿ ಸೊಸೈಟಿಯ ಅಧಿಕಾರಿಯ ಚುನಾವಣೆಗೆ ಸಂಬಂಧಿಸಿದ ವಿವಾದವಾಗಿದ್ದಲ್ಲಿ, ಚುನಾವಣಾ ಫಲಿತಾಂಶವು ಘೋಷಣೆಯಾದ ದಿನಾಂಕದಿಂದ, ಕಾಲ ಪರಿಮಿತಿ ಅವಧಿಯು ಒಂದು ತಿಂಗಳು ಆಗಿರತಕ್ಕದ್ದು.

(2) ಮಧ್ಯಸ್ಥಿಕೆಗೆ ವಹಿಸಬೇಕೆಂದು ಅಗತ್ಯಪಡಿಸಿದ ಯಾವುದೇ ವಿವಾದದ ಸಂದರ್ಭದಲ್ಲಿ, ಕಾಲ ಪರಿಮಿತಿಯ ಅವಧಿಯನ್ನು, (1)ನೇ ಉಪಪ್ರಕರಣದಲ್ಲಿ ನಮೂದಿಸಿದವುಗಳನ್ನು ಹೊರತುಪಡಿಸಿ, ಆ ವಿವಾದವು ದಾವೆಯಾಗಿದ್ದರೆ ಹಾಗೂ ಮಧ್ಯಸ್ಥಿಕೆದಾರನು ಒಂದು ಸಿವಿಲ್ ನ್ಯಾಯಾಲಯವಾಗಿದ್ದರೆ ಹೇಗೋ ಹಾಗೆ ಕಾಲಪರಿಮಿತಿ ಅಧಿನಿಯಮ, 1963ರ (1963ರ 36) ಉಪಬಂಧಗಳಿಂದ ವಿನಿಯಮನಗೊಳಿಸತಕ್ಕದ್ದು.

(3) (1)ನೇ ಮತ್ತು (2)ನೇ ಉಪಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, ಮಧ್ಯಸ್ಥಿಕೆದಾರನಿಗೆ ಅಂಥ ಅವಧಿಯೊಳಗೆ ವಿವಾದವನ್ನು ವಹಿಸದಿರಲು ಸಾಕಷ್ಟು ಕಾರಣವಿತ್ತೆಂದು ಅರ್ಜಿದಾರನು ಮನದಟ್ಟು ಮಾಡಿಕೊಟ್ಟರೆ, ಕಾಲ ಪರಿಮಿತಿ ಅವಧಿಯ ಮುಕ್ತಾಯದ ನಂತರವೂ ಮಧ್ಯಸ್ಥಿಕೆದಾರನು ವಿವಾದವನ್ನು ಅಂಗೀಕರಿಸಬಹುದು.

## ಅಧ್ಯಾಯ – X

## ಬಹು–ರಾಜ್ಯ ಸಹಕಾರಿ ಸೊಸೈಟಿಯ ಪರಿಸಮಾಪನ

**86. ಬಹು–ರಾಜ್ಯ ಸಹಕಾರಿ ಸೊಸೈಟಿಗಳ ಪರಿಸಮಾಪನ.–** (1) 70ನೇ ಪ್ರಕರಣದ ಮೇರೆಗೆ ಲೆಕ್ಕಪರಿಶೋಧನೆಯನ್ನು ನಡೆಸಿದ ನಂತರ ಅಥವಾ 77ನೇ ಪ್ರಕರಣದ ಮೇರೆಗೆ ವಿಶೇಷ ಲೆಕ್ಕ ಪರಿಶೋಧನೆಯನ್ನು ನಡೆಸಿದ ನಂತರ ಅಥವಾ 78ನೇ ಪ್ರಕರಣದ ಮೇರೆಗೆ ವಿಚಾರಣೆಯನ್ನು ನಡೆಸಿದ ನಂತರ ಅಥವಾ 79ನೇ ಪ್ರಕರಣದ ಮೇರೆಗೆ ತಪಾಸಣೆಯನ್ನು ಮಾಡಿದ ನಂತರ, ಸೊಸೈಟಿಯನ್ನು ಪರಿಸಮಾಪನ ಮಾಡತಕ್ಕದ್ದೆಂದು ಕೇಂದ್ರ ರಿಜಿಸ್ಟ್ರಾರನು ಅಭಿಪ್ರಾಯಪಟ್ಟರೆ, ಅವನು, ಸೊಸೈಟಿಗೆ ಅದರ ನಿವೇದನೆಗಳನ್ನು ಸಲ್ಲಿಸುವುದಕ್ಕೆ ಸೂಕ್ತ ಅವಕಾಶವನ್ನು ನೀಡಿದ ನಂತರ ಅದನ್ನು ಪರಿಸಮಾಪನಗೊಳಿಸುವಂತೆ ಆದೇಶದ ಮೂಲಕ ನಿರ್ದೇಶಿಸಬಹುದು.

(2) ಕೇಂದ್ರ ರಿಜಿಸ್ಟ್ರಾರನು, ತಾನಾಗಿಯೇ ಮತ್ತು ಬಹು–ರಾಜ್ಯ ಸಹಕಾರಿ ಸೊಸೈಟಿಗೆ ಅದರ ನಿವೇದನೆಯನ್ನು ಸಲ್ಲಿಸಲು ಸೂಕ್ತ ಅವಕಾಶವನ್ನು ನೀಡಿದ ನಂತರ,–

(ಎ) ಸೊಸೈಟಿಯು ಕನಿಷ್ಠ ಐವತ್ತು ಸದಸ್ಯರನ್ನು ಒಳಗೊಂಡಿರತಕ್ಕದ್ದೆಂದು ಸೊಸೈಟಿಯ ನೋಂದಣಿಯ ಷರತ್ತು ಇರುವಲ್ಲಿ ಮತ್ತು ಸದಸ್ಯರ ಸಂಖ್ಯೆಯು ಐವತ್ತಕ್ಕಿಂತ ಕಡಿಮೆಯಾಗಿರುವಲ್ಲಿ; ಅಥವಾ

(ಬಿ) ಬಹು–ರಾಜ್ಯ ಸಹಕಾರಿ ಸೊಸೈಟಿಯು ಅದರ ನೋಂದಣಿಯ ದಿನಾಂಕದಿಂದ ಆರು ತಿಂಗಳುಗಳ ಅವಧಿಯೊಳಗೆ ಅಥವಾ ಈ ಬಗ್ಗೆ ಕೇಂದ್ರ ರಿಜಿಸ್ಟ್ರಾರನು ಅನುಮತಿಸಬಹುದಾದಂತೆ ವಿಸ್ತರಿತ ಅವಧಿಯೊಳಗೆ ಕಾರ್ಯವನ್ನು ಪ್ರಾರಂಭಿಸದಿದ್ದಲ್ಲಿ ಅಥವಾ ಸಹಕಾರಿ ತತ್ವಗಳಿಗೆ ಅನುಸಾರವಾಗಿ ಕಾರ್ಯಗಳನ್ನು ನಿರ್ವಹಿಸುವುದು ನಿಂತುಹೋದಲ್ಲಿ

– ಬಹುರಾಜ್ಯ ಸಹಕಾರಿ ಸೊಸೈಟಿಯನ್ನು ಪರಿಸಮಾಪನಗೊಳಿಸಲು ನಿರ್ದೇಶಿಸಿ ಆದೇಶವನ್ನು ಮಾಡಬಹುದು.

(3) ಸೊಸೈಟಿಯು ಅಸ್ತಿತ್ವದಲ್ಲಿರುವುದು ಮುಂದುವರಿಯತಕ್ಕದ್ದೆಂದು ಕೇಂದ್ರ ರಿಜಿಸ್ಟ್ರಾರನು ಅಭಿಪ್ರಾಯಪಟ್ಟರೆ, ಯಾವುದೇ ಸಂದರ್ಭದಲ್ಲಿ, ಯಾವುದೇ ಕಾಲದಲ್ಲಿ ಬಹು–ರಾಜ್ಯ ಸಹಕಾರಿ ಸೊಸೈಟಿಯನ್ನು ಪರಿಸಮಾಪನಗೊಳಿಸಿದ ಆದೇಶವನ್ನು ರದ್ದು ಮಾಡಬಹುದು.

(4) ಅಂಥ ಆದೇಶದ ಪ್ರತಿಯನ್ನು ಬಹು–ರಾಜ್ಯ ಸಹಕಾರಿ ಸೊಸೈಟಿಗೆ ಮತ್ತು ಸೊಸೈಟಿಯ ಸದಸ್ಯ ಆಗಿರುವ ಹಣಕಾಸು ಸಂಸ್ಥೆಗಳು, ಯಾವುವಾದರೂ ಇದ್ದರೆ, ಅವುಗಳಿಗೆ ನೋಂದಾಯಿತ ಅಂಚೆಯ ಮೂಲಕ ಕಳುಹಿಸತಕ್ಕದ್ದು.

(5) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಯಾವುದೇ ಸಹಕಾರಿ ಬ್ಯಾಂಕನ್ನು, ರಿಸರ್ವ್ ಬ್ಯಾಂಕಿನ ಲಿಖಿತ ಪೂರ್ವ ಮಂಜೂರಾತಿಯನ್ನು ಪಡೆದ ಹೊರತು, ಪರಿಸಮಾಪನಗೊಳಿಸತಕ್ಕದ್ದಲ್ಲ.

(6) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಸೊಸೈಟಿಯ ಸಾಮಾನ್ಯ ಸಭೆಯಲ್ಲಿ ಹಾಜರಿದ್ದು ಮತ ನೀಡುವ ಸದಸ್ಯರ ಮೂರನೇ ಎರಡರಷ್ಟು ಬಹುಮತದ ಮೂಲಕ ಸೊಸೈಟಿಯನ್ನು ಪರಿಸಮಾಪನಗೊಳಿಸುವುದಕ್ಕೆ

ತೀರ್ಮಾನಿಸಿ ಸೊಸೈಟಿಯು ಠರಾವನ್ನು ಅಂಗೀಕರಿಸಿದರೆ, ಕೇಂದ್ರ ರಿಜಿಸ್ಟ್ರಾರನು ಬಹು-ರಾಜ್ಯ ಸಹಕಾರಿ ಸೊಸೈಟಿಯನ್ನು ಪರಿಸಮಾಪನಗೊಳಿಸುವ ಆದೇಶವನ್ನು ಮಾಡತಕ್ಕದ್ದು.

**87. ರಿಸರ್ವ್ ಬ್ಯಾಂಕಿನ ನಿರ್ದೇಶನದ ಮೇರೆಗೆ ಸಹಕಾರಿ ಬ್ಯಾಂಕಿನ ಪರಿಸಮಾಪನ.–** ಈ ಅಧಿನಿಯಮದಲ್ಲಿ ಎಲ್ಲಾದರೂ ತದ್ವಿರುದ್ಧವಾದುದು ಏನೇ ಒಳಗೊಂಡಿದ್ದರೂ, ಠೇವಣಿ ವಿಮಾ ಮತ್ತು ಸಾಲ ಖಾತರಿ ನಿಗಮ ಅಧಿನಿಯಮ, 1961 (1961ರ 47)ರ 13ಡಿ ಪ್ರಕರಣದಲ್ಲಿ ನಮೂದಿಸಿದ ಸಂದರ್ಭಗಳಲ್ಲಿ ರಿಸರ್ವ್ ಬ್ಯಾಂಕ್, ಸಹಕಾರಿ ಬ್ಯಾಂಕನ್ನು ಪರಿಸಮಾಪನಗೊಳಿಸುವ ಆದೇಶವನ್ನು ಮಾಡತಕ್ಕದ್ದೆಂದು ಅಗತ್ಯಪಡಿಸಿದರೆ, ಕೇಂದ್ರ ರಿಜಿಸ್ಟ್ರಾರನು ಹಾಗೆ ಮಾಡತಕ್ಕದ್ದು.

**88. ಸಮಾಪಕನು ಠೇವಣಿ ವಿಮಾ ನಿಗಮಕ್ಕೆ ತುಂಬಿಕೊಡುವುದು.–** ಠೇವಣಿ ವಿಮಾ ಮತ್ತು ಸಾಲ ಖಾತರಿ ನಿಗಮ ಅಧಿನಿಯಮ, 1961 (1961ರ 47)ರ ಅರ್ಥವ್ಯಾಪ್ತಿಯೊಳಗೆ ವಿಮೆ ಮಾಡಿದ ಬ್ಯಾಂಕು ಆಗಿರುವ ಸಹಕಾರೀ ಬ್ಯಾಂಕನ್ನು ಪರಿಸಮಾಪನಗೊಳಿಸಿದಲ್ಲಿ ಮತ್ತು ಠೇವಣಿ ವಿಮಾ ನಿಗಮವು ಆ ಅಧಿನಿಯಮದ 16ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವಿಮೆ ಮಾಡಿದ ಬ್ಯಾಂಕಿನ ಠೇವಣಿದಾರರಿಗೆ ಹೊಣೆಯಾಗಿರುವಲ್ಲಿ, ಠೇವಣಿ ವಿಮಾ ನಿಗಮಕ್ಕೆ ಅಂಥ ಸಂದರ್ಭಗಳಲ್ಲಿ ಆ ಅಧಿನಿಯಮದ 21ನೇ ಪ್ರಕರಣದಲ್ಲಿ ಉಪಬಂಧಿಸಿರುವಷ್ಟರ ಮಟ್ಟಿಗೆ ಮತ್ತು ಆ ರೀತಿಯಲ್ಲಿ ಸಮಾಪಕನು ಅಥವಾ ಅಂಥ ಇತರ ವ್ಯಕ್ತಿಯು ತುಂಬಿಕೊಡತಕ್ಕದ್ದು.

**89. ಸಮಾಪಕ.–** (1) ಕೇಂದ್ರ ರಿಜಿಸ್ಟ್ರಾರನು ಬಹು-ರಾಜ್ಯ ಸಹಕಾರಿ ಸೊಸೈಟಿಯನ್ನು ಪರಿಸಮಾಪನಗೊಳಿಸುವುದಕ್ಕೆ 86ನೇ ಪ್ರಕರಣದ ಮೇರೆಗೆ ಆದೇಶವನ್ನು ಮಾಡಿರುವಲ್ಲಿ, ಕೇಂದ್ರ ರಿಜಿಸ್ಟ್ರಾರನು ಆ ಉದ್ದೇಶಕ್ಕಾಗಿ ಸಮಾಪಕನನ್ನು ನೇಮಕ ಮಾಡಬಹುದು ಮತ್ತು ಆತನ ಸಂಭಾವನೆಯನ್ನು ನಿಗದಿಪಡಿಸಬಹುದು.

(2) ಸಮಾಪಕನು, ತನ್ನ ನೇಮಕದ ನಂತರ, ಬಹು-ರಾಜ್ಯ ಸಹಕಾರಿ ಸೊಸೈಟಿಯು ಯಾವ ಎಲ್ಲ ಸ್ವತ್ತುಗಳಿಗೆ, ವಸ್ತುಗಳಿಗೆ ಮತ್ತು ಕ್ರಮಾರ್ಹ ಕ್ಲೇಮುಗಳಿಗೆ ಹಕ್ಕುಳ್ಳದ್ದಾಗಿದೆಯೋ ಅಥವಾ ಹಕ್ಕುಳ್ಳದಾಗಿದೆಯೆಂಬುದು ಕಂಡು ಬರುವುದೋ ಆ ಎಲ್ಲವುಗಳನ್ನು ತನ್ನ ವಶಕ್ಕೆ ಅಥವಾ ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳತಕ್ಕದ್ದು ಮತ್ತು ಅಂಥ ಸ್ವತ್ತಿನ ವಸ್ತುಗಳನ್ನು ಮತ್ತು ಕ್ಲೇಮುಗಳ ಅಥವಾ ಅವುಗಳಿಗೆ ಉಂಟಾಗುವ ನಷ್ಟ ಅಥವಾ ಅವು ಹಾಳಾಗುವುದನ್ನು ತಡೆಯಲು ಅವಶ್ಯವೆಂದು ಅಥವಾ ವಿಹಿತವೆಂದು ಅವನು ಭಾವಿಸುವಂಥ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಕೇಂದ್ರ ರಿಜಿಸ್ಟ್ರಾರನ ಪೂರ್ವಾನುಮೋದನೆಯನ್ನು ಪಡೆದು ಅವಶ್ಯವಾಗಬಹುದಾದಷ್ಟರ ಮಟ್ಟಿಗೆ ಬಹು-ರಾಜ್ಯ ಸಹಕಾರಿ ಸೊಸೈಟಿಯ ವ್ಯವಹಾರವನ್ನು ಅವನು ನಡೆಸಿಕೊಂಡು ಹೋಗಬಹುದು.

(3) 99ನೇ ಪ್ರಕರಣದ (1)ನೇ ಉಪಪ್ರಕರಣದ (ಎಫ್) ಖಂಡದ ಮೇರೆಗೆ ಅಪೀಲನ್ನು ಸಲ್ಲಿಸಿರುವಲ್ಲಿ, 86ನೇ ಪ್ರಕರಣದ ಮೇರೆಗೆ ಮಾಡಿದ ಬಹು-ರಾಜ್ಯ ಸಹಕಾರಿ ಸೊಸೈಟಿಯನ್ನು ಪರಿಸಮಾಪನಗೊಳಿಸುವ ಆದೇಶವನ್ನು ಮಾಡಿದ ತರುವಾಯ ಆ ಆದೇಶವನ್ನು ಅಪೀಲಿನಲ್ಲಿ ಸ್ಥಿರೀಕರಿಸುವವರೆಗೆ ಜಾರಿಗೊಳಿಸತಕ್ಕದ್ದಲ್ಲ:

ಪರಂತು, ಸಮಾಪಕನು (2)ನೇ ಉಪಪ್ರಕರಣದಲ್ಲಿ ನಮೂದಿಸಿದ ಸ್ವತ್ತಿನ, ವಸ್ತುಗಳ ಮೇಲೆ ಅಭಿರಕ್ಷೆ ಹೊಂದಿರುವುದು ಮತ್ತು ಕ್ರಮಾರ್ಹ ಕ್ಲೇಮುಗಳ ಮೇಲೆ ನಿಯಂತ್ರಣವನ್ನು ಹೊಂದಿರುವುದು ಮತ್ತು ಆ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಕ್ರಮಗಳನ್ನು ಕೈಗೊಳ್ಳುವ ಅಧಿಕಾರವನ್ನು ಹೊಂದಿರುವುದು ಮುಂದುವರಿಯತಕ್ಕದ್ದು.

(4) ಬಹು-ರಾಜ್ಯ ಸಹಕಾರಿ ಸೊಸೈಟಿಯನ್ನು ಪರಿಸಮಾಪನಗೊಳಿಸುವ ಆದೇಶವನ್ನು ಅಪೀಲಿನಲ್ಲಿ ರದ್ದುಗೊಳಿಸಿದರೆ, ಸೊಸೈಟಿಯ ಸ್ವತ್ತುಗಳು, ವಸ್ತುಗಳು ಮತ್ತು ಕ್ರಮಾರ್ಹ ಕ್ಲೇಮುಗಳು ಸೊಸೈಟಿಯಲ್ಲಿ ಪುನರ್ ನಿಹಿತವಾಗತಕ್ಕದ್ದು.

**90. ಸಮಾಪಕನ ಅಧಿಕಾರಗಳು.-** (1) ಈ ಬಗ್ಗೆ ರಚಿಸಿದ ನಿಯಮಗಳಿಗೆ ಒಳಪಟ್ಟು, ಯಾವ ಬಹು-ರಾಜ್ಯ ಸಹಕಾರಿ ಸೊಸೈಟಿಯಲ್ಲಿ ಪರಿಸಮಾಪನಗೊಳಿಸಲು ಆದೇಶವನ್ನು ಮಾಡಲಾಗಿದೆಯೋ ಆ ಸೊಸೈಟಿಯ ಸಂಪೂರ್ಣ ಆಸ್ತಿಗಳು, ಆ ಆದೇಶವು ಜಾರಿಗೆ ಬರುವ ದಿನಾಂಕದಿಂದ, 89ನೇ ಪ್ರಕರಣದ ಮೇರೆಗೆ ನೇಮಕಗೊಂಡ ಸಮಾಪಕನಲ್ಲಿ ನಿಹಿತವಾಗತಕ್ಕದ್ದು ಮತ್ತು ಸಮಾಪಕನು ಅಂಥ ಆಸ್ತಿಗಳನ್ನು ಮಾರುವ ಮೂಲಕ ಅಥವಾ ಇತರ ರೀತಿಯಲ್ಲಿ ಹಣ ಪಡೆದುಕೊಳ್ಳಲು ಅಧಿಕಾರವನ್ನು ಹೊಂದಿರತಕ್ಕದ್ದು.

(2) ಅಂಥ ಸಮಾಪಕನು, ಕೇಂದ್ರ ರಿಜಿಸ್ಟ್ರಾರನ ನಿಯಂತ್ರಣಕ್ಕೆ ಒಳಪಟ್ಟು,-

(ಎ) ಬಹು-ರಾಜ್ಯ ಸಹಕಾರಿ ಸೊಸೈಟಿಯ ಪರವಾಗಿ ಅವನ ಹುದ್ದೆಯ ಹೆಸರಿನಲ್ಲಿ ದಾವೆಗಳನ್ನು ಮತ್ತು ಇತರ ಕಾನೂನು ವ್ಯವಹರಣೆಗಳನ್ನು ಹೂಡುವುದಕ್ಕೆ ಮತ್ತು ಪ್ರತಿವಾದಿಸುವುದಕ್ಕೆ;

(ಬಿ) ಸದಸ್ಯರು ಅಥವಾ ಹಿಂದಿನ ಸದಸ್ಯರು ಅಥವಾ ನಾಮ ನಿರ್ದೇಶಿತರು, ಉತ್ತರಾಧಿಕಾರಿಗಳು ಅಥವಾ ಕಾನೂನು ಸಮ್ಮತ ಪ್ರತಿನಿಧಿಗಳು ಅಥವಾ ಯಾರೇ ಇತರ ಅಧಿಕಾರಿಗಳು ಅಥವಾ ಹಿಂದಿನ ಅಧಿಕಾರಿಗಳು ಅಥವಾ ಮೃತ ಸದಸ್ಯರ ಸಂಪದದಿಂದ ಬಹು-ರಾಜ್ಯ ಸಹಕಾರಿ ಸೊಸೈಟಿಯ ಆಸ್ತಿಗಳಿಗೆ ನೀಡಬೇಕಾದ ಅಥವಾ ನೀಡಲು ಉಳಿದಿರುವ ವಂತಿಗೆಯನ್ನು (ಬಾಕಿ ಋಣಗಳು ಮತ್ತು ಸಮಾಪನದ ವೆಚ್ಚಗಳೂ ಸೇರಿದಂತೆ) ಕಾಲಕಾಲಕ್ಕೆ ನಿರ್ಧರಿಸುವುದಕ್ಕೆ;

(ಸಿ) ಬಹು-ರಾಜ್ಯ ಸಹಕಾರಿ ಸೊಸೈಟಿಯ ವಿರುದ್ಧದ ಎಲ್ಲ ಕ್ಲೇಮುಗಳನ್ನು ತನಿಖೆ ಮಾಡುವುದು ಮತ್ತು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಕ್ಲೇಮುದಾರರ ನಡುವೆ ಉಂಟಾಗುವ ಆದ್ಯತೆಯ ಪ್ರಶ್ನೆಗಳನ್ನು ತೀರ್ಮಾನಿಸುವುದಕ್ಕೆ;

(ಡಿ) ಬಹು-ರಾಜ್ಯ ಸಹಕಾರಿ ಸೊಸೈಟಿಯ ವಿರುದ್ಧದ ಕ್ಲೇಮುಗಳನ್ನು, ಆ ಕ್ಲೇಮುಗಳಿಗೆ ಸಂಬಂಧಿಸಿದಂತೆ ಆದ್ಯತೆಗಳು ಯಾವುವಾದರೂ ಇದ್ದರೆ ಆಯಾ ಆದ್ಯತಾನುಸಾರವಾಗಿ, ಪರಿಸಮಾಪನದ ದಿನಾಂಕದವರೆಗೆ, ಪೂರ್ಣವಾಗಿ ಅಥವಾ ಸಂದರ್ಭಾನುಸಾರ ಆ ಸೊಸೈಟಿಯ ಆಸ್ತಿಗಳು ಅವಕಾಶ ಮಾಡಿಕೊಡುವಷ್ಟರ ಮಟ್ಟಿಗೆ ಪ್ರಮಾಣಾನುಸಾರವಾಗಿ ಬಡ್ಡಿಯೂ ಮತ್ತು ಅವನು ನಿಗದಿಪಡಿಸಿದ ದರದಲ್ಲಿ ಅಥವಾ ಯಾವುದೇ ಸಂದರ್ಭದಲ್ಲಿ, ಕರಾರಿನಲ್ಲಿ ನಿಗದಿಪಡಿಸಿರುವಷ್ಟನ್ನು ಮೀರದಂತೆ, ಪರಿಸಮಾಪನದ ಆದೇಶದ ದಿನಾಂಕದಿಂದ ಬಡ್ಡಿ ಸಂದಾಯದ ಕ್ಲೇಮುಗಳ ಹಣವನ್ನು ಸಂದಾಯ ಮಾಡಿದ ತರುವಾಯ ಯಾವುದಾದರೂ ಹೆಚ್ಚುವರಿ ಹಣ ಉಳಿದಿದ್ದರೆ, ಆ ಹಣವೂ ಒಳಗೊಂಡಂತೆ, ಸಂದಾಯ ಮಾಡುವುದಕ್ಕೆ;

(ಇ) ಸಮಾಪನದ ವೆಚ್ಚಗಳನ್ನು ಯಾವ ವ್ಯಕ್ತಿಗಳು ಮತ್ತು ಎಷ್ಟು ಪ್ರಮಾಣದಲ್ಲಿ ಭರಿಸಬೇಕೆಂದು ನಿರ್ಧರಿಸುವುದಕ್ಕೆ;

(ಎಫ್) ಯಾರೇ ವ್ಯಕ್ತಿಯು ಸದಸ್ಯನೇ, ಹಿಂದಿನ ಸದಸ್ಯನೇ ಅಥವಾ ಮೃತ ಸದಸ್ಯನ ನಾಮ ನಿರ್ದೇಶಿತನೇ ಎಂಬುದನ್ನು ನಿರ್ಧರಿಸುವುದಕ್ಕೆ;

(ಜಿ) ಬಹು–ರಾಜ್ಯ ಸಹಕಾರಿ ಸೊಸೈಟಿಯ ವ್ಯವಹಾರಗಳನ್ನು ಪರಿಸಮಾಪನಗೊಳಿಸುವ ಸಂಬಂಧದಲ್ಲಿ ಆ ಸೊಸೈಟಿಯ ಆಸ್ತಿಗಳ ಸಂಗ್ರಹಣೆ ಮತ್ತು ಹಂಚಿಕೆಗೆ ಸಂಬಂಧಿಸಿದಂತೆ ಅವನಿಗೆ ಅವಶ್ಯವೆಂದು ಕಂಡು ಬರುವಂಥ, ನಿರ್ದೇಶನಗಳನ್ನು ನೀಡುವುದಕ್ಕೆ;

(ಹೆಚ್) ಬಹು–ರಾಜ್ಯ ಸಹಕಾರಿ ಸೊಸೈಟಿಯ ಪ್ರಯೋಜನಕಾರೀ ಪರಿಸಮಾಪನಕ್ಕೆ ಅವಶ್ಯಕವಾಗಿರಬಹುದಾದಷ್ಟರ ಮಟ್ಟಿಗೆ ಅದರ ವ್ಯವಹಾರವನ್ನು ನಡೆಸುವುದಕ್ಕೆ;

(ಐ) ಯಾವ ಕ್ಲೇಮು ಬಹು–ರಾಜ್ಯ ಸಹಕಾರಿ ಸೊಸೈಟಿಯನ್ನು ಹೊಣೆಯನ್ನಾಗಿ ಮಾಡಬಹುದಾಗಿದೆಯೋ ಈಗಿನ ಅಥವಾ ಮುಂದಿನ ಆ ಯಾವುದೇ ಕ್ಲೇಮನ್ನು ಹೊಂದಿರುವ ಅಥವಾ ಆ ಯಾವುದೇ ಕ್ಲೇಮನ್ನು ಹೊಂದಿರುವುದಾಗಿ ಹೇಳುವ ಸಾಲಕೊಟ್ಟವರೊಂದಿಗೆ ಅಥವಾ ಸಾಲ ಕೊಟ್ಟವರೆಂದು ಹೇಳಿಕೊಳ್ಳುವ ವ್ಯಕ್ತಿಗಳೊಂದಿಗೆ ಯಾವುದೇ ರಾಜಿಯನ್ನು ಅಥವಾ ಏರ್ಪಾಟನ್ನು ಮಾಡಿಕೊಳ್ಳುವುದಕ್ಕೆ;

(ಜೆ) ಯಾರೇ ವ್ಯಕ್ತಿಯ ಮತ್ತು ಬಹು–ರಾಜ್ಯ ಸಹಕಾರಿ ಸೊಸೈಟಿಯ ನಡುವೆ ಯಾವುದೇ ವಿವಾದವಿದ್ದಲ್ಲಿ, ಅವರ ನಡುವೆ ಯಾವುದೇ ರಾಜಿಯನ್ನು ಅಥವಾ ಏರ್ಪಾಟನ್ನು ಮಾಡುವುದು ಮತ್ತು ತೀರ್ಮಾನಕ್ಕಾಗಿ ಯಾವುದೇ ಅಂಥ ವಿವಾದವನ್ನು ಉಲ್ಲೇಖಿಸುವುದಕ್ಕೆ;

(ಕೆ) ಬಹು–ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯರೊಂದಿಗೆ ಸಮಾಲೋಚಿಸಿದ ನಂತರ, ನಿಯಮಿಸಬಹುದಾದಂಥ ರೀತಿಯಲ್ಲಿ, ಸೊಸೈಟಿಯ ವಿರುದ್ಧದ ಕ್ಲೇಮುಗಳನ್ನು ಸಂದಾಯ ಮಾಡಿದ ನಂತರ ಉಳಿದ ಹೆಚ್ಚುವರಿ, ಯಾವುದಾದರೂ ಇದ್ದರೆ, ಅದನ್ನು ವಿಲೆ ಮಾಡುವುದಕ್ಕೆ;

(ಎಲ್) ಎಲ್ಲ ಕಂತು ಹಣದ ತಗಾದೆಗಳನ್ನು ಅಥವಾ ಕಂತು ಹಣದ ತಗಾದೆಗೆ ಇರುವ ಹೊಣೆಗಾರಿಕೆಗಳನ್ನು ಮತ್ತು ಋಣಗಳನ್ನು ಮತ್ತು ಋಣವಾಗಿ ಪರಿವರ್ತಿತವಾಗುವ ಹೊಣೆಗಾರಿಕೆಗಳನ್ನು ಬಹು–ರಾಜ್ಯ ಸಹಕಾರಿ ಸೊಸೈಟಿಯ ಮತ್ತು ವಂತಿಗೆದಾರನ ಅಥವಾ ಇತರ ಋಣಿಯ ಅಥವಾ ಬಹು–ರಾಜ್ಯ ಸಹಕಾರಿ ಸೊಸೈಟಿಯ ಹೊಣೆಗಾರನಾಗಿದ್ದಾನೆಂದು ಶಂಕಿಸಲಾದ ವ್ಯಕ್ತಿಯ ನಡುವಣ ವರ್ತಮಾನ ಅಥವಾ ಭವಿಷ್ಯದ, ನಿಶ್ಚಿತ ಅಥವಾ ಆಕಸ್ಮಿಕ, ಅಸ್ತಿತ್ವದಲ್ಲಿರುವ ಅಥವಾ ಅಸ್ತಿತ್ವದಲ್ಲಿದೆಯೆಂದು ಹೇಳಲಾದ ಎಲ್ಲಾ ಕ್ಲೇಮುಗಳನ್ನು, ಮತ್ತು ಯಾವುದೇ ರೀತಿಯಲ್ಲಿ ಆಸ್ತಿಗಳಿಗೆ ಸಂಬಂಧಿಸಿದ ಅಥವಾ ಪರಿಣಾಮ ಉಂಟು ಮಾಡುವ ಅಥವಾ ಒಪ್ಪಿಕೊಳ್ಳಬಹುದಾದಂಥ ಷರತ್ತುಗಳ ಮೇರೆಗೆ ಸೊಸೈಟಿಯ ಪರಿಸಮಾಪನಕ್ಕೆ, ಸಂಬಂಧಿಸಿದ ಎಲ್ಲ ಪ್ರಶ್ನೆಗಳನ್ನು ರಾಜಿ ಮಾಡುವುದಕ್ಕೆ ಮತ್ತು ಯಾವುದೇ ಅಂಥ ಕಂತು ಹಣದ ತಗಾದೆಗೆ ಹೊಣೆಗಾರಿಕೆಗೆ, ಋಣಕ್ಕೆ ಅಥವಾ ಕ್ಲೇಮಿಗೆ ಸಂಬಂಧಿಸಿದಂತೆ ಸಂಪೂರ್ಣವಾಗಿ ತೀರಿಕೆಯಾಗುವುದಕ್ಕೆ ಯಾವುದೇ ಭದ್ರತೆಯನ್ನು ತೆಗೆದುಕೊಳ್ಳುವುದಕ್ಕೆ

– ಅಧಿಕಾರ ಹೊಂದಿರತಕ್ಕದ್ದು.

(3) ಬಹು–ರಾಜ್ಯ ಸಹಕಾರಿ ಸೊಸೈಟಿಯ ವ್ಯವಹಾರಗಳನ್ನು ಪರಿಸಮಾಪನಗೊಳಿಸಿದಾಗ, ಸಮಾಪಕನು, ಕೇಂದ್ರ ರಿಜಿಸ್ಟ್ರಾರನಿಗೆ ಆ ಬಗ್ಗೆ ವರದಿ ಮಾಡತಕ್ಕದ್ದು ಮತ್ತು ಕೇಂದ್ರ ರಿಜಿಸ್ಟ್ರಾರನು ನಿರ್ದೇಶಿಸಬಹುದಾದಂಥ ಸ್ಥಳದಲ್ಲಿ ಸೊಸೈಟಿಯು ದಾಖಲೆಗಳನ್ನು ಇಡತಕ್ಕದ್ದು.

**91. ಹೆಚ್ಚುವರಿ ಆಸ್ತಿಗಳ ವಿಲೆ.–** ಯಾವ ಬಹು–ರಾಜ್ಯ ಸಹಕಾರಿ ಸೊಸೈಟಿಯನ್ನು ಪರಿಸಮಾಪನಗೊಳಿಸಲಾಗಿದೆಯೋ ಆ ಬಹು–ರಾಜ್ಯ ಸಹಕಾರಿ ಸೊಸೈಟಿಯ ಸಮಾಪಕನ ವರದಿಯಲ್ಲಿ ತೋರಿಸಿದ ಆ ಸೊಸೈಟಿಯ, ಹೆಚ್ಚುವರಿ ಆಸ್ತಿಗಳನ್ನು,–

(ಎ) ಬಹು–ರಾಜ್ಯ ಸಹಕಾರಿ ಸೊಸೈಟಿಯ ಉಪವಿಧಿಗಳಲ್ಲಿ ಹೆಚ್ಚುವರಿ ಆಸ್ತಿಗಳನ್ನು ಯಾವ ಉದ್ದೇಶಕ್ಕಾಗಿ ಬಳಸತಕ್ಕದ್ದೆಂದು ನಿರ್ದಿಷ್ಟಪಡಿಸಿದರೆ, ಸದರಿ ಉದ್ದೇಶಕ್ಕಾಗಿ ಕೇಂದ್ರ ರಿಜಿಸ್ಟ್ರಾರನು ಅವುಗಳನ್ನು ಬಳಸಬಹುದು, ಮತ್ತು

(ಬಿ) ಮೇಲೆ ಹೇಳಿದ ಉಪ–ವಿಧಿಗಳು ಉದ್ದೇಶವನ್ನು ನಿರ್ದಿಷ್ಟಪಡಿಸದಿದ್ದರೆ, ಕೇಂದ್ರ ಸರ್ಕಾರದ ಪೂರ್ವ ಮಂಜೂರಾತಿಯನ್ನು ಪಡೆದು, ನಿಯಮಿಸಬಹುದಾದಂಥ ರೀತಿಯಲ್ಲಿ ಅಂಥ ಬಹು–ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯರೊಳಗೆ ಕೇಂದ್ರ ರಿಜಿಸ್ಟ್ರಾರನು ಆ ಆಸ್ತಿಗಳನ್ನು ವಿಭಾಗಿಸಬಹುದು.

**92. ಸಮಾಪಕನು ನಿರ್ಧರಿಸಿದ ವಂತಿಗೆಗಳ ಆದ್ಯತೆ.–** ದಿವಾಳಿತನಕ್ಕೆ ಸಂಬಂಧಿಸಿದಂತೆ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಸಮಾಪಕನು ನಿರ್ಧರಿಸಿದ ವಂತಿಗೆಯು, ದಿವಾಳಿತನದ ವ್ಯವಹರಣೆಗಳಲ್ಲಿನ ಆದ್ಯತಾ ಕ್ರಮದ ಅನುಸಾರ ಕೇಂದ್ರ ಸರ್ಕಾರಕ್ಕೆ ಅಥವಾ ರಾಜ್ಯ ಸರ್ಕಾರಕ್ಕೆ ಅಥವಾ ಸ್ಥಳೀಯ ಪ್ರಾಧಿಕಾರಕ್ಕೆ ಬರಬೇಕಾದ ಋಣಗಳ ನಂತರದ ಸ್ಥಾನದಲ್ಲಿರತಕ್ಕದ್ದು.

**93. ಬಹು–ರಾಜ್ಯ ಸಹಕಾರ ಸೊಸೈಟಿಯ ನೋಂದಣಿಯನ್ನು ರದ್ದುಗೊಳಿಸುವುದಕ್ಕೆ ಕೇಂದ್ರ ರಿಜಿಸ್ಟ್ರಾರನ ಅಧಿಕಾರ.–** (1) ಕೇಂದ್ರ ರಿಜಿಸ್ಟ್ರಾರನು, 90ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಅವನಿಗೆ ಸಲ್ಲಿಸಿದ ಸಮಾಪಕನ ವರದಿಯನ್ನು ಪರಿಶೀಲಿಸಿದ ನಂತರ, ಬಹು–ರಾಜ್ಯ ಸಹಕಾರಿ ಸೊಸೈಟಿಯ ನೋಂದಣಿಯನ್ನು ರದ್ದುಗೊಳಿಸುವಂತೆ ಆದೇಶಿಸಬಹುದು ಮತ್ತು ಅಂಥ ರದ್ದತಿಯ ನಂತರ ಆ ಸೊಸೈಟಿಯು ವಿಸರ್ಜನೆಯಾಗತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಆದೇಶವನ್ನು, ಸಂದರ್ಭಾನುಸಾರ ಬಹು–ರಾಜ್ಯ ಸಹಕಾರಿ ಸೊಸೈಟಿಯ ಅಧ್ಯಕ್ಷನಿಗೆ ಅಥವಾ ಚೇರ್ ಪರ್ಸನ್‌ಗೆ ಮತ್ತು ಸೊಸೈಟಿಯು ಸದಸ್ಯನಾಗಿದ್ದ ಹಣಕಾಸು ಸಂಸ್ಥೆಗಳು ಯಾವುವಾದರೂ ಇದ್ದರೆ, ಅವುಗಳಿಗೆ ನೋಂದಾಯಿತ ಅಂಚೆಯ ಮೂಲಕ ತಿಳಿಸತಕ್ಕದ್ದು.

## ಅಧ್ಯಾಯ – XI

## ಡಿಕ್ರಿಗಳನ್ನು, ಆದೇಶಗಳನ್ನು ಮತ್ತು ತೀರ್ಮಾನಗಳನ್ನು ಜಾರಿಗೊಳಿಸುವುದು

**94. ತೀರ್ಮಾನಗಳು, ಇತ್ಯಾದಿಗಳನ್ನು ಜಾರಿಗೊಳಿಸುವುದು.–** 39ನೇ ಪ್ರಕರಣದ ಅಥವಾ 40ನೇ ಪ್ರಕರಣದ ಅಥವಾ 83ನೇ ಪ್ರಕರಣದ ಅಥವಾ 99ನೇ ಪ್ರಕರಣದ ಅಥವಾ 101ನೇ ಪ್ರಕರಣದ ಮೇರೆಗೆ ಮಾಡಲಾದ ಪ್ರತಿಯೊಂದು ತೀರ್ಮಾನವನ್ನು ಅಥವಾ ಆದೇಶವನ್ನು ಜಾರಿಗೊಳಿಸಿರದಿದ್ದರೆ,–

(ಎ) ಕೇಂದ್ರ ರಿಜಿಸ್ಟ್ರಾರನು ಅಥವಾ ಈ ಬಗ್ಗೆ ಲಿಖಿತದಲ್ಲಿ ಅವನು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು ಸಹಿ ಮಾಡಿದ ಪ್ರಮಾಣಪತ್ರದ ಮೇರೆಗೆ ಅದನ್ನು ಸಿವಿಲ್ ನ್ಯಾಯಾಲಯದ ಡಿಕ್ರಿ ಎಂಬುದಾಗಿ ಭಾವಿಸತಕ್ಕದ್ದು ಮತ್ತು ಅಂಥ ನ್ಯಾಯಾಲಯದ ಡಿಕ್ರಿಯಾಗಿದ್ದರೆ ಹೇಗೋ ಹಾಗೆ ಅದೇ ರೀತಿಯಲ್ಲಿ ಜಾರಿಗೊಳಿಸತಕ್ಕದ್ದು ಮತ್ತು ಅಂಥ ಡಿಕ್ರಿಯನ್ನು ಕೇಂದ್ರ ರಿಜಿಸ್ಟ್ರಾರನು ಅಥವಾ ಈ ಬಗ್ಗೆ ಲಿಖಿತದಲ್ಲಿ ಅವನು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು ಯಾರ ವಿರುದ್ಧ ತೀರ್ಮಾನವನ್ನು ಅಥವಾ ಆದೇಶವನ್ನು

ಮಾಡಲಾಗಿದೆಯೋ ಆ ವ್ಯಕ್ತಿಯ ಅಥವಾ ಬಹು-ರಾಜ್ಯ ಸಹಕಾರಿ ಸೊಸೈಟಿಯ ಯಾವುದೇ ಸ್ವತ್ತನ್ನು ಜಫ್ತಿ ಮಾಡುವ ಮತ್ತು ಮಾರಾಟ ಮಾಡುವ ಅಥವಾ ಜಫ್ತಿ ಮಾಡದೆ ಮಾರಾಟ ಮಾಡುವ ಮೂಲಕ ಜಾರಿಗೊಳಿಸತಕ್ಕದ್ದು;

(ಬಿ) ಹಣದ ವಸೂಲಾತಿಗೆ ತೀರ್ಮಾನವು ಅಥವಾ ಆದೇಶವು ಅವಕಾಶ ಕಲ್ಪಿಸಿರುವಲ್ಲಿ ಭೂ ಕಂದಾಯದ ಬಾಕಿಗಳ ವಸೂಲಿಗಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿಗೆ ಅನುಸಾರವಾಗಿ ಅದನ್ನು ಜಾರಿಗೊಳಿಸತಕ್ಕದ್ದು:

ಪರಂತು, ಯಾವುದೇ ಮೊಬಲಗಿನ ವಸೂಲಾತಿಗೆ ಯಾವುದೇ ಅರ್ಜಿಯನ್ನು ಈ ಕೆಳಕಂಡ ರೀತಿಯಲ್ಲಿ,-

(i) ಕಲೆಕ್ಟರನಿಗೆ ಸಲ್ಲಿಸತಕ್ಕದ್ದು ಮತ್ತು ಕೇಂದ್ರ ರಿಜಿಸ್ಟ್ರಾರನು ಅಥವಾ ಈ ಬಗ್ಗೆ ಲಿಖಿತದಲ್ಲಿ ಅವನು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು ಸಹಿ ಮಾಡಿದ ಪ್ರಮಾಣಪತ್ರವನ್ನು ಅದರ ಜೊತೆಗಿಡತಕ್ಕದ್ದು.

(ii) ತೀರ್ಮಾನದಲ್ಲಿ ಅಥವಾ ಆದೇಶದಲ್ಲಿ ನಿಗದಿಪಡಿಸಿದ ದಿನಾಂಕದಿಂದ ಮತ್ತು ಅಂಥ ದಿನಾಂಕವನ್ನು ನಿಗದಿಪಡಿಸದಿದ್ದರೆ, ಸಂದರ್ಭಾನುಸಾರ, ತೀರ್ಮಾನದ ಅಥವಾ ಆದೇಶದ ದಿನಾಂಕದಿಂದ ಹನ್ನೆರಡು ವರ್ಷಗಳ ಒಳಗೆ ಸಲ್ಲಿಸತಕ್ಕದ್ದು; ಅಥವಾ

(ಸಿ) ಕೇಂದ್ರ ರಿಜಿಸ್ಟ್ರಾರನು ಅಥವಾ ಈ ಬಗ್ಗೆ ಲಿಖಿತದಲ್ಲಿ ಅವನು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು, ಯಾರ ವಿರುದ್ಧ ತೀರ್ಮಾನವನ್ನು ಅಥವಾ ಆದೇಶವನ್ನು ಮಾಡಲಾಗಿದೆಯೋ ಆ ವ್ಯಕ್ತಿಯ ಅಥವಾ ಬಹು-ರಾಜ್ಯ ಸಹಕಾರಿ ಸೊಸೈಟಿಯ ಯಾವುದೇ ಸ್ವತ್ತನ್ನು ಜಫ್ತಿ ಮಾಡುವ ಮತ್ತು ಮಾರಾಟ ಮಾಡುವ ಅಥವಾ ಜಫ್ತಿ ಮಾಡದೇ ಮಾರಾಟ ಮಾಡುವ ಮೂಲಕ ಜಾರಿಗೊಳಿಸತಕ್ಕದ್ದು.

**95. ಸಮಾಪಕನ ಆದೇಶಗಳನ್ನು ಜಾರಿಗೊಳಿಸುವುದು.-** 90ನೇ ಪ್ರಕರಣದ ಮೇರೆಗೆ ಸಮಾಪಕನು ಮಾಡಿದ ಪ್ರತಿಯೊಂದು ಆದೇಶವನ್ನು, ಭೂ ಕಂದಾಯದ ಬಾಕಿಗಳ ವಸೂಲಾತಿಗೆ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿಗೆ ಅನುಸಾರವಾಗಿ ಜಾರಿಗೊಳಿಸತಕ್ಕದ್ದು.

**96. ಐತೀರ್ಪಿಗೆ ಮುಂಚೆ ಜಫ್ತಿ.-** (1) 84ನೇ ಪ್ರಕರಣದ ಮೇರೆಗೆ ಮಧ್ಯಸ್ಥಿಕೆದಾರನಿಗೆ ಮಾಡಿದ ಯಾವುದೇ ಉಲ್ಲೇಖಕ್ಕೆ ಪಕ್ಷಕಾರ ಆಗಿರುವವನು ಅದರ ಬಗ್ಗೆ ಮಾಡಬಹುದಾದ ಯಾವುದೇ ತೀರ್ಮಾನದ ಜಾರಿಯನ್ನು ವಿಫಲಗೊಳಿಸುವ ಅಥವಾ ವಿಳಂಬ ಮಾಡುವ ಉದ್ದೇಶದಿಂದ,-

(ಎ) ಸ್ವತ್ತನ್ನು ಪೂರ್ಣವಾಗಿ ಅಥವಾ ಅದರ ಯಾವುದೇ ಭಾಗವನ್ನು ವಿಲೆ ಮಾಡುವ; ಅಥವಾ

(ಬಿ) ಅದರ ಈಗಿರುವ ಎಲ್ಲೆಗಳಿಂದ ಸ್ವತ್ತನ್ನು ಪೂರ್ಣವಾಗಿ ಅಥವಾ ಅದರ ಯಾವುದೇ ಭಾಗವನ್ನು ತೆಗೆದುಹಾಕುವ

- ಸಂಭವವಿರುವುದೆಂದು ಮಧ್ಯಸ್ಥಿಕೆದಾರನಿಗೆ ಮನದಟ್ಟಾದರೆ, ಸಾಕಷ್ಟು ಭದ್ರತೆಯನ್ನು ಒದಿಗಿಸಿದ ಹೊರತು ಅವನು ಅವಶ್ಯವೆಂದು ಭಾವಿಸಬಹುದಾದಂಥ ಸದರಿ ಸ್ವತ್ತನ್ನು ಅಥವಾ ಅದರ ಭಾಗವನ್ನು

ಷರತ್ತುಪೂರ್ವಕವಾಗಿ ಜಫ್ತಿ ಮಾಡಲು ಮಧ್ಯಸ್ಥಿಕೆದಾರನು ನಿರ್ದೇಶನ ನೀಡಬಹುದು. ಮಧ್ಯಸ್ಥಿಕೆದಾರನು, ಸಾಕಷ್ಟು ಭದ್ರತೆಯನ್ನು ಒದಗಿಸಿದ ಹೊರತು, ಸದರಿ ಸ್ವತ್ತನ್ನು ಅಥವಾ ತಾನು ಅವಶ್ಯವೆನಿಸಬಹುದಾದಂಥ ಅದರ ಭಾಗವನ್ನು ಷರತ್ತುಪೂರ್ವಕ ಜಫ್ತಿ ಮಾಡಲು ನಿರ್ದೇಶಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಜಫ್ತಿಯನ್ನು, ಅಧಿಕಾರ ವ್ಯಾಪ್ತಿ ಹೊಂದಿರುವ ಸಿವಿಲ್ ನ್ಯಾಯಾಲಯವು ಜಫ್ತಿ ಆದೇಶವನ್ನು ತಾನೇ ಮಾಡಿದ್ದರೆ ಹೇಗೋ ಹಾಗೆ ಅದೇ ರೀತಿಯಲ್ಲಿ ಜಫ್ತಿಯನ್ನು ಜಾರಿಗೊಳಿಸತಕ್ಕದ್ದು ಮತ್ತು ಅದು ಅಂಥ ಆದೇಶದ ಪರಿಣಾಮವನ್ನೇ ಹೊಂದಿರತಕ್ಕದ್ದು.

**97. ಕೇಂದ್ರ ರಿಜಿಸ್ಟ್ರಾರನು ಅಥವಾ ಮಧ್ಯಸ್ಥಿಕೆದಾರನು ಅಥವಾ ಅಧಿಕೃತಗೊಂಡ ವ್ಯಕ್ತಿಯು ಕೆಲವು ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯವಾಗಿರತಕ್ಕದ್ದು.–** ಕೇಂದ್ರ ರಿಜಿಸ್ಟ್ರಾರನು ಅಥವಾ ಮಧ್ಯಸ್ಥಿಕೆದಾರನು ಅಥವಾ ಈ ಬಗ್ಗೆ ಲಿಖಿತದಲ್ಲಿ ಅವನು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು, ಯಾವುದೇ ಸ್ವತ್ತನ್ನು ಜಫ್ತಿ ಮಾಡುವ ಮತ್ತು ಮಾರಾಟ ಮಾಡುವ ಅಥವಾ ಜಫ್ತಿ ಮಾಡದೇ ಮಾರಾಟ ಮಾಡುವ ಮೂಲಕ ಯಾವುದೇ ಮೊಬಲಗಿನ ವಸೂಲಾತಿಗಾಗಿ ಈ ಅಧಿನಿಯಮದ ಮೇರೆಗಿನ ಯಾವುವೇ ಅಧಿಕಾರಗಳನ್ನು ಚಲಾಯಿಸುವಾಗ ಅಥವಾ ಅಂಥ ವಸೂಲಿಗೆ ಅಥವಾ ಅಂಥ ವಸೂಲಿಗೆ ನೆರವು ನೀಡುವ ಕ್ರಮ ತೆಗೆದುಕೊಳ್ಳುವುದಕ್ಕಾಗಿ ಅವನಿಗೆ ಸಲ್ಲಿಸಿದ ಯಾವುದೇ ಅರ್ಜಿಯ ಮೇಲಿನ ಯಾವುವೇ ಆದೇಶಗಳನ್ನು ಹೊರಡಿಸುವಾಗ, ಕಾಲ ಪರಿಮಿತಿ ಅಧಿನಿಯಮ, 1963 (1963ರ 36)ರ ಅನುಸೂಚಿಯ 136ನೇ ಅನುಚ್ಛೇದದ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

**98. ಸರ್ಕಾರಕ್ಕೆ ಬರಬೇಕಾದ ಮೊಬಲಗಿನ ವಸೂಲಿ.–** (1) ಈ ಅಧಿನಿಯಮದ ಯಾವುದೇ ಉಪಬಂಧದ ಮೇರೆಗೆ ಸಂದರ್ಭಾನುಸಾರ ಕೇಂದ್ರ ಸರ್ಕಾರಕ್ಕೆ ಅಥವಾ ರಾಜ್ಯ ಸರ್ಕಾರಕ್ಕೆ ಕೊಡಬೇಕಾದ ಯಾವುದೇ ವೆಚ್ಚವೂ ಸೇರಿದಂತೆ, ಕೇಂದ್ರ ಸರ್ಕಾರಕ್ಕೆ ಅಥವಾ ರಾಜ್ಯ ಸರ್ಕಾರಕ್ಕೆ ಬಹು–ರಾಜ್ಯ ಸಹಕಾರಿ ಸೊಸೈಟಿಯ ಅಥವಾ ಬಹು–ರಾಜ್ಯ ಸಹಕಾರಿ ಸೊಸೈಟಿಯ ಅಧಿಕಾರಿಯಿಂದ ಅಥವಾ ಸದಸ್ಯನಿಂದ ಅಥವಾ ಹಿಂದಿನ ಸದಸ್ಯನಿಂದ ಬರಬೇಕಾದ ಎಲ್ಲ ಮೊಬಲಗನ್ನು, ಈ ಬಗ್ಗೆ ಕೇಂದ್ರ ರಿಜಿಸ್ಟ್ರಾರನು ನೀಡಿದ ಪ್ರಮಾಣ ಪತ್ರದ ಮೇಲೆ, ಸಂದರ್ಭಾನುಸಾರ, ಅಂಥ ಸೊಸೈಟಿಯ ಅಥವಾ ಅಧಿಕಾರಿಯ ಅಥವಾ ಸದಸ್ಯನ ಆಸ್ತಿಗಳ ಮೇಲೆ ಮೊದಲ ಹೊಣೆಯಾಗಿ ಭೂ ಕಂದಾಯದ ಬಾಕಿಯಂತೆ ಅದೇ ರೀತಿಯಲ್ಲಿ ವಸೂಲಿ ಮಾಡಬಹುದು.

(2) ಕೇಂದ್ರ ಸರ್ಕಾರಕ್ಕೆ ಅಥವಾ ರಾಜ್ಯ ಸರ್ಕಾರಕ್ಕೆ ಬಹು–ರಾಜ್ಯ ಸಹಕಾರಿ ಸೊಸೈಟಿಯಿಂದ ಬರಬೇಕಾದ ಮತ್ತು (1)ನೇ ಉಪ–ಪ್ರಕರಣದ ಮೇರೆಗೆ ವಸೂಲಿ ಮಾಡಬಹುದಾದ ಮೊಬಲಗನ್ನು ಮೊದಲನೆಯದಾಗಿ ಸೊಸೈಟಿಯ ಸ್ವತ್ತಿನಿಂದ ಮತ್ತು ಎರಡನೆಯದಾಗಿ ಸದಸ್ಯರಿಂದ, ಹಿಂದಿನ ಸದಸ್ಯರಿಂದ ಅಥವಾ ಮೃತ ಸದಸ್ಯರ ಸಂಪದದಿಂದ ಅವರವರ ಹೊಣೆಗಾರಿಕೆಯ ಪರಿಮಿತಿಗೆ ಒಳಪಟ್ಟು, ವಸೂಲಿ ಮಾಡಬಹುದು:

ಪರಂತು, ಹಿಂದಿನ ಸದಸ್ಯರ ಹೊಣೆಗಾರಿಕೆಯು ಮತ್ತು ಮೃತ ಸದಸ್ಯರ ಸಂಪದವು ಎಲ್ಲ ಸಂದರ್ಭಗಳಲ್ಲಿ 37ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟಿರತಕ್ಕದ್ದು.

## ಅಧ್ಯಾಯ – XII

## ಅಪೀಲುಗಳು ಮತ್ತು ಪುನರವಲೋಕನ

**99. ಅಪೀಲುಗಳು.**– (1) 100ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು,–

(ಎ) ಬಹು–ರಾಜ್ಯ ಸಹಕಾರಿ ಸೊಸೈಟಿಯನ್ನು ನೋಂದಾಯಿಸಲು ನಿರಾಕರಿಸಿ, 7ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಕೇಂದ್ರ ರಿಜಿಸ್ಟ್ರಾರನು ಮಾಡಿದ ಆದೇಶ;

(ಬಿ) ಬಹು–ರಾಜ್ಯ ಸಹಕಾರಿ ಸೊಸೈಟಿಯ ಉಪವಿಧಿಗಳ ತಿದ್ದುಪಡಿಯನ್ನು ನೋಂದಾಯಿಸಲು ನಿರಾಕರಿಸಿ, 11ನೇ ಪ್ರಕರಣದ (9)ನೇ ಉಪಪ್ರಕರಣದ ಮೇರೆಗೆ ಕೇಂದ್ರ ರಿಜಿಸ್ಟ್ರಾರನು ಮಾಡಿದ ಆದೇಶ;

(ಸಿ) ಸೊಸೈಟಿಯ ಉಪವಿಧಿಗಳ ಮೇರೆಗೆ ಸದಸ್ಯತ್ವಕ್ಕಾಗಿ ಅನ್ಯಥಾ ಸೂಕ್ತವಾಗಿ ಅರ್ಹರಾಗಿರುವ ಯಾರೇ ವ್ಯಕ್ತಿಯನ್ನು ಸೊಸೈಟಿಯ ಸದಸ್ಯನೆಂದು ಸೇರಿಸಿಕೊಳ್ಳುವುದಕ್ಕೆ 25ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ನಿರಾಕರಿಸುವ ಅಥವಾ ನಿರಾಕರಿಸಲಾಗಿದೆಯೆಂದು ಭಾವಿಸಲಾದ ಬಹು–ರಾಜ್ಯ ಸಹಕಾರಿ ಸೊಸೈಟಿಯ ತೀರ್ಮಾನ;

(ಡಿ) 78ನೇ ಪ್ರಕರಣದ ಮೇರೆಗೆ ನಡೆಸಿದ ವಿಚಾರಣೆಯ ಅಥವಾ 80ನೇ ಪ್ರಕರಣದ ಮೇರೆಗೆ ಮಾಡಿದ ತಪಾಸಣೆಯ ವೆಚ್ಚಗಳನ್ನು ಹಂಚಿ 81ನೇ ಪ್ರಕರಣದ ಮೇರೆಗೆ ಕೇಂದ್ರ ರಿಜಿಸ್ಟ್ರಾರನು ಮಾಡಿದ ಆದೇಶ;

(ಇ) 83ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಕೇಂದ್ರ ರಿಜಿಸ್ಟ್ರಾರನು ಮಾಡಿದ ಆದೇಶ;

(ಎಫ್) ಬಹು–ರಾಜ್ಯ ಸಹಕಾರಿ ಸೊಸೈಟಿಯನ್ನು ಪರಿಸಮಾಪನಗೊಳಿಸಲು ನಿರ್ದೇಶಿಸಿ, 86ನೇ ಪ್ರಕರಣದ ಮೇರೆಗೆ ಕೇಂದ್ರ ರಿಜಿಸ್ಟ್ರಾರನು ಮಾಡಿದ ಆದೇಶ;

(ಜಿ) 90ನೇ ಪ್ರಕರಣದ ಮೇರೆಗೆ ಬಹು–ರಾಜ್ಯ ಸಹಕಾರಿ ಸೊಸೈಟಿಯ ಸಮಾಪಕನು ಮಾಡಿದ ಆದೇಶ

– ಇವುಗಳ ವಿರುದ್ಧ ಈ ಪ್ರಕರಣದ ಮೇರೆಗೆ ಅಪೀಲಿಗೆ ಅವಕಾಶವಿರತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ತೀರ್ಮಾನದ ಅಥವಾ ಆದೇಶದ ವಿರುದ್ಧದ ಅಪೀಲನ್ನು, ನಿಯಮಿಸಲಾದ ಅಪೀಲು ಪ್ರಾಧಿಕಾರಕ್ಕೆ ಅಂಥ ತೀರ್ಮಾನದ ಅಥವಾ ಆದೇಶದ ದಿನಾಂಕದಿಂದ ಅರವತ್ತು ದಿವಸಗಳೊಳಗೆ ಸಲ್ಲಿಸತಕ್ಕದ್ದು.

(3) ಅಪೀಲು ಪ್ರಾಧಿಕಾರವು, ಅರವತ್ತು ದಿನಗಳ ಅವಧಿಯೊಳಗೆ ಅಪೀಲನ್ನು ಸಲ್ಲಿಸುವುದಕ್ಕೆ ಸಾಕಷ್ಟು ಕಾರಣದಿಂದ ಅಪೀಲುದಾರನಿಗೆ ಅಡ್ಡಿಯುಂಟಾಗಿತ್ತೆಂದು ಮನದಟ್ಟಾದರೆ, ಪ್ರಾಧಿಕಾರವು ಸೂಕ್ತವೆಂದು ಭಾವಿಸಬಹುದಾದಂಥ ಹೆಚ್ಚಿನ ಅವಧಿಯೊಳಗೆ ಅಪೀಲನ್ನು ಅಂಗೀಕರಿಸಬಹುದು.

(4) ಈ ಪ್ರಕರಣದ ಮೇರೆಗೆ ಅಪೀಲನ್ನು ವಿಲೆ ಮಾಡುವಾಗ, ಅಪೀಲು ಪ್ರಾಧಿಕಾರವು, ಪಕ್ಷಕಾರರಿಗೆ ತಮ್ಮ ಮನವಿಯನ್ನು ಮಾಡಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ನಂತರ ಆ ಬಗ್ಗೆ, ಆ ಪ್ರಾಧಿಕಾರವು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಹೊರಡಿಸಬಹುದು.

(5) ಅಪೀಲಿನ ಬಗೆಗಿನ ಅಪೀಲು ಪ್ರಾಧಿಕಾರದ ತೀರ್ಮಾನವು ಅಥವಾ ಆದೇಶವು ಅಂತಿಮವಾಗಿರತಕ್ಕದ್ದು.

**100. ಕೆಲವು ಪ್ರಕರಣಗಳಲ್ಲಿ ಅಪೀಲಿಗೆ ಅವಕಾಶವಿಲ್ಲ.–** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ರಿಸರ್ವ್‌ಬ್ಯಾಂಕಿನ ಲಿಖಿತ ಪೂರ್ವ ಮಂಜೂರಾತಿಯೊಂದಿಗೆ ಅಥವಾ ಅದರ ಕೋರಿಕೆಯ ಮೇರೆಗೆ ಸಹಕಾರಿ ಬ್ಯಾಂಕನ್ನು,–

ಎ) ಪರಿಸಮಾಪನಗೊಳಿಸುವಲ್ಲಿ; ಅಥವಾ

ಬಿ) ಅದಕ್ಕೆ ಸಂಬಂಧಿಸಿದಂತೆ ಸಂಯೋಜನೆ ಅಥವಾ ಪುನಾರಚನೆ ಯೋಜನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ

– ಅದರ ವಿರುದ್ಧ ಅಪೀಲಿಗೆ ಅವಕಾಶವಿಲ್ಲ ಅಥವಾ ಅದಕ್ಕೆ ಅನುಮತಿ ಇಲ್ಲ ಮತ್ತು ರಿಸರ್ವ್‌ಬ್ಯಾಂಕಿನ ಮಂಜೂರಾತಿ ಅಥವಾ ಕೋರಿಕೆಯು ಪ್ರಶ್ನಿಸುವುದಕ್ಕೆ ಗುರಿಯಾಗತಕ್ಕದ್ದಲ್ಲ.

**101. ಪುನರವಲೋಕನ.–** (1) 99ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಅಪೀಲು ಪ್ರಾಧಿಕಾರವು, ಯಾರೇ ಪಕ್ಷಕಾರರ ಅರ್ಜಿಯ ಮೇರೆಗೆ ಯಾವುದೇ ಪ್ರಕರಣದಲ್ಲಿ ತನ್ನ ಆದೇಶವನ್ನು ಪುನರವಲೋಕಿಸಬಹುದು ಮತ್ತು ಅದಕ್ಕೆ ಸಂಬಂಧಿಸಿದಂತೆ ತಾನು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಮಾಡಬಹುದು:

ಪರಂತು, ಅಂಥ ಅರ್ಜಿಯನ್ನು ಯುಕ್ತ ಜಾಗರೂಕತೆಯನ್ನು ವಹಿಸಿದ ನಂತರವೂ ಅರ್ಜಿದಾರನಿಗೆ ಗೊತ್ತಿರದಿದ್ದ ಅಥವಾ ಆದೇಶವನ್ನು ಮಾಡಿದ ಸಮಯದಲ್ಲಿ ಅದನ್ನು ಹಾಜರುಪಡಿಸಲು ಅವನಿಗೆ ಸಾಧ್ಯವಾಗದಿದ್ದ ಹೊಸ ಮತ್ತು ಮಹತ್ವದ ವಿಷಯ ಅಥವಾ ಸಾಕ್ಷ್ಯವು ಪತ್ತೆಯಾಗಿದೆಯೆಂದು ಅಥವಾ ದಾಖಲೆಯಲ್ಲಿ ಎದ್ದುಕಾಣುವಂಥ ಕೆಲವು ತಪ್ಪು ಅಥವಾ ದೋಷ ಇದೆ ಎಂದು ಅಥವಾ ಯಾವುದೇ ಇತರ ಸಾಕಷ್ಟು ಕಾರಣಗಳ ಮೇಲೆ ಅಪೀಲು ಪ್ರಾಧಿಕಾರಕ್ಕೆ ಮನದಟ್ಟಾದ ಹೊರತು, ಪುರಸ್ಕರಿಸತಕ್ಕದ್ದಲ್ಲ:

ಮತ್ತೂ ಪರಂತು, ಎಲ್ಲ ಹಿತಾಸಕ್ತ ಪಕ್ಷಕಾರರಿಗೆ ನೋಟೀಸನ್ನು ನೀಡಿದ ಹೊರತು ಮತ್ತು ಅವರಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ಹೊರತು ಈ ಉಪಪ್ರಕರಣದ ಮೇರೆಗೆ, ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) ಯಾರೇ ಪಕ್ಷಕಾರನು (1)ನೇ ಉಪಪ್ರಕರಣದ ಮೇರೆಗೆ ಪುನರವಲೋಕಿಸುವುದಕ್ಕಾಗಿ ಅರ್ಜಿಯನ್ನು, ಅಪೀಲು ಪ್ರಾಧಿಕಾರದ ಯಾವ ಆದೇಶವನ್ನು ಪುನರವಲೋಕಿಸಬೇಕೆಂದು ಕೋರಲಾಗಿದೆಯೋ ಆ ಆದೇಶವನ್ನು ತಿಳಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಸಲ್ಲಿಸತಕ್ಕದ್ದು.

**102. ವಾದಕಾಲೀನ ಆದೇಶಗಳು.–** 99ನೇ ಪ್ರಕರಣದ ಮೇರೆಗೆ ಅಪೀಲನ್ನು ಸಲ್ಲಿಸಿರುವಲ್ಲಿ, ಅಪೀಲು ಪ್ರಾಧಿಕಾರವು, ನ್ಯಾಯೋದ್ದೇಶಗಳನ್ನು ವಿಫಲಗೊಳಿಸುವುದನ್ನು ತಡೆಯುವುದಕ್ಕಾಗಿ, ಅಂಥ ಪ್ರಾಧಿಕಾರವು ಸೂಕ್ತವೆಂದು ಭಾವಿಸಬಹುದಾದಂತೆ ಅಪೀಲಿನ ತೀರ್ಮಾನವನ್ನು ಇತ್ಯರ್ಥದಲ್ಲಿರಿಸಿ ತಡೆಯಾಜ್ಞೆಯೂ ಸೇರಿದಂತೆ, ಅಂಥ ವಾದಕಾಲೀನ ಆದೇಶಗಳನ್ನು ಮಾಡಬಹುದು.

## ಅಧ್ಯಾಯ – XIII

## ರಾಜ್ಯಗಳ ಪುನರ್ ವಿಂಗಡಣೆಯ ಪರಿಣಾಮವಾಗಿ ಬಹು–ರಾಜ್ಯ ಸಹಕಾರಿ ಸೊಸೈಟಿಗಳಾಗುವ ಸೊಸೈಟಿಗಳು

**103. ರಾಜ್ಯಗಳ ಪುನರ್ ವಿಂಗಡಣೆಯ ನಿಕಟಪೂರ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಹಕಾರಿ ಸೊಸೈಟಿಗಳು.–** (1) ರಾಜ್ಯ ಪುನರ್ ವಿಂಗಡಣೆಯ ಅಧಿನಿಯಮ, 1956ರ (1956ರ 37) ಭಾಗ –II ರ ಉಪಬಂಧಗಳ ಅಥವಾ ರಾಜ್ಯ ಪುನರ್ ವಿಂಗಡಣೆಗೆ ಸಂಬಂಧಿಸಿದಂತೆ ಯಾವುದೇ ಇತರ ಅಧಿನಿಯಮಿತಿಯ ಕಾರಣದಿಂದಾಗಿ, ಪುನರ್ ವಿಂಗಡಣೆಯು ನಡೆದ ದಿನದ ನಿಕಟಪೂರ್ವದಲ್ಲಿ ಒಂದು ರಾಜ್ಯಕ್ಕೆ ಸೀಮಿತವಾಗಿ ತನ್ನ ಉದ್ದೇಶಗಳನ್ನು ಹೊಂದಿದ್ದ, ಯಾವುದೇ ಸಹಕಾರಿ ಸೊಸೈಟಿಯು ಆ ದಿನದಿಂದ ಬಹು–ರಾಜ್ಯ ಸಹಕಾರಿ ಸೊಸೈಟಿಯಾದಲ್ಲಿ, ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಅದನ್ನು ನೋಂದಾಯಿತವಾದ ಬಹು–ರಾಜ್ಯ ಸಹಕಾರಿ ಸೊಸೈಟಿಯೆಂದು ಭಾವಿಸತಕ್ಕದ್ದು ಮತ್ತು ಅಂಥ ಸೊಸೈಟಿಯ ಉಪವಿಧಿಗಳು ಈ ಅಧಿನಿಯಮದ ಉಪಬಂಧಗಳಿಗೆ ಅವು ಅಸಂಗತವಾಗದಿರುವಷ್ಟರ ಮಟ್ಟಿಗೆ, ಅವುಗಳನ್ನು ಮಾರ್ಪಾಟುಗೊಳಿಸುವವರೆಗೆ ಅಥವಾ ರದ್ದುಗೊಳಿಸುವವರೆಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

(2) ಕೇಂದ್ರ ರಿಜಿಸ್ಟ್ರಾರನಿಗೆ ಅಥವಾ ಕೇಂದ್ರ ಸರ್ಕಾರವು ಈ ಬಗ್ಗೆ ಅಧಿಕೃತಗೊಳಿಸಿದ ಯಾರೇ ಅಧಿಕಾರಿಗೆ (ಇನ್ನುಮುಂದೆ ಈ ಪ್ರಕರಣದಲ್ಲಿ ಅಧಿಕೃತಗೊಳಿಸಿದ ಅಧಿಕಾರಿ ಎಂದು ಉಲ್ಲೇಖಿಸಲಾಗಿದೆ) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಸೊಸೈಟಿಯ ಪುನರ್‌ರಚನೆ ಅಥವಾ ಪುನರ್ ಸಂಘಟನೆಯು ಅವಶ್ಯವೆಂದು ಅಥವಾ ವಿಹಿತವೆಂದು ಮನದಟ್ಟಾದರೆ, ಸಂದರ್ಭಾನುಸಾರ, ಕೇಂದ್ರ ರಿಜಿಸ್ಟ್ರಾರನು ಅಥವಾ ಅಧಿಕೃತಗೊಳಿಸಿದ ಅಧಿಕಾರಿಯು, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದು,–

(ಎ) ಹೊಸ ಬಹು–ರಾಜ್ಯ ಸಹಕಾರಿ ಸೊಸೈಟಿಗಳ ರಚನೆಗೆ ಮತ್ತು ಆ ಸೊಸೈಟಿಯ ಆಸ್ತಿಗಳನ್ನು ಮತ್ತು ಹೊಣೆಗಾರಿಕೆಗಳನ್ನು ಪೂರ್ಣವಾಗಿ ಅಥವಾ ಭಾಗಶಃ ಅದಕ್ಕೆ ವರ್ಗಾಯಿಸುವುದಕ್ಕೆ; ಅಥವಾ

(ಬಿ) ಪೂರ್ಣವಾಗಿ ಅಥವಾ ಭಾಗಶಃವಾಗಿ ಆ ಸೊಸೈಟಿಯ ಆಸ್ತಿಗಳನ್ನು ಮತ್ತು ಹೊಣೆಗಾರಿಕೆಗಳನ್ನು ಸಾಮಾನ್ಯ ಸಭೆಯ ದಿನಾಂಕದ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿರುವ ಯಾವುದೇ ಇತರ ಬಹು–ರಾಜ್ಯ ಸಹಕಾರಿ ಸೊಸೈಟಿಗೆ (ಇನ್ನು ಮುಂದೆ ಈ ಪ್ರಕರಣದಲ್ಲಿ ಅಸ್ತಿತ್ವದಲ್ಲಿರುವ ಬಹು–ರಾಜ್ಯ ಸಹಕಾರಿ ಸೊಸೈಟಿ ಎಂದು ಉಲ್ಲೇಖಿಸಲಾಗಿದೆ) ವರ್ಗಾಯಿಸುವುದಕ್ಕೆ

– ಸಂಬಂಧಿಸಿದ ಪ್ರಸ್ತಾವನೆಗಳನ್ನೂ ಒಳಗೊಂಡಂತೆ ಪುನಾರಚನೆ ಅಥವಾ ಪುನರ್ ಸಂಘಟನೆಯ ಕಾರ್ಯಯೋಜನೆಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ನಡೆದ ಆ ಸೊಸೈಟಿಯ ಸರ್ವ ಸದಸ್ಯರ ಸಭೆಯ ಮುಂದೆ ಇಡತಕ್ಕದ್ದು.

(3) ಮಾರ್ಪಾಟುಗಳಿಲ್ಲದ ಅಥವಾ ಮಾರ್ಪಾಟುಗಳನ್ನು ಒಳಗೊಂಡ ಕೇಂದ್ರ ರಿಜಿಸ್ಟ್ರಾರನು ಅಥವಾ ಅಧಿಕೃತಗೊಂಡ ವ್ಯಕ್ತಿಯು ಒಪ್ಪಿದ ಸ್ಕೀಂ ಅನ್ನು ಸದರಿ ಸಭೆಯಲ್ಲಿ ಹಾಜರಿರುವ ಸದಸ್ಯರು ಬಹುಮತದಿಂದ ಠರಾವನ್ನು ಅಂಗೀಕರಿಸುವ ಮೂಲಕ ಸ್ಕೀಮನ್ನು ಮಂಜೂರು ಮಾಡಿದರೆ, ಆ ಸ್ಕೀಂನ್ನು ಪ್ರಮಾಣೀಕರಿಸತಕ್ಕದ್ದು ಮತ್ತು ಅಂಥ ಪ್ರಮಾಣೀಕರಣದ ನಂತರ, ಸ್ಕೀಂಗೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ,

ವಿನಿಯಮನದಲ್ಲಿ ಅಥವಾ ಉಪವಿಧಿಯಲ್ಲಿ ತದ್ವಿರುದ್ಧವಾದುದು ಏನೇ ಒಳಗೊಂಡಿದ್ದರೂ, ಸ್ಕೀಂಗೆ ಸಂಬಂಧಪಡುವ ಎಲ್ಲ ಸೊಸೈಟಿಗಳು ಹಾಗೂ ಅಂಥ ಎಲ್ಲ ಸೊಸೈಟಿಗಳ ಷೇರುದಾರರು ಮತ್ತು ಸಾಲಕೊಟ್ಟವರು ಬದ್ಧರಾಗಿರತಕ್ಕದ್ದು.

(4) ಸ್ಕೀಂನ್ನು (3)ನೇ ಉಪಪ್ರಕರಣದ ಮೇರೆಗೆ ಮಂಜೂರು ಮಾಡಿರದಿದ್ದರೆ, ಕೇಂದ್ರ ರಿಜಿಸ್ಟ್ರಾರನು ಅಥವಾ ಅಧಿಕೃತಗೊಂಡ ವ್ಯಕ್ತಿಯು ಸ್ಕೀಂನ್ನು ಈ ಬಗ್ಗೆ ಸಮುಚಿತ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನು ನಾಮ ನಿರ್ದೇಶಿಸಿದ ನ್ಯಾಯಾಧೀಶನಿಗೆ ಉಲ್ಲೇಖಿಸಬಹುದು ಮತ್ತು ಆ ಸ್ಕೀಂಗೆ ಸಂಬಂಧಿಸಿದಂತೆ ಆ ನ್ಯಾಯಾಧೀಶನ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಸ್ಕೀಮು ಸಂಬಂಧಪಡುವ ಎಲ್ಲ ಸೊಸೈಟಿಗಳು ಹಾಗೂ ಅಂಥ ಎಲ್ಲ ಸೊಸೈಟಿಗಳ ಷೇರುದಾರರು ಮತ್ತು ಸಾಲಕೊಟ್ಟವರು ಅದಕ್ಕೆ ಬದ್ಧರಾಗಿರತಕ್ಕದ್ದು.

**ವಿವರಣೆ.–** ಈ ಉಪಪ್ರಕರಣದ ಉದ್ದೇಶಗಳಿಗಾಗಿ, "ಸಮುಚಿತ ಉಚ್ಚ ನ್ಯಾಯಾಲಯ" ಎಂದರೆ ಯಾವ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳ ಒಳಗೆ ಬಹು-ರಾಜ್ಯ ಸಹಕಾರಿ ಸೊಸೈಟಿಯು ವ್ಯವಹಾರ ನಡೆಸುವ ಮುಖ್ಯ ಸ್ಥಳವು ಇರುವುದೋ ಆ ಉಚ್ಚ ನ್ಯಾಯಾಲಯ ಎಂದು ಅರ್ಥ.

(5) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, (2)ನೇ ಉಪಪ್ರಕರಣದ ಮೇರೆಗಿನ ಸ್ಕೀಂನಲ್ಲಿ, ಆ ಉಪಪ್ರಕರಣದ (ಬಿ)ಖಂಡದಲ್ಲಿ ಉಲ್ಲೇಖಿಸಿದ ಯಾವುದೇ ಬಹು-ರಾಜ್ಯ ಸಹಕಾರಿ ಸೊಸೈಟಿಯ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆಗೆ ಸಂಬಂಧಿಸಿದ ಯಾವುದೇ ಪ್ರಸ್ತಾವನೆಯು ಒಳಗೊಂಡಿದ್ದಲ್ಲಿ, ಅದರ ಸಾಮಾನ್ಯ ಸಭೆಯಲ್ಲಿ ಹಾಜರಿರುವ ಸದಸ್ಯರು ಬಹುಮತದಿಂದ ಅಂಗೀಕರಿಸಿದ ಠರಾವಿನ ಮೂಲಕ, ಆ ಬಹು-ರಾಜ್ಯ ಸಹಕಾರಿ ಸೊಸೈಟಿಯು ಅಂಥ ವರ್ಗಾವಣೆಗೆ ಸಂಬಂಧಿಸಿದ ಆ ಪ್ರಸ್ತಾವನೆಯನ್ನು ಅಂಗೀಕರಿಸಿದ ಹೊರತು, ಆ ಸ್ಕೀಂಗೆ ಅಂಥ ಬಹು-ರಾಜ್ಯ ಸಹಕಾರಿ ಸೊಸೈಟಿಯು ಅಥವಾ ಅದರ ಷೇರುದಾರರು ಮತ್ತು ಸಾಲಕೊಟ್ಟವರು ಬದ್ಧರಾಗಿರತಕ್ಕದ್ದಲ್ಲ.

## ಅಧ್ಯಾಯ – XIV

## ಅಪರಾಧಗಳು ಮತ್ತು ದಂಡನೆಗಳು

**104. ಅಪರಾಧಗಳು ಮತ್ತು ದಂಡನೆಗಳು.–** (1) ಬಹು-ರಾಜ್ಯ ಸಹಕಾರಿ ಸೊಸೈಟಿಯು ಅಥವಾ ಅದರ ಅಧಿಕಾರಿಯು ಅಥವಾ ಸದಸ್ಯನು ಉದ್ದೇಶಪೂರ್ವಕವಾಗಿ ಸುಳ್ಳು ವಿವರಪಟ್ಟಿಯನ್ನು ಸಲ್ಲಿಸಿದಲ್ಲಿ ಅಥವಾ ಸುಳ್ಳು ಮಾಹಿತಿಯನ್ನು ಒದಗಿಸಿದಲ್ಲಿ ಅಥವಾ ಯಾರೇ ವ್ಯಕ್ತಿಯು ಉದ್ದೇಶಪೂರ್ವಕವಾಗಿ ಅಥವಾ ಯಾವುದೇ ಯುಕ್ತ ಕಾರಣವಿಲ್ಲದೆ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಹೊರಡಿಸಿದ ಯಾವುದೇ ಸಮನುಗಳನ್ನು, ಕಡ್ಡಾಯ ಕೋರಿಕೆಯನ್ನು ಅಥವಾ ಕಾನೂನುಬದ್ಧ ಲಿಖಿತ ಆದೇಶವನ್ನು ಪಾಲಿಸದಿದ್ದರೆ ಅಥವಾ ಆ ವ್ಯಕ್ತಿಯು ಕೊಡಬೇಕೆಂದು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಈ ಬಗ್ಗೆ ಅಧಿಕೃತಗೊಂಡ ವ್ಯಕ್ತಿಯು ಅಗತ್ಯಪಡಿಸಿದ ಮಾಹಿತಿಯನ್ನು ಉದ್ದೇಶಪೂರ್ವಕವಾಗಿ ಒದಗಿಸದಿದ್ದರೆ, ಎರಡು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿಲ್ಲದ ಆದರೆ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಯಾರೇ ನಿಯೋಜಕನು, ಸಾಕಷ್ಟು ಕಾರಣವಿಲ್ಲದೆ, 60ನೇ ಪ್ರಕರಣದ ಮೇರೆಗೆ ಅವನು, ಮುರಿದುಕೊಂಡ ಮೊಬಲಗನ್ನು, ಹಾಗೆ ಮುರಿದುಕೊಂಡ ದಿನಾಂಕದಿಂದ ಹದಿನಾಲ್ಕು ದಿವಸಗಳ ಅವಧಿಯೊಳಗೆ ಬಹು-ರಾಜ್ಯ ಸಹಕಾರಿ ಸೊಸೈಟಿಗೆ ಸಂದಾಯ ಮಾಡುವುದಕ್ಕೆ ವಿಫಲನಾದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ

ಯಾವುದೇ ಇತರ ಕಾನೂನಿನ ಮೇರೆಗೆ ಅವನ ಮೇಲೆ ತೆಗೆದುಕೊಳ್ಳಬಹುದಾದ ಯಾವುದೇ ಕ್ರಮಕ್ಕೆ ಬಾಧಕವಾಗದಂತೆ, ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) ಯಾವ ಅಧಿಕಾರಿಯು ಅಥವಾ ಅಭಿರಕ್ಷಕನು, ಯಾವ ಬಹು–ರಾಜ್ಯ ಸಹಕಾರಿ ಸೊಸೈಟಿಯ ಅಧಿಕಾರಿಯಾಗಿರುವನೋ ಅಥವಾ ಅಭಿರಕ್ಷಕನಾಗಿರುವನೋ ಆ ಸೊಸೈಟಿಗೆ ಸೇರಿದ ಪುಸ್ತಕಗಳನ್ನು, ಲೆಕ್ಕಗಳನ್ನು, ದಸ್ತಾವೇಜುಗಳನ್ನು, ದಾಖಲೆಗಳನ್ನು, ನಗದನ್ನು, ಭದ್ರತೆಯನ್ನು ಮತ್ತು ಇತರ ಸ್ವತ್ತನ್ನು 54ನೇ ಪ್ರಕರಣದ ಅಥವಾ 70ನೇ ಪ್ರಕರಣದ ಅಥವಾ 78ನೇ ಪ್ರಕರಣದ ಅಥವಾ 79ನೇ ಪ್ರಕರಣದ ಅಥವಾ 89ನೇ ಪ್ರಕರಣದ ಮೇರೆಗೆ ಹಕ್ಕುಳ್ಳ ವ್ಯಕ್ತಿಗೆ ಹಸ್ತಾಂತರಿಸುವುದಕ್ಕೆ ಉದ್ದೇಶಪೂರ್ವಕವಾಗಿ ವಿಫಲನಾದರೆ, ಎರಡು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಉಲ್ಲಂಘನೆಯು ಮುಂದುವರಿದ ಸಂದರ್ಭದಲ್ಲಿ, ಅಂಥ ಮೊದಲ ಉಲ್ಲಂಘನೆಗಾಗಿ, ಅಪರಾಧ ನಿರ್ಣಯವಾದ ನಂತರ ಆ ಉಲ್ಲಂಘನೆಯು ಮುಂದುವರಿದ ಪ್ರತಿಯೊಂದು ದಿನಕ್ಕೆ ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(4) 38ನೇ ಪ್ರಕರಣದ (1)ನೇ ಉಪಪ್ರಕರಣದ ಪರಂತುಕದಲ್ಲಿ ಹೇಳಿರುವಂಥ ಪ್ರತಿನಿಧಿಗಳ ಚುನಾವಣೆಯ ಅಥವಾ ಮಂಡಲಿಯ ಸದಸ್ಯರ ಚುನಾವಣೆಗೆ ಮುಂಚೆ, ಚುನಾವಣೆಯ ಸಂದರ್ಭದಲ್ಲಿ ಅಥವಾ ಚುನಾವಣೆಯ ನಂತರ ಯಾರಾದರೂ,–

(ಎ) ಯಾವುದೇ ನಾಮ ನಿರ್ದೇಶನ ಪತ್ರವನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ಮೋಸದಿಂದ ನಾಶಪಡಿಸಿದರೆ; ಅಥವಾ

(ಬಿ) ಚುನಾವಣಾಧಿಕಾರಿಯ ಅಧಿಕಾರದ ಪ್ರಕಾರ ಅಥವಾ ಅದರ ಮೇರೆಗೆ ಹಚ್ಚಿದ ಯಾವುದೇ ಪಟ್ಟಿಯನ್ನು, ನೋಟೀಸನ್ನು ಅಥವಾ ಇತರ ದಸ್ತಾವೇಜನ್ನು ಮೋಸದಿಂದ ವಿರೂಪಗೊಳಿಸಿದರೆ, ನಾಶಗೊಳಿಸಿದರೆ ಅಥವಾ ತೆಗೆದುಹಾಕಿದರೆ; ಅಥವಾ

(ಸಿ) ಯಾವುದೇ ಮತ ಪತ್ರವನ್ನು ಅಥವಾ ಯಾವುದೇ ಮತಪತ್ರದ ಮೇಲಿನ ಅಧಿಕೃತ ಗುರುತನ್ನು ಅಥವಾ ಗುರುತಿನ ಬಗೆಗಿನ ಯಾವುದೇ ಘೋಷಣೆಯನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ಮೋಸದಿಂದ ನಾಶಪಡಿಸಿದರೆ; ಅಥವಾ

(ಡಿ) ಯುಕ್ತ ಅಧಿಕಾರವಿಲ್ಲದೆ ಯಾರೇ ವ್ಯಕ್ತಿಗೆ ಯಾವುದೇ ಮತಪತ್ರವನ್ನು ಸರಬರಾಜು ಮಾಡಿದರೆ ಅಥವಾ ಯಾರೇ ವ್ಯಕ್ತಿಯಿಂದ ಯಾವುದೇ ಮತಪತ್ರವನ್ನು ಸ್ವೀಕರಿಸಿದರೆ ಅಥವಾ ಯಾವುದೇ ಮತಪತ್ರವನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡರೆ; ಅಥವಾ

(ಇ) ಮತ ಪತ್ರವನ್ನು ಹಾಕಲು ಕಾನೂನಿನ ಪ್ರಕಾರ ಅಧಿಕಾರ ಪಡೆದ ಮತ ಪತ್ರದ ಹೊರತಾಗಿ ಯಾವುದೇ ವಸ್ತುವನ್ನು ಯಾವುದೇ ಮತಪೆಟ್ಟಿಗೆಯಲ್ಲಿ ಮೋಸದಿಂದ ಹಾಕಿದರೆ; ಅಥವಾ

(ಎಫ್) ಚುನಾವಣಾ ಉದ್ದೇಶಗಳಿಗಾಗಿ ಆ ಸಮಯದಲ್ಲಿ ಬಳಸುವ ಯಾವುದೇ ಮತ ಪೆಟ್ಟಿಗೆಯನ್ನು ಅಥವಾ ಮತಪತ್ರವನ್ನು ಯುಕ್ತ ಅಧಿಕಾರವಿಲ್ಲದೆ ನಾಶಪಡಿಸಿದರೆ, ತೆಗೆದುಕೊಂಡರೆ, ತೆರೆದರೆ ಅಥವಾ ಅನ್ಯಥಾ ಹಸ್ತಕ್ಷೇಪ ಮಾಡಿದರೆ; ಅಥವಾ

(ಜಿ) ಸಂದರ್ಭಾನುಸಾರ, ಮೋಸದಿಂದ ಅಥವಾ ಯುಕ್ತ ಅಧಿಕಾರವಿಲ್ಲದೆ, ಮೇಲೆ ಹೇಳಿದ ಯಾವುದೇ ಕೃತ್ಯಗಳನ್ನು ಮಾಡಲು ಪ್ರಯತ್ನಿಸಿದರೆ ಅಥವಾ ಅಂಥ ಯಾವುದೇ ಕೃತ್ಯಗಳನ್ನು ಮಾಡಲು ಉದ್ದೇಶಪೂರ್ವಕವಾಗಿ ನೆರವಾದರೆ ಅಥವಾ ದುಷ್ಪ್ರೇರೇಪಿಸಿದರೆ; ಅಥವಾ

(ಹೆಚ್) ಯಾರೇ ವ್ಯಕ್ತಿಗೆ,-

(i) ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ಸ್ಪರ್ಧಿಸುವಂತೆ ಅಥವಾ ಸ್ಪರ್ಧಿಸದಿರುವಂತೆ ಅಥವಾ ಚುನಾವಣಾ ಅಭ್ಯರ್ಥಿಯಾಗಿರುವುದನ್ನು ಹಿಂತೆಗೆದುಕೊಳ್ಳುವಂತೆ ಅಥವಾ ಹಿಂತೆಗೆದುಕೊಳ್ಳದಿರುವಂತೆ ಮಾಡುವ ವ್ಯಕ್ತಿಯನ್ನು;

(ii) ಚುನಾವಣೆಯಲ್ಲಿ, ಮತ ಚಲಾಯಿಸುವಂತೆ ಅಥವಾ ಮತದಾನ ಮಾಡದಂತೆ ಮಾಡುವ ಅಥವಾ ಆತನು ಹಾಗೆ ಸ್ಪರ್ಧಿಸಿದ್ದರೆ ಅಥವಾ ಸ್ಪರ್ಧಿಸಿರದಿದ್ದರೆ ಅಥವಾ ಆತನ ಉಮೇದುವಾರಿಕೆಯನ್ನು ಹಿಂತೆಗೆದುಕೊಂಡಿದ್ದರೆ ಅಥವಾ ಹಿಂತೆಗೆದುಕೊಂಡಿರದಿದ್ದರೆ, ಆ ವ್ಯಕ್ತಿಗೆ ಪ್ರತಿಫಲವನ್ನು ನೀಡುವ ಸದಸ್ಯನನ್ನು;

(iii) ಮತ ಚಲಾಯಿಸಿರುವ ಅಥವಾ ಮತ ಚಲಾಯಿಸದಿರುವ ಸದಸ್ಯನನ್ನು

– ಒಳಗೊಂಡಂತೆ, ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಆ ಉದ್ದೇಶಗಳಿಗಾಗಿ ಯಾವುದೇ ಬಹುಮಾನವನ್ನು ಕೊಡುತ್ತೇನೆಂದು ಪ್ರಸ್ತಾಪಿಸಿದರೆ ಅಥವಾ ಯಾವುದೇ ಲಂಚವನ್ನು ನೀಡುತ್ತೇನೆಂದು ಪ್ರಸ್ತಾಪಿಸಿ ಮಾತು ಕೊಟ್ಟರೆ, ಆರು ತಿಂಗಳುಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**105. ಅಪರಾಧಗಳ ಸಂಜ್ಞೇಯತೆ.–** (1) ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟರಿಗಿಂತ ಅಥವಾ ಪ್ರಥಮ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟರಿಗಿಂತ ಕೆಳದರ್ಜೆಯ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಅಧಿವಿಚಾರಣೆ ಮಾಡತಕ್ಕದ್ದಲ್ಲ.

(2) 104ನೇ ಪ್ರಕರಣದ ಮೇರೆಗಿನ ಅಪರಾಧಗಳಿಗಾಗಿ ಯಾವುದೇ ಪ್ರಾಸಿಕ್ಯೂಷನ್‌ನ್ನು ಸಕ್ಷಮ ನ್ಯಾಯಾಲಯದಲ್ಲಿ, ಬಹು-ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯನು ಅಥವಾ ಕೇಂದ್ರ ರಿಜಿಸ್ಟ್ರಾರನು, ಲಿಖಿತದಲ್ಲಿ ಫಿರ್ಯಾದನ್ನು ಸಲ್ಲಿಸಿದ್ದ ಮೇರೆಗೆ ಹೊರತು ಹೂಡತಕ್ಕದ್ದಲ್ಲ.

## ಅಧ್ಯಾಯ – XV

## ಸಂಕೀರ್ಣ

**106. ಉಪವಿಧಿಗಳ ಪ್ರತಿಗಳು, ಇತ್ಯಾದಿಗಳು ಪರಿಶೀಲನೆಗೆ ಮುಕ್ತವಾಗಿರತಕ್ಕದ್ದು.–** ಪ್ರತಿಯೊಂದು ಬಹು-ರಾಜ್ಯ ಸಹಕಾರಿ ಸೊಸೈಟಿಯು, ನಿಯಮಗಳ ಮತ್ತು ಅದರ ಉಪ ವಿಧಿಗಳ ಹಾಗೂ ಅದರ ಸದಸ್ಯರ ಪಟ್ಟಿಯ ಪ್ರತಿಯನ್ನು ಸಹ ಸೊಸೈಟಿಯ ನೋಂದಾಯಿತ ಸ್ಥಳದಲ್ಲಿ, ಎಲ್ಲ ಸೂಕ್ತ ಸಮಯಗಳಲ್ಲಿ ಶುಲ್ಕ ರಹಿತ ಪರಿಶೀಲನೆಗೆ ಮುಕ್ತವಾಗಿ ಇಡತಕ್ಕದ್ದು.

**107. ರಿಜಿಸ್ಟರುಗಳನ್ನು ಮತ್ತು ವಿವರ ಪಟ್ಟಿಕೆಗಳನ್ನು ರಕ್ಷಿಸಿ ಇಡುವ ಮತ್ತು ಪರಿಶೀಲಿಸುವ ಸ್ಥಳ.–** (1) ಬಹು–ರಾಜ್ಯ ಸಹಕಾರಿ ಸೊಸೈಟಿಯ ನೋಂದಣಿಯ ದಿನಾಂಕದಿಂದ ಪ್ರಾರಂಭಿಸಿ ಸದಸ್ಯರ ರಿಜಿಸ್ಟರನ್ನು, ಸದಸ್ಯರ ಸೂಚಿಯನ್ನು, ಡಿಬೆಂಚರುದಾರರ ರಿಜಿಸ್ಟರನ್ನು ಮತ್ತು ಪ್ರಮಾಣಪತ್ರಗಳ ಮತ್ತು ದಸ್ತಾವೇಜುಗಳ ಪ್ರತಿಗಳೊಂದಿಗೆ ಸಿದ್ಧಪಡಿಸಿದ ಎಲ್ಲ ವಾರ್ಷಿಕ ವಿವರಪಟ್ಟಿಕೆಗಳ ಪ್ರತಿಗಳನ್ನು ಬಹು–ರಾಜ್ಯ ಸಹಕಾರಿ ಸೊಸೈಟಿಯ ನೋಂದಾಯಿತ ಕಚೇರಿಯಲ್ಲಿ ರಕ್ಷಿಸಿ ಇಡತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ರಿಜಿಸ್ಟರುಗಳನ್ನು, ಸೂಚಿಗಳನ್ನು, ವಿವರಪಟ್ಟಿಕೆಗಳನ್ನು ಮತ್ತು ಪ್ರಮಾಣಪತ್ರಗಳ ಮತ್ತು ಇತರ ದಸ್ತಾವೇಜುಗಳ ಪ್ರತಿಗಳನ್ನು

(ಎ) ಫೀಜು ಇಲ್ಲದೆ, ಯಾರೇ ಸದಸ್ಯನ ಅಥವಾ ಡಿಬೆಂಚರುದಾರನ; ಮತ್ತು

(ಬಿ) ಪ್ರತಿಯೊಂದು ಪರಿಶೀಲನೆಗೆ ನಿಯಮಿಸಬಹುದಾದಂಥ ಮೊಬಲಗನ್ನು ಸಂದಾಯ ಮಾಡಿದ ಮೇಲೆ ಯಾರೇ ಇತರ ವ್ಯಕ್ತಿಯ

– ಪರಿಶೀಲನೆಗೆ, ಅದರ ವ್ಯವಹಾರದ ಸಮಯಗಳಲ್ಲಿ (ಬಹು–ರಾಜ್ಯ ಸಹಕಾರಿ ಸೊಸೈಟಿಯು ವಿಧಿಸಬಹುದಾದಂಥ ಯುಕ್ತ ನಿರ್ಬಂಧಗಳಿಗೆ ಒಳಪಟ್ಟು) ಪ್ರತಿದಿನವೂ ಎರಡು ಗಂಟೆಗಳಿಗಿಂತ ಕಡಿಮೆಯಿಲ್ಲದಂತೆ ಪರಿಶೀಲನೆಗೆ ಅನುಮತಿಸಿ ಮುಕ್ತವಾಗಿಡತಕ್ಕದ್ದು.

**108. ಬಹು–ರಾಜ್ಯ ಸಹಕಾರಿ ಸೊಸೈಟಿಯ ಲೆಕ್ಕದ ಪುಸ್ತಕ, ಇತ್ಯಾದಿಗಳ ಪರಿಶೀಲನೆ.–** (1) ಪ್ರತಿಯೊಂದು ಬಹು–ರಾಜ್ಯ ಸಹಕಾರಿ ಸೊಸೈಟಿಯ ಲೆಕ್ಕದ ಪುಸ್ತಕಗಳು ಮತ್ತು ಇತರ ಪುಸ್ತಕಗಳು ಮತ್ತು ಕಾಗದ ಪತ್ರಗಳು,–

(i) ಕೇಂದ್ರ ರಿಜಿಸ್ಟ್ರಾರನ; ಅಥವಾ

(ii) ಈ ಬಗ್ಗೆ ಕೇಂದ್ರ ಸರ್ಕಾರವು ಅಧಿಕೃತಗೊಳಿಸಬಹುದಾದಂಥ ಸರ್ಕಾರದ ಅಧಿಕಾರಿಯ:

ಪರಂತು, ಆ ಸೊಸೈಟಿಗೆ ಅಥವಾ ಅದರ ಯಾರೇ ಅಧಿಕಾರಿಗೆ ಮೊದಲೇ ಯಾವುದೇ ನೋಟೀಸನ್ನು ನೀಡದೆ ಅಂಥ ಪರಿಶೀಲನೆಯನ್ನು ಮಾಡಬಹುದು.

(iii) ಬಹು–ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯರ

– ಪರಿಶೀಲನೆಗೆ ವ್ಯವಹಾರದ ಸಮಯಗಳಲ್ಲಿ ಮುಕ್ತವಾಗಿ ಇಡತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಪರಿಶೀಲನೆಯನ್ನು ಮಾಡುವ ವ್ಯಕ್ತಿಗೆ ಬಹು–ರಾಜ್ಯ ಸಹಕಾರಿ ಸೊಸೈಟಿಯ ಪ್ರತಿಯೊಬ್ಬ ನಿರ್ದೇಶಕನು, ಇತರ ಅಧಿಕಾರಿಯು ಅಥವಾ ನೌಕರನು ತನ್ನ ಅಭಿರಕ್ಷೆಯಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಬಹು–ರಾಜ್ಯ ಸಹಕಾರಿ ಸೊಸೈಟಿಯ ಅಂಥ ಎಲ್ಲ ಲೆಕ್ಕ ಪುಸ್ತಕಗಳನ್ನು ಮತ್ತು ಇತರ ಪುಸ್ತಕಗಳನ್ನು ಮತ್ತು ಕಾಗದಪತ್ರಗಳನ್ನು ಹಾಜರುಪಡಿಸುವುದು ಹಾಗೂ ಸದರಿ ವ್ಯಕ್ತಿಯು ನಿರ್ದಿಷ್ಟಪಡಿಸಬಹುದಾದಂಥ ಸಮಯದೊಳಗೆ ಮತ್ತು ಅಂಥ ಸ್ಥಳದಲ್ಲಿ ಅಂಥ ಸೊಸೈಟಿಯ ವ್ಯವಹಾರಗಳಿಗೆ ಸಂಬಂಧಿಸಿದಂತೆ ಆ ವ್ಯಕ್ತಿಯು ಅಗತ್ಯಪಡಿಸುವ ಯಾವುದೇ ಹೇಳಿಕೆಯನ್ನು, ಮಾಹಿತಿಯನ್ನು ಅಥವಾ ವಿವರಣೆಯನ್ನು ಒದಗಿಸುವುದು ಅವನ ಕರ್ತವ್ಯವಾಗಿರತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಪರಿಶೀಲನೆ ಮಾಡುವ ವ್ಯಕ್ತಿಗೆ ಆ ಪರಿಶೀಲನೆಗೆ ಸಂಬಂಧಿಸಿದಂತೆ ಬಹು-ರಾಜ್ಯ ಸಹಕಾರಿ ಸೊಸೈಟಿಯು ನೀಡಬೇಕೆಂದು ಯುಕ್ತವಾಗಿ ಅಪೇಕ್ಷಿಸುವ ಎಲ್ಲ ಸಹಾಯವನ್ನು ನೀಡುವುದು ಸಹ ಬಹು-ರಾಜ್ಯ ಸಹಕಾರಿ ಸೊಸೈಟಿಯ ಪ್ರತಿಯೊಬ್ಬ ನಿರ್ದೇಶಕನ, ಇತರ ಅಧಿಕಾರಿಯ ಅಥವಾ ನೌಕರನ ಕರ್ತವ್ಯವಾಗಿರತಕ್ಕದ್ದು.

(4) ಈ ಪ್ರಕರಣದ ಮೇರೆಗೆ ಪರಿಶೀಲನೆ ಮಾಡುವ ವ್ಯಕ್ತಿಯು ಪರಿಶೀಲನೆ ಮಾಡುವಾಗ,-

(i) ಲೆಕ್ಕ ಪುಸ್ತಕಗಳ ಮತ್ತು ಇತರ ಪುಸ್ತಕಗಳ ಮತ್ತು ಕಾಗದಪತ್ರಗಳ ಪ್ರತಿಗಳನ್ನು ಮಾಡಬಹುದು ಅಥವಾ ಮಾಡಿಸಬಹುದು; ಅಥವಾ

(ii) ಪರಿಶೀಲನೆಯನ್ನು ಮಾಡಿದ್ದ ಸಂಕೇತವಾಗಿ ಅದರ ಮೇಲೆ ಯಾವುದೇ ಗುರುತು ಚಿಹ್ನೆಗಳನ್ನು ಹಾಕಬಹುದು ಅಥವಾ ಹಾಕಿಸಬಹುದು.

(5) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಯಾವುದೇ ಕರಾರಿನಲ್ಲಿ ತದ್ವಿರುದ್ಧವಾದುದು ಏನೇ ಒಳಗೊಂಡಿದ್ದರೂ, ಕೇಂದ್ರ ರಿಜಿಸ್ಟ್ರಾರನು ಅಥವಾ (1)ನೇ ಉಪ ಪ್ರಕರಣದ (ii)ನೇ ಖಂಡದ ಮೇರೆಗೆ ಅಧಿಕೃತಗೊಂಡ ಅಧಿಕಾರಿಯು ಈ ಪ್ರಕರಣದ ಮೇರೆಗೆ ಪರಿಶೀಲನೆ ಮಾಡುವಾಗ ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದಂತೆ ದಾವೆಯ ಅಧಿವಿಚಾರಣೆ ಮಾಡುವಾಗ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥದೇ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:-

(i) ಅಂಥ ವ್ಯಕ್ತಿಯು ನಿರ್ದಿಷ್ಟಪಡಿಸಬಹುದಾದಂಥ ಸ್ಥಳದಲ್ಲಿ ಮತ್ತು ಅಂಥ ಸಮಯದೊಳಗೆ ಲೆಕ್ಕ ಪುಸ್ತಕಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಶೋಧಿಸುವುದು ಮತ್ತು ಹಾಜರುಪಡಿಸುವುದು;

(ii) ವ್ಯಕ್ತಿಗಳನ್ನು ಸಮನು ಮಾಡುವುದು ಮತ್ತು ಹಾಜರಾತಿಯನ್ನು ಒತ್ತಾಯಿಸುವುದು ಮತ್ತು ಪ್ರಮಾಣ ಮಾಡಿಸಿ ಪರೀಕ್ಷಿಸುವುದು;

(iii) ಯಾವುದೇ ಸ್ಥಳದಲ್ಲಿ ಬಹು-ರಾಜ್ಯ ಸಹಕಾರಿ ಸೊಸೈಟಿಯ ಯಾವುದೇ ಪುಸ್ತಕಗಳನ್ನು, ರಿಜಿಸ್ಟರುಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಪರಿಶೀಲಿಸುವುದು.

(6) ಈ ಪ್ರಕರಣದ ಮೇರೆಗೆ ಬಹು-ರಾಜ್ಯ ಸಹಕಾರಿ ಸೊಸೈಟಿಯ ಲೆಕ್ಕ ಪುಸ್ತಕಗಳ ಮತ್ತು ಇತರ ಪುಸ್ತಕಗಳ ಮತ್ತು ಕಾಗದ ಪತ್ರಗಳ ಪರಿಶೀಲನೆಯನ್ನು ಮಾಡಿದಲ್ಲಿ ಪರಿಶೀಲನೆ ಮಾಡಿದ ಕೇಂದ್ರ ರಿಜಿಸ್ಟ್ರಾರನು ಅಥವಾ (1)ನೇ ಉಪಪ್ರಕರಣದ (ii)ನೇ ಖಂಡದ ಮೇರೆಗೆ ಅಧಿಕೃತಗೊಂಡ ಅಧಿಕಾರಿಯು ಪರಿಶೀಲನೆಯ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

**109. ವಾರ್ಷಿಕ ಲೆಕ್ಕಪತ್ರಗಳು ಮತ್ತು ಜಮಾ-ಖರ್ಚು ಪಟ್ಟಿ.**- ಬಹು-ರಾಜ್ಯ ಸಹಕಾರಿ ಸೊಸೈಟಿಯ ಪ್ರತಿಯೊಂದು ವಾರ್ಷಿಕ ಸಾಮಾನ್ಯ ಸಭೆಯಲ್ಲಿ, ಮಂಡಲಿಯು,-

(ಎ) ಪ್ರತಿಯೊಂದು ಸಹಕಾರಿ ವರ್ಷದ ಕೊನೆಯಲ್ಲಿ ಇದ್ದಂತೆ ಜಮಾ-ಖರ್ಚು ಪಟ್ಟಿಯನ್ನು; ಮತ್ತು

(ಬಿ) ಆ ವರ್ಷದ ಲಾಭ ಮತ್ತು ನಷ್ಟದ ಲೆಕ್ಕವನ್ನು

– ಬಹು–ರಾಜ್ಯ ಸಹಕಾರಿ ಸೊಸೈಟಿಯ ಮುಂದೆ ಮಂಡಿಸತಕ್ಕದ್ದು.

**110. ಸಾಮಾನ್ಯ ಸಭೆಗಳ ಮತ್ತು ಮಂಡಳಿಯ ಮತ್ತು ಇತರ ಸಭೆಗಳ ವ್ಯವಹರಣೆಗಳ ನಡವಳಿಗಳು.–** (1) ಪ್ರತಿಯೊಂದು ಬಹು–ರಾಜ್ಯ ಸಹಕಾರಿ ಸೊಸೈಟಿಯು ಪ್ರತಿಯೊಂದು ಸಾಮಾನ್ಯ ಸಭೆಯ ಎಲ್ಲ ವ್ಯವಹರಣೆಗಳ ಮತ್ತು ಅದರ ಮಂಡಲಿಯ ಅಥವಾ ಮಂಡಲಿಯ ಪ್ರತಿಯೊಂದು ಸಮಿತಿಯ ಪ್ರತಿಯೊಂದು ಸಭೆಯ ವ್ಯವಹರಣೆಗಳ ನಡವಳಿಗಳನ್ನು, ಆ ಉದ್ದೇಶಕ್ಕಾಗಿ ಇಡಲಾದ ಪುಸ್ತಕಗಳಲ್ಲಿ ಕ್ರಮಾನುಗತವಾಗಿ ಸಂಖ್ಯೆ ಹಾಕಲಾದ ಅವುಗಳ ಪುಟಗಳೊಂದಿಗೆ ಸಂಬಂಧಪಟ್ಟ ಅಂಥ ಪ್ರತಿಯೊಂದು ಸಭೆಯ ಮುಕ್ತಾಯದ ಮೂವತ್ತು ದಿವಸಗಳೊಳಗೆ ಅದರ ನಮೂದುಗಳನ್ನು ಮಾಡಿ ಅವುಗಳನ್ನು ಇಡುವಂತೆ ಮಾಡತಕ್ಕದ್ದು.

(2) ಅಂಥ ಪ್ರತಿಯೊಂದು ಪುಸ್ತಕದ ಪ್ರತಿಯೊಂದು ಪುಟದಲ್ಲಿ ಚಿಕ್ಕ ಸಹಿ ಅಥವಾ ಸಹಿ ಮಾಡತಕ್ಕದ್ದು ಮತ್ತು ಅಂಥ ಪುಸ್ತಕಗಳಲ್ಲಿ, ಪ್ರತಿಯೊಂದು ಸಭೆಯ ವ್ಯವಹರಣೆಗಳ ದಾಖಲೆಯ ಕೊನೆಯ ಪುಟದಲ್ಲಿ,–

(ಎ) ಮಂಡಲಿಯ ಅಥವಾ ಅದರ ಸಮಿತಿಯ ಸಭೆಯ ವ್ಯವಹರಣೆಗಳ ನಡವಳಿಗಳ ಸಂದರ್ಭದಲ್ಲಿ, ಸದರಿ ಸಭೆಯ ಅಧ್ಯಕ್ಷನು ಅಥವಾ ಮುಂದೆ ಬರುವ ಸಭೆಯ ಅಧ್ಯಕ್ಷನು;

(ಬಿ) ಸಾಮಾನ್ಯ ಸಭೆಯ ವ್ಯವಹರಣೆಗಳ ನಡವಳಿಗಳ ಸಂದರ್ಭದಲ್ಲಿ, ಮೇಲೆ ಹೇಳಿದ ಮೂವತ್ತು ದಿವಸಗಳ ಅವಧಿಯೊಳಗೆ ಅದೇ ಸಭೆಯ ಅಧ್ಯಕ್ಷನು ಅಥವಾ ಆ ಅವಧಿಯೊಳಗೆ ಆ ಅಧ್ಯಕ್ಷನ ಮರಣ ಅಥವಾ ಅಸಮರ್ಥತೆಯ ಸಂದರ್ಭದಲ್ಲಿ, ಈ ಉದ್ದೇಶಕ್ಕಾಗಿ ಮಂಡಲಿಯು ಯಥೋಚಿತವಾಗಿ ಅಧಿಕೃತಗೊಳಿಸಿದ ಮಂಡಲಿಯ ಸದಸ್ಯನು

– ದಿನಾಂಕ ಸಹಿತ ಸಹಿ ಮಾಡತಕ್ಕದ್ದು.

(3) ಯಾವುದೇ ಸಂದರ್ಭದಲ್ಲಿ, ಸಭೆಯ ವ್ಯವಹರಣೆಗಳ ನಡವಳಿಗಳನ್ನು ಮೇಲೆ ಹೇಳಿದಂತೆ ಅಂಥ ಯಾವುವೇ ಪುಸ್ತಕಗಳಿಗೆ ಅಂಟಿಸುವುದರ ಮೂಲಕವಾಗಲೀ ಅಥವಾ ಅನ್ಯಥಾ ಆಗಲಿ ಲಗತ್ತಿಸತಕ್ಕದ್ದಲ್ಲ.

(4) ಪ್ರತಿಯೊಂದು ಸಭೆಯ ನಡವಳಿಗಳು ಅಲ್ಲಿ ನಡೆದ ವ್ಯವಹರಣೆಗಳ ಸ್ಪಷ್ಟವಾದ ಮತ್ತು ಸರಿಯಾದ ಸಾರಾಂಶವನ್ನು ಒಳಗೊಂಡಿರತಕ್ಕದ್ದು.

(5) ಮೇಲೆ ಹೇಳಿದ ಯಾವುವೇ ಸಭೆಗಳಲ್ಲಿ ಮಾಡಲಾದ ಅಧಿಕಾರಿಗಳ ಎಲ್ಲಾ ನೇಮಕಗಳನ್ನು ಸಭೆಯ ನಡವಳಿಗಳಲ್ಲಿ ಸೇರಿಸತಕ್ಕದ್ದು.

(6) ಮಂಡಲಿಯ ಅಥವಾ ಮಂಡಲಿಯ ಸಮಿತಿಯ ಸಭೆಯ ಸಂದರ್ಭದಲ್ಲಿ, ನಡವಳಿಗಳು,–

(ಎ) ಸಭೆಯಲ್ಲಿ ಹಾಜರಿರುವ ಮಂಡಲಿಯ ಸದಸ್ಯರ ಹೆಸರುಗಳನ್ನು, ಮತ್ತು

(ಬಿ) ಸಭೆಯಲ್ಲಿ ಅಂಗೀಕರಿಸಿದ ಪ್ರತಿಯೊಂದು ಠರಾವಿನ ಸಂದರ್ಭದಲ್ಲಿ, ಮಂಡಲಿಯ ಯಾರಾದರೂ ಸದಸ್ಯರು ಠರಾವಿಗೆ ಅಸಮ್ಮತಿಸಿದ್ದರೆ ಅಥವಾ ಸಹಮತಿಸದಿದ್ದರೆ, ಆ ಸದಸ್ಯರ ಹೆಸರುಗಳನ್ನು

– ಸಹ ಒಳಗೊಂಡಿರತಕ್ಕದ್ದು.

(7) (1) ರಿಂದ (6)ರ ವರೆಗಿನ ಉಪಪ್ರಕರಣಗಳಲ್ಲಿ ಒಳಗೊಂಡಿರುವುದು ಯಾವುದೂ, ಸಭೆಯ ಅಧ್ಯಕ್ಷನ ಅಭಿಪ್ರಾಯದಲ್ಲಿ ಯಾವ ವಿಷಯವು,–

(ಎ) ಯಾರೇ ವ್ಯಕ್ತಿಗೆ ಮಾನಹಾನಿಯುಂಟು ಮಾಡುತ್ತದೆಯೋ ಅಥವಾ ಮಾನಹಾನಿಯುಂಟು ಮಾಡಬಹುದಾಗಿದೆ ಎಂದು ಯುಕ್ತವಾಗಿ ಪರಿಗಣಿಸಲಾಗಿದೆಯೇ;

(ಬಿ) ವ್ಯವಹರಣೆಗಳಿಗೆ ಅಸಂಬದ್ಧವಾಗಿದೆಯೇ ಅಥವಾ ಮಹತ್ವದ್ದಲ್ಲದ್ದಾಗಿದೆಯೇ; ಅಥವಾ

(ಸಿ) ಬಹು–ರಾಜ್ಯ ಸಹಕಾರಿ ಸೊಸೈಟಿಯ ಹಿತಾಸಕ್ತಿಗಳಿಗೆ ಬಾಧಕವಾಗಿದೆಯೇ

– ಆ ಯಾವುದೇ ವಿಷಯವನ್ನು ಅಂಥ ಯಾವುವೇ ನಡವಳಿಗಳಲ್ಲಿ ಸೇರಿಸಲು ಅಗತ್ಯಪಡಿಸುತ್ತದೆಂದು ಭಾವಿಸತಕ್ಕದ್ದಲ್ಲ.

**ವಿವರಣೆ:–** ಅಧ್ಯಕ್ಷನು ಈ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಆಧಾರಗಳ ಮೇರೆಗೆ ನಡವಳಿಗಳಲ್ಲಿ ಯಾವುದೇ ವಿಷಯವನ್ನು ಸೇರಿಸುವುದಕ್ಕೆ ಅಥವಾ ಸೇರಿಸದಿರುವುದಕ್ಕೆ ಸಂಬಂಧಿಸಿದಂತೆ ಸಂಪೂರ್ಣ ವಿವೇಚನೆಯನ್ನು ಚಲಾಯಿಸತಕ್ಕದ್ದು.

**111. ನಡವಳಿಗಳು ಸಾಕ್ಷ್ಯವಾಗಿರತಕ್ಕದ್ದು.–** 110ನೇ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಇಡಲಾದ ಸಭೆಗಳ ನಡವಳಿಗಳು ಅದರಲ್ಲಿ ದಾಖಲಿಸಿದ ವ್ಯವಹರಣೆಗಳ ಸಾಕ್ಷ್ಯವಾಗಿರತಕ್ಕದ್ದು.

**112. ಕ್ರಮಬದ್ಧವಾಗಿ ಬರೆದ ಮತ್ತು ಸಹಿ ಮಾಡಿದ ನಡವಳಿಗಳ ಸಂದರ್ಭದಲ್ಲಿ ಪೂರ್ವಭಾವನೆ ಮಾಡುವುದು.–** ಬಹು–ರಾಜ್ಯ ಸಹಕಾರಿ ಸೊಸೈಟಿಯ ಯಾವುದೇ ಸಾಮಾನ್ಯ ಸಭೆಯ ಅಥವಾ ಅದರ ಮಂಡಲಿಯ ಅಥವಾ ಮಂಡಲಿಯ ಸಮಿತಿಯ ಯಾವುದೇ ಸಭೆಯ ವ್ಯವಹರಣೆಗಳ ನಡವಳಿಗಳನ್ನು 110ನೇ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಇಟ್ಟುಕೊಂಡಿರುವಲ್ಲಿ, ಆಗ, ತದ್ವಿರುದ್ಧವಾದುದು ರುಜುವಾತು ಆಗುವವರೆಗೆ ಸಭೆಯನ್ನು ಕ್ರಮಬದ್ಧವಾಗಿ ಕರೆಯಲಾಗಿದೆಯೆಂದು ಮತ್ತು ನಡೆಸಲಾಗಿದೆಯೆಂದು ಮತ್ತು ಅಲ್ಲಿ ನಡೆದ ಎಲ್ಲ ವ್ಯವಹರಣೆಗಳನ್ನು ಕ್ರಮಬದ್ಧವಾಗಿ ನಡೆಸಲಾಗಿದೆಯೆಂದು ಭಾವಿಸತಕ್ಕದ್ದು, ಮತ್ತು ವಿಶೇಷವಾಗಿ ಸಭೆಯಲ್ಲಿ ಮಾಡಿದ ನಿರ್ದೇಶಕರ ಅಥವಾ ಸಮಾಪಕರ ಎಲ್ಲ ನೇಮಕಗಳನ್ನು ಸಿಂಧುವೆಂದು ಭಾವಿಸತಕ್ಕದ್ದು.

**113. ಸಾಮಾನ್ಯ ಸಭೆಗಳ ನಡವಳಿ ಪುಸ್ತಕದ ಪರಿಶೀಲನೆ.–** ಬಹು–ರಾಜ್ಯ ಸಹಕಾರಿ ಸೊಸೈಟಿಯ ಯಾವುದೇ ಸಾಮಾನ್ಯ ಸಭೆಯ ವ್ಯವಹರಣೆಗಳ ನಡವಳಿಗಳನ್ನು ಒಳಗೊಂಡಿರುವ ಪುಸ್ತಕಗಳನ್ನು,–

(ಎ) ಆ ಸೊಸೈಟಿಯ ನೋಂದಾಯಿತ ಕಚೇರಿಯಲ್ಲಿ ಇಡತಕ್ಕದ್ದು; ಮತ್ತು

(ಬಿ) ವ್ಯವಹಾರದ ಸಮಯದಲ್ಲಿ, ಆ ಸೊಸೈಟಿಯ ಯಾರೇ ಸದಸ್ಯನ ಪರಿಶೀಲನೆಗೆ ಮುಕ್ತವಾಗಿ ಇರಿಸತಕ್ಕದ್ದು.

**114. ಸಮಾಪಕನು ಲೋಕ ನೌಕರನಾಗಿರುವುದು.–** ಈ ಅಧಿನಿಯಮದ ಉಪಬಂಧಗಳ ಮೇರೆಗೆ ಸಮಾಪಕನಾಗಿ ನೇಮಕಗೊಂಡ ಯಾರೇ ವ್ಯಕ್ತಿಯನ್ನು ಭಾರತ ದಂಡ ಸಂಹಿತೆಯ (1860ರ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರನೆಂದು ಭಾವಿಸತಕ್ಕದ್ದು.

**115. ದಾವೆಗಳ ಸಂದರ್ಭದಲ್ಲಿ ನೋಟೀಸು ಅವಶ್ಯಕ.–** ಬಹು–ರಾಜ್ಯ ಸಹಕಾರಿ ಸೊಸೈಟಿಯ ರಚನೆ, ವ್ಯವಸ್ಥಾಪನೆ ಅಥವಾ ವ್ಯವಹಾರದ ಬಗೆಗಿನ ಯಾವುದೇ ಕೃತ್ಯದ ಸಂಬಂಧದಲ್ಲಿ, ಸೊಸೈಟಿಯ ಅಥವಾ ಅದರ ಯಾರೇ ಅಧಿಕಾರಿಯ ವಿರುದ್ಧ ಯಾವುದೇ ದಾವೆಯನ್ನು, ವ್ಯಾಜ್ಯ ಕಾರಣವನ್ನು, ವಾದಿಯ ಹೆಸರನ್ನು, ವಾಸಸ್ಥಳದ ವರ್ಣನೆ ಮತ್ತು ಸ್ಥಳವನ್ನು ಮತ್ತು ಅವನು ಕ್ಲೇಮು ಮಾಡಿದ ಪರಿಹಾರವನ್ನು ತಿಳಿಸುವ ಲಿಖಿತ ನೋಟೀಸನ್ನು ಕೇಂದ್ರ ರಿಜಿಸ್ಟ್ರಾರನಿಗೆ ನೀಡಿದ ಅಥವಾ ಆತನ ಕಚೇರಿಯಲ್ಲಿ ಇಟ್ಟ ನಂತರ ತೊಂಬತ್ತು ದಿವಸಗಳು ಮುಕ್ತಾಯವಾಗುವವರೆಗೆ ಹೂಡತಕ್ಕದ್ದಲ್ಲ ಮತ್ತು ವಾದ ಪತ್ರವು ಅಂಥ ನೋಟೀಸನ್ನು ಹಾಗೆ ತಲುಪಿಸಲಾಗಿದೆ ಅಥವಾ ಇಡಲಾಗಿದೆ ಎಂಬ ಬಗ್ಗೆ ಹೇಳಿಕೆಯನ್ನು ಒಳಗೊಂಡಿರತಕ್ಕದ್ದು.

**116. ಎರಡನೇ ಅನುಸೂಚಿಯನ್ನು ತಿದ್ದುಪಡಿ ಮಾಡಲು ಅಧಿಕಾರ.–** (1) ಕೇಂದ್ರ ಸರ್ಕಾರವು ಯಾವುದೇ ಬಹು–ರಾಜ್ಯ ಸಹಕಾರಿ ಸೊಸೈಟಿಯನ್ನು ರಾಷ್ಟ್ರೀಯ ಸಹಕಾರಿ ಸೊಸೈಟಿ ಎಂದು ಹೆಸರಿಸತಕ್ಕದ್ದೆಂದು ಅಥವಾ ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ರಾಷ್ಟ್ರೀಯ ಸಹಕಾರಿ ಸೊಸೈಟಿಯನ್ನು ಸದರಿ ಅನುಸೂಚಿಯಿಂದ ತೆಗೆದುಹಾಕತಕ್ಕದ್ದೆಂದು ಮನದಟ್ಟಾದರೆ, ಅದು ಅಧಿಸೂಚನೆಯ ಮೂಲಕ, ಅದರಲ್ಲಿ ಅಂಥ ಬಹು–ರಾಜ್ಯ ಸಹಕಾರಿ ಸೊಸೈಟಿಯನ್ನು ಸೇರಿಸುವ ಸಲುವಾಗಿ ಅಥವಾ ಅಂಥ ರಾಷ್ಟ್ರೀಯ ಸಹಕಾರಿ ಸೊಸೈಟಿಯನ್ನು ಅದರಿಂದ ತೆಗೆಯುವ ಸಲುವಾಗಿ ಸದರಿ ಅನುಸೂಚಿಯನ್ನು ತಿದ್ದುಪಡಿ ಮಾಡಬಹುದು ಮತ್ತು ತದನಂತರ ಸದರಿ ಅನುಸೂಚಿಯನ್ನು ತದನುಸಾರವಾಗಿ ತಿದ್ದುಪಡಿ ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

(2) (1)ನೇ ಉಪ ಪ್ರಕರಣದ ಮೇರೆಗಿನ ಪ್ರತಿಯೊಂದು ಅಧಿಸೂಚನೆಯ ಪ್ರತಿಯನ್ನು, ಅದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

**117. ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯ ಪ್ರತಿಷೇಧ.–** (1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ಯಾವುದೇ ನ್ಯಾಯಾಲಯವು,–

(ಎ) ಬಹು–ರಾಜ್ಯ ಸಹಕಾರಿ ಸೊಸೈಟಿಯ ಅಥವಾ ಅದರ ಉಪ ವಿಧಿಗಳ ಅಥವಾ ಉಪ–ವಿಧಿಗಳ ತಿದ್ದುಪಡಿಯ ನೋಂದಣಿಗೆ ಸಂಬಂಧಪಟ್ಟಂತೆ;

(ಬಿ) ಬಹು–ರಾಜ್ಯ ಸಹಕಾರಿ ಸೊಸೈಟಿಯ ಪರಿಸಮಾಪನ ಮತ್ತು ವಿಸರ್ಜನೆಗೆ ಸಂಬಂಧಪಟ್ಟ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ

– ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

(2) ಬಹು–ರಾಜ್ಯ ಸಹಕಾರಿ ಸೊಸೈಟಿಯನ್ನು ಪರಿಸಮಾಪನಗೊಳಿಸುವಾಗ, ಅಂಥ ಸೊಸೈಟಿಯ ವ್ಯವಹಾರಕ್ಕೆ ಸಂಬಂಧಿಸಿದ ಯಾವುದೇ ದಾವೆಯನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು, ಕೇಂದ್ರ ರಿಜಿಸ್ಟ್ರಾರನು ಅನುಮತಿಸಿದ ಹೊರತು ಮತ್ತು ಅವನು ವಿಧಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟ ಹೊರತು ಸಮಾಪಕನಿಗೆ ಸಂಬಂಧಿಸಿದಂತೆ ಅಥವಾ ಅವನ ವಿರುದ್ಧ ಅಥವಾ ಸೊಸೈಟಿಯ ಅಥವಾ ಅದರ ಯಾರೇ ಸದಸ್ಯನ ವಿರುದ್ಧ ಮುಂದುವರಿಸತಕ್ಕದ್ದಲ್ಲ ಅಥವಾ ಹೂಡತಕ್ಕದ್ದಲ್ಲ;

(3) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ಈ ಅಧಿನಿಯಮದ ಮೇರೆಗೆ ಮಾಡಿದ ತೀರ್ಮಾನವನ್ನು ಅಥವಾ ಆದೇಶವನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

**118. ರಕ್ಷಣೆ.–** ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕಾರ್ಯದ ಸಂಬಂಧದಲ್ಲಿ ಕೇಂದ್ರ ರಿಜಿಸ್ಟ್ರಾರನ ವಿರುದ್ಧ ಅಥವಾ ಅವನಿಗೆ ಅಧೀನವಾಗಿರುವ ಅಥವಾ ಅವನ ಅಧಿಕಾರದ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ಯಾರೇ ವ್ಯಕ್ತಿಯ ವಿರುದ್ಧ ಅಥವಾ ಯಾರೇ ಇತರ ವ್ಯಕ್ತಿಯ ವಿರುದ್ಧ ಹೂಡತಕ್ಕದ್ದಲ್ಲ.

**119. ಶಾಖೆಗಳನ್ನು ತೆರೆಯುವುದು.–** ರಾಜ್ಯದಲ್ಲಿ ಜಾರಿಯಲ್ಲಿರುವ ಸಹಕಾರಿ ಸೊಸೈಟಿಗಳಿಗೆ ಸಂಬಂಧಿಸಿದ ಯಾವುದೇ ಕಾನೂನಿನಲ್ಲಿ ತದ್ವಿರುದ್ಧವಾದುದು ಏನೇ ಒಳಗೊಂಡಿದ್ದರೂ, ಸಹಕಾರೀ ಬ್ಯಾಂಕು ಆಗಿರದ ಬಹು–ರಾಜ್ಯ ಸಹಕಾರಿ ಸೊಸೈಟಿಯು, ಭಾರತದ ಯಾವುದೇ ಸ್ಥಳದಲ್ಲಿ ಶಾಖೆಗಳನ್ನು ಅಥವಾ ವ್ಯವಹಾರದ ಸ್ಥಳಗಳನ್ನು ತೆರೆಯಬಹುದು.

**120. ವಿವರಪಟ್ಟಿಕೆಗಳನ್ನು ಸಲ್ಲಿಸುವುದು.–** ಪ್ರತಿಯೊಂದು ಬಹು–ರಾಜ್ಯ ಸಹಕಾರಿ ಸೊಸೈಟಿಯು ಲೆಕ್ಕದ ವರ್ಷವು ಮುಕ್ತಾಯವಾದ ಆರು ತಿಂಗಳುಗಳೊಳಗೆ ಪ್ರತೀ ವರ್ಷವೂ ಕೇಂದ್ರ ರಿಜಿಸ್ಟ್ರಾರನಿಗೆ ಈ ಮುಂದಿನ ವಿವರಪಟ್ಟಿಕೆಗಳನ್ನು ಸಲ್ಲಿಸತಕ್ಕದ್ದು, ಎಂದರೆ:–

(ಎ) ಕಾರ್ಯ ಚಟುವಟಿಕೆಗಳ ವಾರ್ಷಿಕ ವರದಿ;

(ಬಿ) ಲೆಕ್ಕಪತ್ರಗಳ ಪರಿಶೋಧಿತ ವಿವರಪಟ್ಟಿಕೆಗಳು;

(ಸಿ) ಸರ್ವ ಸದಸ್ಯರ ಸಭೆಯು ಅನುಮೋದಿಸಿದಂತೆ ಹೆಚ್ಚುವರಿ ವಿಲೆಯ ಯೋಜನೆ;

(ಡಿ) ಬಹು–ರಾಜ್ಯ ಸಹಕಾರಿ ಸೊಸೈಟಿಯು ಉಪ ವಿಧಿಗಳಿಗೆ ಮಾಡಿದ ತಿದ್ದುಪಡಿಗಳ ಪಟ್ಟಿ;

(ಇ) ಸರ್ವ ಸದಸ್ಯರ ಸಭೆಯನ್ನು ನಡೆಸುವ ಮತ್ತು ನಡೆಸಬೇಕಾಗಿರುವ ಚುನಾವಣೆಗಳನ್ನು ನಡೆಸುವ ದಿನಾಂಕಕ್ಕೆ ಸಂಬಂಧಿಸಿದ ಘೋಷಣೆ;

(ಎಫ್) ಈ ಅಧಿನಿಯಮದ ಯಾವುದೇ ಉಪಬಂಧಗಳಿಗೆ ಅನುಸಾರವಾಗಿ ಕೇಂದ್ರ ರಿಜಿಸ್ಟ್ರಾರನು ಅಗತ್ಯಪಡಿಸಿದ ಯಾವುದೇ ಇತರ ಮಾಹಿತಿ.

**121. ಕೆಲವು ಅಧಿನಿಯಮಗಳು ಅನ್ವಯವಾಗುವುದಿಲ್ಲ.–** (1) ಕಂಪೆನಿಗಳ ಅಧಿನಿಯಮ, 1956 (1956ರ 1) ಮತ್ತು ಏಕಸ್ವಾಮ್ಯ ಮತ್ತು ನಿರ್ಬಂಧಿತ ವ್ಯಾಪಾರ ಪದ್ಧತಿಗಳ ಅಧಿನಿಯಮ, 1969 (1969ರ 54) ರ ಉಪಬಂಧಗಳು ಬಹು–ರಾಜ್ಯ ಸಹಕಾರಿ ಸೊಸೈಟಿಗಳಿಗೆ ಅನ್ವಯವಾಗತಕ್ಕದ್ದಲ್ಲ.

(2) ಈ ಅಧಿನಿಯಮದ ಉಪಬಂಧಗಳ ಮೇರೆಗೆ ನೋಂದಾಯಿತವಾದ ಅಥವಾ ನೋಂದಾಯಿತವಾಗಿದೆಯೆಂದು ಭಾವಿಸಲಾದ ಬಹು–ರಾಜ್ಯ ಸಹಕಾರಿ ಸೊಸೈಟಿಗಳು ಏಕಸ್ವಾಮ್ಯ ಮತ್ತು ನಿರ್ಬಂಧಿತ ವ್ಯಾಪಾರ ಪದ್ಧತಿಗಳ ಅಧಿನಿಯಮ, 1969 (1969 ರ 54)ರಲ್ಲಿ ಪರಿಭಾಷಿಸಿದ ಏಕಸ್ವಾಮ್ಯ ಮತ್ತು ನಿರ್ಬಂಧಿತ ವ್ಯಾಪಾರ ಪದ್ಧತಿಯಲ್ಲಿ ತೊಡಗತಕ್ಕದ್ದಲ್ಲ.

**122. ನಿರ್ದಿಷ್ಟಪಡಿಸಿದ ಬಹು–ರಾಜ್ಯ ಸಹಕಾರಿ ಸೊಸೈಟಿಗಳಿಗೆ ಸಾರ್ವಜನಿಕ ಹಿತ ದೃಷ್ಟಿಯಿಂದ ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ.–** ಕೇಂದ್ರ ಸರ್ಕಾರಕ್ಕೆ ಸಾರ್ವಜನಿಕ ಹಿತದೃಷ್ಟಿಯಿಂದ

ಅಥವಾ ಕೇಂದ್ರ ಸರ್ಕಾರವು ಅನುಮೋದಿಸಿದ ಅಥವಾ ಕೈಗೊಂಡ ಸಹಕಾರಿ ಉತ್ಪಾದನೆ ಮತ್ತು ಇತರ ಅಭಿವೃದ್ಧಿ ಕಾರ್ಯಕ್ರಮಗಳ ಸೂಕ್ತ ಅನುಷ್ಠಾನವನ್ನು ಖಚಿತಪಡಿಸುವ ಉದ್ದೇಶಕ್ಕಾಗಿ ಅಥವಾ ಸಾಮಾನ್ಯವಾಗಿ ನಿರ್ದಿಷ್ಟಪಡಿಸಿದ ಬಹು-ರಾಜ್ಯ ಸಹಕಾರಿ ಸೊಸೈಟಿಗಳ ವ್ಯವಹಾರದ ಸೂಕ್ತ ನಿರ್ವಹಣೆಯನ್ನು ಖಚಿತಪಡಿಸುವುದಕ್ಕೆ ಅಥವಾ ಅದರ ಸದಸ್ಯರ, ಯಾರೇ ಠೇವಣಿದಾರರ ಅಥವಾ ಸಾಲಕೊಟ್ಟವರ ಹಿತಾಸಕ್ತಿಗಳಿಗೆ ಬಾಧಕವಾಗುವ ರೀತಿಯಲ್ಲಿ ನಡೆಸುವ ಸೊಸೈಟಿಯ ವ್ಯವಹಾರಗಳನ್ನು ತಡೆಗಟ್ಟುವುದಕ್ಕಾಗಿ, ಸಾಮಾನ್ಯವಾಗಿ ನಿರ್ದಿಷ್ಟಪಡಿಸಿದ ಬಹು-ರಾಜ್ಯ ಸಹಕಾರಿ ಸೊಸೈಟಿಗಳ ಯಾವುದೇ ವರ್ಗಕ್ಕೆ ಅಥವಾ ವಿಶೇಷವಾಗಿ ಯಾವುದೇ ನಿರ್ದಿಷ್ಟಪಡಿಸಿದ ಬಹು-ರಾಜ್ಯ ಸಹಕಾರಿ ಸೊಸೈಟಿಗೆ ಅಥವಾ ಸೊಸೈಟಿಗಳಿಗೆ ನಿರ್ದೇಶನಗಳನ್ನು ನೀಡುವುದು ಅಗತ್ಯವೆಂದು ಮನದಟ್ಟಾದರೆ, ಕೇಂದ್ರ ಸರ್ಕಾರವು, ಕಾಲಕಾಲಕ್ಕೆ ಅದಕ್ಕೆ ಅಥವಾ ಅವುಗಳಿಗೆ ನಿರ್ದೇಶನಗಳನ್ನು ನೀಡಬಹುದು ಮತ್ತು ಸಂದರ್ಭಾನುಸಾರ, ಸಂಬಂಧಪಟ್ಟ ಅಂಥ ಎಲ್ಲ ನಿರ್ದಿಷ್ಟಪಡಿಸಿದ ಬಹು-ರಾಜ್ಯ ಸಹಕಾರಿ ಸೊಸೈಟಿ ಅಥವಾ ಸೊಸೈಟಿಗಳು, ಅಂಥ ನಿರ್ದೇಶನಗಳನ್ನು ಪಾಲಿಸಲು ಬದ್ಧವಾಗಿರತಕ್ಕದ್ದು.

**123. ನಿರ್ದಿಷ್ಟಪಡಿಸಿದ ಬಹು-ರಾಜ್ಯ ಸಹಕಾರಿ ಸೊಸೈಟಿಯ ಮಂಡಲಿಯ ರದ್ದತಿ.-** ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಯಾವುದೇ ನಿರ್ದಿಷ್ಟಪಡಿಸಿದ ಬಹು-ರಾಜ್ಯ ಸಹಕಾರಿ ಸೊಸೈಟಿಯ ಮಂಡಲಿಯು, ಸತತವಾಗಿ ತಪ್ಪು ಮಾಡುತ್ತಿದ್ದಲ್ಲಿ ಅಥವಾ ಈ ಅಧಿನಿಯಮದ ಅಥವಾ ನಿಯಮಗಳ ಅಥವಾ ಉಪವಿಧಿಗಳ ಮೂಲಕ ಅದಕ್ಕೆ ವಿಧಿಸಿದ ಕರ್ತವ್ಯಗಳನ್ನು ನಿರ್ವಹಿಸಲು ನಿರ್ಲಕ್ಷಿಸುತ್ತಿದ್ದಲ್ಲಿ ಅಥವಾ ಸೊಸೈಟಿಯ ಅಥವಾ ಅದರ ಸದಸ್ಯರ ಹಿತಾಸಕ್ತಿಗಳಿಗೆ ಬಾಧಕವಾಗುವ ಯಾವುದೇ ಕೃತ್ಯ ಮಾಡಿದಲ್ಲಿ ಅಥವಾ 122ನೇ ಪ್ರಕರಣದ ಮೇರೆಗೆ ಅದಕ್ಕೆ ನೀಡಿದ ಯಾವುವೇ ನಿರ್ದೇಶನಗಳನ್ನು ಪಾಲಿಸಲು ತಪ್ಪಿದ್ದಲ್ಲಿ ಅಥವಾ ವಿಫಲವಾಗಿದ್ದಲ್ಲಿ ಅಥವಾ ಮಂಡಲಿಯ ರಚನೆ ಅಥವಾ ಪ್ರಕಾರ್ಯಗಳಲ್ಲಿ ಇಕ್ಕಟ್ಟಿನ ಸ್ಥಿತಿ ಉಂಟಾಗಿರುವಲ್ಲಿ, ಕೇಂದ್ರ ಸರ್ಕಾರವು, ಮಂಡಲಿಗೆ ತನ್ನ ಆಕ್ಷೇಪಣೆಗಳು ಯಾವುವಾದರೂ ಇದ್ದರೆ, ಅವುಗಳನ್ನು ಸಲ್ಲಿಸಲು ಅವಕಾಶವನ್ನು ನೀಡಿದ ನಂತರ ಮತ್ತು ಯಾವುದಾದರೂ ಆಕ್ಷೇಪಣೆಗಳನ್ನು ಸ್ವೀಕರಿಸಿದಲ್ಲಿ, ಅವುಗಳನ್ನು ಪರಿಗಣಿಸಿದ ನಂತರ, ಲಿಖಿತ ಆದೇಶದ ಮೂಲಕ, ಮಂಡಲಿಯನ್ನು ರದ್ದುಗೊಳಿಸಬಹುದು ಮತ್ತು ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಆರು ತಿಂಗಳುಗಳನ್ನು ಮೀರದಂಥ ಅವಧಿಗೆ ಸೊಸೈಟಿಯ ವ್ಯವಹಾರಗಳನ್ನು ನಿರ್ವಹಿಸುವುದಕ್ಕೆ ಸೊಸೈಟಿಯ ಸದಸ್ಯರಲ್ಲದ ಒಬ್ಬ ಅಥವಾ ಹೆಚ್ಚಿನ ಆಡಳಿತಗಾರರನ್ನು ನೇಮಕ ಮಾಡಬಹುದು ಮತ್ತು ಆ ಅವಧಿಯನ್ನು, ಕೇಂದ್ರ ಸರ್ಕಾರದ ವಿವೇಚನಾನುಸಾರ ಒಟ್ಟು ಅವಧಿಯು ಒಂದು ವರ್ಷವನ್ನು ಮೀರದಂತೆ ಕಾಲಕಾಲಕ್ಕೆ ವಿಸ್ತರಿಸಬಹುದು:

ಪರಂತು, ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ, ಈ ಉಪ ಪ್ರಕರಣದ ಉಪಬಂಧಗಳು "ಒಂದು ವರ್ಷ" ಎಂಬ ಪದಗಳಿಗೆ ಬದಲಾಗಿ "ಎರಡು ವರ್ಷಗಳು" ಎಂಬ ಪದಗಳನ್ನು ಸೇರಿಸಿದ್ದಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು.

(2) ಕೇಂದ್ರ ಸರ್ಕಾರವು, ತಾನು ಸೂಕ್ತವೆಂದು ಭಾವಿಸಬಹುದಾದಂಥ ಸಂಭಾವನೆಯನ್ನು ಆಡಳಿತಗಾರರಿಗೆ ನಿಗದಿಪಡಿಸಬಹುದು ಮತ್ತು ಸಂಭಾವನೆಯನ್ನು ನಿರ್ದಿಷ್ಟಪಡಿಸಿದ ಬಹು-ರಾಜ್ಯ ಸಹಕಾರಿ ಸೊಸೈಟಿಯು ನಿಧಿಯಿಂದ ಸಂದಾಯ ಮಾಡತಕ್ಕದ್ದು.

(3) ಆಡಳಿತಗಾರನು ಕೇಂದ್ರ ಸರ್ಕಾರದ ನಿಯಂತ್ರಣಕ್ಕೆ ಮತ್ತು ಕಾಲಕಾಲಕ್ಕೆ ಅದು ನೀಡಬಹುದಾದಂಥ ಸೂಚನೆಗಳಿಗೆ ಒಳಪಟ್ಟು, ಮಂಡಲಿಯ ಅಥವಾ ನಿರ್ದಿಷ್ಟಪಡಿಸಿದ ಬಹು-ರಾಜ್ಯ ಸಹಕಾರಿ ಸೊಸೈಟಿಯ ಯಾರೇ

ಅಧಿಕಾರಿಯ ಎಲ್ಲ ಅಥವಾ ಯಾವುದೇ ಪ್ರಕಾರ್ಯಗಳನ್ನು ಚಲಾಯಿಸುವುದಕ್ಕೆ ಮತ್ತು ಸೊಸೈಟಿಯ ಹಿತಾಸಕ್ತಿಗಳಿಗೆ ಅವಶ್ಯವೆನಿಸಬಹುದಾದಂಥ ಎಲ್ಲ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಅಧಿಕಾರವನ್ನು ಹೊಂದಿರತಕ್ಕದ್ದು.

(4) (5)ನೇ ಉಪಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ಆಡಳಿತಗಾರನು, ತನ್ನ ಪದಾವಧಿಯ ಮುಕ್ತಾಯಕ್ಕೆ ಮುಂಚೆ, ನಿರ್ದಿಷ್ಟಪಡಿಸಿದ ಬಹು-ರಾಜ್ಯ ಸಹಕಾರಿ ಸೊಸೈಟಿಯ ಉಪವಿಧಿಗಳಿಗೆ ಅನುಸಾರವಾಗಿ ಹೊಸ ಮಂಡಲಿಯನ್ನು ರಚಿಸುವುದಕ್ಕೆ ವ್ಯವಸ್ಥೆ ಮಾಡತಕ್ಕದ್ದು.

(5) ಆಡಳಿತಗಾರನು ಪದದಲ್ಲಿರುವ ಅವಧಿಯ ಯಾವುದೇ ಕಾಲದಲ್ಲಿ, ಕೇಂದ್ರ ಸರ್ಕಾರವು ಅಂಥ ಸೊಸೈಟಿಯ ಉಪವಿಧಿಗಳಿಗನುಸಾರವಾಗಿ ಅಂಥ ನಿರ್ದಿಷ್ಟಪಡಿಸಿದ ಬಹು-ರಾಜ್ಯ ಸಹಕಾರಿ ಸೊಸೈಟಿಗೆ ಹೊಸ ಮಂಡಲಿಯ ರಚನೆಗೆ ವ್ಯವಸ್ಥೆ ಮಾಡುವುದು ಅವಶ್ಯವೆಂದು ಅಥವಾ ವಿಹಿತವೆಂದು ಪರಿಗಣಿಸಿದರೆ, ಅದು, ಅದಕ್ಕೆ ಕಾರಣಗಳನ್ನು ನೀಡಿ, ಹೊಸ ಮಂಡಲಿಯನ್ನು ರಚಿಸುವುದಕ್ಕೆ ವ್ಯವಸ್ಥೆ ಮಾಡುವಂತೆ ಆಡಳಿತಗಾರನಿಗೆ ಲಿಖಿತ ಆದೇಶದ ಮೂಲಕ ನಿರ್ದೇಶನ ನೀಡಬಹುದು ಮತ್ತು ಅಂಥ ಮಂಡಲಿಯು ರಚನೆಯಾದ ಕೂಡಲೇ ಆಡಳಿತಗಾರನು ಹೊಸದಾಗಿ ರಚಿತವಾದ ಆ ಮಂಡಲಿಗೆ ಅಂಥ ಸೊಸೈಟಿಯ ವ್ಯವಸ್ಥಾಪನೆಯನ್ನು ಹಸ್ತಾಂತರಿಸತಕ್ಕದ್ದು ಮತ್ತು ಅವನು ಕಾರ್ಯನಿರ್ವಹಿಸುವುದು ನಿಂತು ಹೋಗತಕ್ಕದ್ದು.

(6) ನಿರ್ದಿಷ್ಟಪಡಿಸಿದ ಬಹು-ರಾಜ್ಯ ಸಹಕಾರಿ ಸೊಸೈಟಿಯ ಯಾವುದೇ ಹಣಕಾಸು ಸಂಸ್ಥೆಗೆ ಋಣಿಯಾಗಿದ್ದಲ್ಲಿ, ಕೇಂದ್ರ ಸರ್ಕಾರವು, ಆ ಸೊಸೈಟಿಯ ಸಂಬಂಧದಲ್ಲಿ (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಕ್ರಮವನ್ನು ಕೈಗೊಳ್ಳುವುದಕ್ಕೆ ಮುಂಚೆ, ಹಣಕಾಸು ಸಂಸ್ಥೆಯ ಜೊತೆ ಸಮಾಲೋಚಿಸತಕ್ಕದ್ದು.

**ವಿವರಣೆ:–** 122 ಮತ್ತು 123ನೇ ಪ್ರಕರಣಗಳ ಉದ್ದೇಶಗಳಿಗಾಗಿ, "ನಿರ್ದಿಷ್ಟಪಡಿಸಿದ ಬಹು-ರಾಜ್ಯ ಸಹಕಾರಿ ಸೊಸೈಟಿ" ಎಂದರೆ ಕೇಂದ್ರ ಸರ್ಕಾರವು ಯಾವ ಬಹು-ರಾಜ್ಯ ಸಹಕಾರಿ ಸೊಸೈಟಿಯಲ್ಲಿ ಸಂದಾಯಿತ ಷೇರು ಬಂಡವಾಳದಲ್ಲಿ ಅಥವಾ ಒಟ್ಟು ಷೇರುಗಳಲ್ಲಿ ಶೇಕಡಾ ಐವತ್ತೊಂದಕ್ಕಿಂತ ಕಡಿಮೆಯಿಲ್ಲದಂತೆ ಷೇರುಗಳನ್ನು ಹೊಂದಿರುವುದೋ ಆ ಯಾವುದೇ ಬಹು-ರಾಜ್ಯ ಸಹಕಾರಿ ಸೊಸೈಟಿ ಎಂದು ಅರ್ಥ.

**124. ನಿಯಮಗಳನ್ನು ರಚಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳಿಗೆ ಅಂಥ ನಿಯಮಗಳಲ್ಲಿ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) ಬಹು-ರಾಜ್ಯ ಸಹಕಾರಿ ಸೊಸೈಟಿಯ ನೋಂದಣಿಗಾಗಿ 6ನೇ ಪ್ರಕರಣದ ಮೇರೆಗೆ ಅರ್ಜಿಗಳನ್ನು ಸಲ್ಲಿಸಲು ಬಳಸಬೇಕಾದ ನಮೂನೆ, ನೀಡಬೇಕಾದ ವಿವರಗಳು ಮತ್ತು ಪಾಲಿಸಬೇಕಾದ ಷರತ್ತುಗಳು ಮತ್ತು ಅಂಥ ಅರ್ಜಿಗಳ ಸಂಬಂಧದಲ್ಲಿ ಕಾರ್ಯವಿಧಾನ;

(ಬಿ) ಯಾವ ವಿಷಯಗಳಿಗೆ ಸಂಬಂಧಿಸಿದಂತೆ ಬಹು-ರಾಜ್ಯ ಸಹಕಾರಿ ಸೊಸೈಟಿಯು 10ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಉಪವಿಧಿಗಳನ್ನು ರಚಿಸಬಹುದೋ ಆ ವಿಷಯಗಳು;

(ಸಿ) ಉಪವಿಧಿಗಳ ಯಾವುದೇ ತಿದ್ದುಪಡಿಯನ್ನು ನೋಂದಣಿ ಮಾಡಲು ನಿರಾಕರಿಸಿರುವ ಆದೇಶವನ್ನು 11ನೇ ಪ್ರಕರಣದ (9)ನೇ ಉಪ-ಪ್ರಕರಣದ ಮೇರೆಗೆ ಯಾವ ರೀತಿಯಲ್ಲಿ ತಿಳಿಸತಕ್ಕದ್ದೋ ಆ ರೀತಿ;

(ಡಿ) 14ನೇ ಪ್ರಕರಣದ ಮೇರೆಗೆ ಬಹು–ರಾಜ್ಯ ಸಹಕಾರಿ ಸೊಸೈಟಿಯು ಯಾವ ರೀತಿಯಲ್ಲಿ ವ್ಯವಹಾರದ ಪ್ರಮುಖ ಸ್ಥಳವನ್ನು ಮತ್ತು ನೋಂದಾಯಿತ ವಿಳಾಸವನ್ನು ಹೊಂದಿರಬೇಕೋ ಆ ರೀತಿ;

(ಇ) 16ನೇ ಪ್ರಕರಣದ ಮೇರೆಗೆ ಬಹು–ರಾಜ್ಯ ಸಹಕಾರಿ ಸೊಸೈಟಿಯು ಹೊಣೆಗಾರಿಕೆಯ ವ್ಯಾಪ್ತಿಯಲ್ಲಿ ಬದಲಾವಣೆ ಮಾಡಲು ಕಾರ್ಯವಿಧಾನ ಮತ್ತು ಷರತ್ತುಗಳು;

(ಎಫ್) ಉಪವಿಧಿಗಳ ಯಾವುದೇ ತಿದ್ದುಪಡಿಯನ್ನು ನೋಂದಣಿ ಮಾಡಲು ನಿರಾಕರಿಸಿರುವ ಆದೇಶವನ್ನು 22ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಯಾವ ರೀತಿಯಲ್ಲಿ ತಿಳಿಸತಕ್ಕದ್ದೋ ಆ ರೀತಿ;

(ಜಿ) 23ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಸಹಕಾರಿ ಸೊಸೈಟಿಗಳ ಮಹಾ ಮಂಡಲದ ವರ್ಗೀಕರಣ ಮತ್ತು ಅದಕ್ಕೆ ಅನ್ವಯವಾಗುವ ಇತರ ನಿಬಂಧನೆಗಳು ಮತ್ತು ಷರತ್ತುಗಳು;

(ಹೆಚ್) 33ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಸದಸ್ಯನನ್ನು ಹೊರತುಪಡಿಸಿ, ಇತರ ಸದಸ್ಯರು ಸೊಸೈಟಿಯ ಷೇರು ಬಂಡವಾಳವನ್ನು ಹೊಂದಿರುವುದಕ್ಕೆ ನಿರ್ಬಂಧ;

(ಐ) 38ನೇ ಪ್ರಕರಣದ (1)ನೇ ಉಪಪ್ರಕರಣದ ಪರಂತುಕದ ಮೇರೆಗೆ ಸರ್ವ ಸದಸ್ಯರನ್ನು ಪ್ರತಿನಿಧಿಸುವ ಸಣ್ಣ ನಿಕಾಯದ ರಚನೆ ಮತ್ತು ಅಧಿಕಾರಗಳು;

(ಜೆ) 39ನೇ ಪ್ರಕರಣದ ಮೇರೆಗೆ ಯಾವ ಅವಧಿಯೊಳಗೆ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಕರೆಯಬೇಕೋ ಆ ಅವಧಿ ಮತ್ತು ಅಂಥ ಸಭೆಗಳ ಕಾರ್ಯವಿಧಾನ ಮತ್ತು ಅಂಥ ಸಭೆಯು ಚಲಾಯಿಸಬೇಕಾದ ಅಧಿಕಾರಗಳು;

(ಕೆ) 45ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ರಹಸ್ಯ ಮತದಾನದ ಮೂಲಕ ಮಂಡಲಿಯ ಸದಸ್ಯರ ಚುನಾವಣೆ;

(ಎಲ್) 48ನೇ ಪ್ರಕರಣದ (1)ನೇ ಉಪಪ್ರಕರಣದ ಎರಡನೇ ಪರಂತುಕದ ಮೇರೆಗೆ ಸದಸ್ಯರ ನಾಮನಿರ್ದೇಶನ;

(ಎಂ) 49ನೇ ಪ್ರಕರಣದ ಮೇರೆಗೆ ಮಂಡಲಿಯು, ಸಂದರ್ಭಾನುಸಾರ, ಕೈಗೊಳ್ಳಬಹುದಾದ ಅಥವಾ ಮಾಡಿದ ಹೆಚ್ಚುವರಿ ಕ್ರಮಗಳು ಮತ್ತು ಕಾರ್ಯಗಳು;

(ಎನ್) 51ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಮುಖ್ಯ ಕಾರ್ಯನಿರ್ವಾಹಕನಿಗೆ ಸಂದಾಯವಾಗಬೇಕಾದ ಸಂಬಳ ಮತ್ತು ಭತ್ಯೆಗಳು ಮತ್ತು ಇತರ ನಿಬಂಧನೆಗಳು ಮತ್ತು ಷರತ್ತುಗಳು;

(ಓ) 53ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವ ಷರತ್ತುಗಳಿಗೆ ಒಳಪಟ್ಟು ಕಾರ್ಯ ನಿರ್ವಾಹಕ ಸಮಿತಿಯನ್ನು ಮತ್ತು ಇತರ ಸಮಿತಿಗಳನ್ನು ಅಥವಾ ಉಪ ಸಮಿತಿಗಳನ್ನು ಮಂಡಲಿಯು ರಚಿಸಬಹುದೋ ಆ ಷರತ್ತುಗಳು;

(ಪಿ) 58ನೇ ಪ್ರಕರಣದ ಮೇರೆಗೆ ಬಹು-ರಾಜ್ಯ ಸಹಕಾರಿ ಸೊಸೈಟಿಗಳ ಪುಸ್ತಕಗಳಲ್ಲಿನ ನಮೂದುಗಳ ಪ್ರತಿಗಳನ್ನು ಯಾವ ವ್ಯಕ್ತಿಯು ಮತ್ತು ಯಾವ ನಮೂನೆಯಲ್ಲಿ ಪ್ರಮಾಣೀಕರಿಸಬಹುದೋ ಆ ವ್ಯಕ್ತಿಗಳು ಮತ್ತು ಆ ನಮೂನೆ ಮತ್ತು ಅಂಥ ಪ್ರತಿಗಳ ಸರಬರಾಜಿಗೆ ವಿಧಿಸಬೇಕಾದ ಶುಲ್ಕಗಳು;

(ಕ್ಯೂ) 61ನೇ ಪ್ರಕರಣದ (ಜಿ) ಖಂಡದ ಮೇರೆಗೆ ಕೆಲವು ನಿಬಂಧನೆಗಳ ಮತ್ತು ಷರತ್ತುಗಳ ಮೇರೆಗೆ ಬಹು-ರಾಜ್ಯ ಸಹಕಾರಿ ಸೊಸೈಟಿಗಳಿಗೆ ನೆರವು ಒದಗಿಸುವುದು;

(ಆರ್) 63ನೇ ಪ್ರಕರಣದ ಮೇರೆಗೆ ಬಹು-ರಾಜ್ಯ ಸಹಕಾರಿ ಸೊಸೈಟಿಯ ಸದಸ್ಯರಿಗೆ ಯಾವ ಷರತ್ತುಗಳ ಮೇರೆಗೆ ಲಾಭಗಳನ್ನು ಹಂಚಿಕೆ ಮಾಡಬಹುದೋ ಆ ಷರತ್ತುಗಳು ಮತ್ತು ಬಹು-ರಾಜ್ಯ ಸಹಕಾರಿ ಸೊಸೈಟಿಗಳು ಸಂದಾಯ ಮಾಡಬಹುದಾದ ಲಾಭಾಂಶದ ಗರಿಷ್ಠ ದರ;

(ಎಸ್) 69ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವಂತಿಗೆ ಭವಿಷ್ಯ ನಿಧಿಯ ಸ್ಥಾಪನೆ;

(ಟಿ) 90ನೇ ಪ್ರಕರಣದ (2)ನೇ ಉಪಪ್ರಕರಣದ (ಕೆ) ಖಂಡದ ಮೇರೆಗೆ ಹೆಚ್ಚುವರಿಯನ್ನು ವಿಲೆ ಮಾಡುವ ರೀತಿ;

(ಯು) 91ನೇ ಪ್ರಕರಣದ (ಬಿ) ಖಂಡದ ಮೇರೆಗೆ ಕೇಂದ್ರ ಸರ್ಕಾರದ ಪೂರ್ವ ಮಂಜೂರಾತಿಯನ್ನು ಪಡೆದು ಕೇಂದ್ರ ರಿಜಿಸ್ಟ್ರಾರನು ಯಾವ ರೀತಿಯಲ್ಲಿ ಹೆಚ್ಚುವರಿ ಆಸ್ತಿಗಳನ್ನು ವಿಭಾಗಿಸತಕ್ಕದ್ದೋ ಆ ರೀತಿ;

(ವಿ) 99ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಬೇಕಾದ ಅಪೀಲು ಪ್ರಾಧಿಕಾರ;

(ಡಬ್ಲ್ಯೂ) ರಾಜ್ಯಗಳ ಪುನರ್ ರಚನೆಯ ಪರಿಣಾಮದಿಂದ ಬಹು-ರಾಜ್ಯ ಸಹಕಾರಿ ಸೊಸೈಟಿಗಳಾಗಿರುವ ಸೊಸೈಟಿಗಳ ಪುನರ್ ರಚನೆಗಾಗಿ ಮತ್ತು ಪುನರ್ ಸಂಘಟನೆಗಾಗಿ 103ನೇ ಪ್ರಕರಣದ ಮೇರೆಗಿನ ಕಾರ್ಯವಿಧಾನ;

(ಎಕ್ಸ್) 107ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಫೀಜುಗಳನ್ನು ಸಂದಾಯ ಮಾಡಿದ ನಂತರ ಸೊಸೈಟಿಯ ದಾಖಲೆಗಳ ಪರಿಶೀಲನೆ;

(ವೈ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ

ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿ ಯಾಗಿರತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**125. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಯನ್ನು ನಿವಾರಿಸುವುದಕ್ಕೆ ಅವಶ್ಯವೆಂದು ಕಂಡು ಬರುವ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ಮಾಡಬಹುದು:

ಪರಂತು, ಯಾವುದೇ ಆದೇಶವನ್ನು ಈ ಅಧಿನಿಯಮದ ಪ್ರಾರಂಭದಿಂದ ಎರಡು ವರ್ಷ ಮುಕ್ತಾಯವಾದ ನಂತರ, ಈ ಪ್ರಕರಣದ ಮೇರೆಗೆ ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**126. ನಿರಸನ ಮತ್ತು ಉಳಿಸುವಿಕೆ.–** (1) ಬಹು–ರಾಜ್ಯ ಸಹಕಾರಿ ಸೊಸೈಟಿಗಳ ಅಧಿನಿಯಮ 1984 (1984ರ 51) ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ನಿರಸನಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ 10) ರಲ್ಲಿ ಒಳಗೊಂಡಿರುವ ಉಪಬಂಧಗಳಿಗೆ ಬಾಧಕವಾಗದಂತೆ ಬಹು–ರಾಜ್ಯ ಸಹಕಾರಿ ಸೊಸೈಟಿಗಳ ಅಧಿನಿಯಮ, 1984 (1984ರ 51)ರ ಮೇರೆಗೆ ರಚಿಸಿದ, ಹೊರಡಿಸಿದ, ನೀಡಿದ ಅಥವಾ ಮಾಡಿದ ಯಾವುದೇ ಅಧಿಸೂಚನೆಯು, ನಿಯಮವು, ಆದೇಶವು, ಅಗತ್ಯತೆಯು, ನೋಂದಣಿಯು, ಪ್ರಮಾಣ ಪತ್ರವು, ನೋಟೀಸು, ತೀರ್ಮಾನವು, ನಿರ್ದೇಶನವು, ಅನುಮೋದನೆಯು, ಅಧಿಕೃತಗೊಳಿಸಿರುವುದು, ಸಮ್ಮತಿಯು, ಅರ್ಜಿಯು, ಕೋರಿಕೆ ಅಥವಾ ಕಾರ್ಯವು ಈ ಅಧಿನಿಯಮದ ಪ್ರಾರಂಭದಲ್ಲಿ ಜಾರಿಯಲ್ಲಿದ್ದರೆ, ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ರಚಿಸಿದ್ದರೆ, ಹೊರಡಿಸಿದ್ದರೆ, ನೀಡಿದ್ದರೆ ಅಥವಾ ಮಾಡಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು.

(3) ಸಹಕಾರಿ ಸೊಸೈಟಿಗಳ ಅಧಿನಿಯಮ, 1912 (1912ರ 2)ರ ಮೇರೆಗೆ ಅಥವಾ ಯಾವುದೇ ರಾಜ್ಯದಲ್ಲಿ ಜಾರಿಯಲ್ಲಿರುವ ಸಹಕಾರಿ ಸೊಸೈಟಿಗಳಿಗೆ ಸಂಬಂಧಿಸಿದ ಯಾವುದೇ ಇತರ ಅಧಿನಿಯಮದ ಮೇರೆಗೆ ಅಥವಾ ಬಹು ಘಟಕ ಸಹಕಾರಿ ಸೊಸೈಟಿಗಳ ಅಧಿನಿಯಮ, 1942 (1942 ರ 6)ರ ಅಥವಾ ಬಹು–ರಾಜ್ಯ ಸಹಕಾರಿ ಸೊಸೈಟಿಗಳ ಅಧಿನಿಯಮ, 1984 (1984ರ 51)ರ ಉಪಬಂಧಗಳಿಗೆ ಅನುಸಾರವಾಗಿ ನೋಂದಾಯಿತವಾದ ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿರುವ ಪ್ರತಿಯೊಂದು ಬಹು–ರಾಜ್ಯ ಸಹಕಾರಿ ಸೊಸೈಟಿಯನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ನೋಂದಾಯಿತವಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಅಂಥ ಸೊಸೈಟಿಯ ಉಪ ವಿಧಿಗಳು ಈ ಅಧಿನಿಯಮದ ಅಥವಾ ನಿಯಮಗಳ ಉಪಬಂಧಗಳಿಗೆ ಅವು ಅಸಂಗತವಾಗಿರದಿರುವಷ್ಟರ ಮಟ್ಟಿಗೆ ಅವುಗಳನ್ನು ಮಾರ್ಪಾಟುಗೊಳಿಸುವವರೆಗೆ ಅಥವಾ ರದ್ದುಗೊಳಿಸುವವರೆಗೆ ಅವು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

(4) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವುವೇ ಅಧಿನಿಯಮಗಳ ಮೇರೆಗೆ ಮಾಡಿದ ಎಲ್ಲ ನೇಮಕಗಳನ್ನು, ನಿಯಮಗಳನ್ನು, ಮತ್ತು ಆದೇಶಗಳನ್ನು ಮತ್ತು ಹೊರಡಿಸಿದ ಎಲ್ಲ ಅಧಿಸೂಚನೆಗಳನ್ನು ಮತ್ತು ನೋಟೀಸುಗಳನ್ನು ಮತ್ತು ಹೂಡಿದ ಎಲ್ಲ ದಾವೆಗಳನ್ನು ಮತ್ತು ಇತರ ವ್ಯವಹರಣೆಗಳನ್ನು ಅವು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಿರುವಷ್ಟರ ಮಟ್ಟಿಗೆ, ಈ ಅಧಿನಿಯಮದ ಮೇರೆಗೆ ಅನುಕ್ರಮವಾಗಿ ಮಾಡಲಾಗಿದೆಯೆಂದು, ಹೊರಡಿಸಲಾಗಿದೆಯೆಂದು ಮತ್ತು ಹೂಡಲಾಗಿದೆಯೆಂದು ಭಾವಿಸತಕ್ಕದ್ದು. ಬಹು-ರಾಜ್ಯ ಸಹಕಾರಿ ಸೊಸೈಟಿಯ ನೋಂದಣಿಯನ್ನು ರದ್ದುಗೊಳಿಸಲು ಮಾಡಿದ ಆದೇಶವನ್ನುಳಿದು, ಸೊಸೈಟಿಯನ್ನು ಈಗಾಗಲೇ ಅಂತಿಮವಾಗಿ ಸಮಾಪನಗೊಳಿಸಿದ್ದ ಹೊರತು, ಅದನ್ನು ಪರಿಸಮಾಪನಗೊಳಿಸಲು 86ನೇ ಪ್ರಕರಣದ ಮೇರೆಗೆ ಮಾಡಿದ ಆದೇಶವೆಂಬುದಾಗಿ ಭಾವಿಸತಕ್ಕದ್ದು.

(5) ಈ ಅಧಿನಿಯಮದ ಉಪಬಂಧಗಳು ಈ ಅಧಿನಿಯಮದ ಪ್ರಾರಂಭದ ಸಮಯದಲ್ಲಿ ಇತ್ಯರ್ಥದಲ್ಲಿರುವ,-

(ಎ) ಬಹು-ರಾಜ್ಯ ಸಹಕಾರಿ ಸೊಸೈಟಿಯು ನೋಂದಣಿಗೆ ಸಲ್ಲಿಸಿದ ಯಾವುದೇ ಅರ್ಜಿಗೆ;

(ಬಿ) ಬಹು-ರಾಜ್ಯ ಸಹಕಾರಿ ಸೊಸೈಟಿಯ ಉಪ-ವಿಧಿಗಳ ತಿದ್ದುಪಡಿಯ ನೋಂದಣಿಗಾಗಿ ಸಲ್ಲಿಸಿದ ಯಾವುದೇ ಅರ್ಜಿಗೆ

- ಮತ್ತು ಅದರ ಮೇರೆಗಿನ ಪರಿಣಾಮದಿಂದಾದ ವ್ಯವಹರಣೆಗಳಿಗೆ ಮತ್ತು ಅದಕ್ಕನುಸಾರವಾಗಿ ಮಂಜೂರು ಮಾಡಿದ ಯಾವುದೇ ನೋಂದಣಿಗೆ ಅನ್ವಯವಾಗತಕ್ಕದ್ದು.

(6) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ಅಧಿನಿಯಮದ ಪ್ರಾರಂಭದಲ್ಲಿ ಯಾವುದೇ ನ್ಯಾಯಾಲಯದಲ್ಲಿ ಅಥವಾ ಕೇಂದ್ರ ರಿಜಿಸ್ಟ್ರಾರನ ಮುಂದೆ ಅಥವಾ ಯಾವುದೇ ಇತರ ಪ್ರಾಧಿಕಾರದ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ಕಾನೂನು ವ್ಯವಹರಣೆಯು ಈ ಅಧಿನಿಯಮವು ಅಂಗೀಕಾರವಾಗಿರದಿದ್ದರೆ ಹೇಗೋ ಹಾಗೆ ಆ ನ್ಯಾಯಾಲಯದಲ್ಲಿ ಅಥವಾ ಕೇಂದ್ರ ರಿಜಿಸ್ಟ್ರಾರನ ಮುಂದೆ ಅಥವಾ ಆ ಪ್ರಾಧಿಕಾರದ ಮುಂದೆ ಮುಂದುವರೆಸತಕ್ಕದ್ದು.

**ಮೊದಲ ಅನುಸೂಚಿ**

**[3(ಜಿ) ಪ್ರಕರಣ ನೋಡಿ]**

**ಸಹಕಾರಿ ತತ್ವಗಳು**

**1. ಸ್ವಯಿಚ್ಛೆಯ ಮತ್ತು ಮುಕ್ತ ಸದಸ್ಯತ್ವ.-** ಸಹಕಾರಿ ಸೊಸೈಟಿಗಳು ಸ್ವಯಂ ಸೇವಾ ಸೊಸೈಟಿಗಳಾಗಿದ್ದು, ಅವು ಲಿಂಗ, ಸಾಮಾಜಿಕ ಅಸಮಾನತೆ, ಜನಾಂಗೀಯ, ರಾಜಕೀಯ ಸಿದ್ಧಾಂತಗಳ ಅಥವಾ ಧಾರ್ಮಿಕ ಪರಿಗಣನೆಯ ಆಧಾರಗಳ ಮೇರೆಗೆ ತಾರತಮ್ಯ ಮಾಡದೆ, ಅವುಗಳ ಸೇವೆಗಳನ್ನು ಬಳಸಲು ಸಮರ್ಥರಾಗಿರುವ ಮತ್ತು ಸದಸ್ಯತ್ವದ ಜವಾಬ್ದಾರಿಗಳನ್ನು ಒಪ್ಪಿಕೊಳ್ಳುವ ಎಲ್ಲ ವ್ಯಕ್ತಿಗಳಿಗೆ ಮುಕ್ತವಾಗಿರುತ್ತವೆ.

**2. ಸದಸ್ಯರಿಂದ ಪ್ರಜಾಸತ್ತಾತ್ಮಕ ನಿಯಂತ್ರಣ.–** ಸಹಕಾರಿ ಸೊಸೈಟಿಗಳು ಪ್ರಜಾಸತ್ತಾತ್ಮಕ ಸಂಸ್ಥೆಗಳಾಗಿದ್ದು, ತಮ್ಮ ನೀತಿಗಳನ್ನು ರೂಪಿಸುವಲ್ಲಿ ಮತ್ತು ತೀರ್ಮಾನವನ್ನು ಕೈಗೊಳ್ಳುವಲ್ಲಿ ಸಕ್ರಿಯಾವಾಗಿ ಪಾಲ್ಗೊಳ್ಳುವ ಸದಸ್ಯರಿಂದ ನಿಯಂತ್ರಿತವಾಗುತ್ತವೆ. ಈ ಸಹಕಾರಿ ಸೊಸೈಟಿಯ ಚುನಾಯಿತ ಪ್ರತಿನಿಧಿಗಳು ಸೊಸೈಟಿಯ ಸದಸ್ಯರಿಗೆ ಹೊಣೆಗಾರರು ಮತ್ತು ಜವಾಬ್ದಾರರು ಆಗಿರುತ್ತಾರೆ.

**3. ಸದಸ್ಯರು ಆರ್ಥಿಕವಾಗಿ ಪಾಲ್ಗೊಳ್ಳುವುದು.–** ಸದಸ್ಯರು ನ್ಯಾಯಸಮ್ಮತವಾದ ವಂತಿಗೆ ನೀಡಿ ತಮ್ಮ ಸಹಕಾರಿ ಸೊಸೈಟಿಯ ಬಂಡವಾಳವನ್ನು ಪ್ರಜಾಸತ್ತಾತ್ಮಕವಾಗಿ ನಿಯಂತ್ರಿಸುತ್ತಾರೆ. ಆರ್ಥಿಕ ಉತ್ಪತ್ತಿಯಿಂದ ಸಿಗುವ ಹೆಚ್ಚುವರಿಯ ಕನಿಷ್ಠ ಒಂದು ಭಾಗವು ಸಹಕಾರಿ ಸೊಸೈಟಿಗಳ ಸಾಮಾನ್ಯ ಸ್ವತ್ತಾಗಿರುತ್ತದೆ. ಉಳಿದ ಹೆಚ್ಚುವರಿಯನ್ನು ಸಹಕಾರಿ ಸೊಸೈಟಿಯಲ್ಲಿರುವ ಅವರ ಷೇರಿನ ಪ್ರಮಾಣಕ್ಕನುಸಾರವಾಗಿ ಅವರಿಗೆ ಪ್ರಯೋಜನಕಾರಿಯಾಗುವಂತೆ ಬಳಸಬಹುದು.

**4. ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ.–** ಸಹಕಾರಿ ಸೊಸೈಟಿಗಳು ಸ್ವಾಯತ್ತ, ಸ್ವ-ಸಹಾಯ ಸಂಸ್ಥೆಗಳಾಗಿದ್ದು, ತಮ್ಮ ಸದಸ್ಯರಿಂದ ನಿಯಂತ್ರಿತವಾಗುತ್ತವೆ. ಸಹಕಾರಿ ಸೊಸೈಟಿಗಳು ಸರ್ಕಾರವೂ ಸೇರಿದಂತೆ ಇತರ ಸಂಸ್ಥೆಗಳೊಂದಿಗೆ ಕರಾರು ಮಾಡಿಕೊಂಡರೆ ಅಥವಾ ಬಾಹ್ಯ ಮೂಲಗಳಿಂದ ಬಂಡವಾಳ ಸಂಗ್ರಹಿಸಿದರೆ, ಸದಸ್ಯರ ಪ್ರಜಾಸತ್ತಾತ್ಮಕ ನಿಯಂತ್ರಣವನ್ನು ಖಚಿತಪಡಿಸುವ ಮತ್ತು ಸಹಕಾರಿ ಸೊಸೈಟಿಗಳ ಸ್ವಾಯತ್ತತೆಯನ್ನು ಪಾಲಿಸುವ ಷರತ್ತುಗಳ ಮೇಲೆ, ಅವು ಹಾಗೆ ಮಾಡಬಹುದು.

**5. ಶಿಕ್ಷಣ, ತರಬೇತಿ ಮತ್ತು ಮಾಹಿತಿ.–** ಸಹಕಾರಿ ಸೊಸೈಟಿಗಳು ತಮ್ಮ ಸದಸ್ಯರಿಗೆ, ಚುನಾಯಿತ ಪ್ರತಿನಿಧಿಗಳಿಗೆ ಮತ್ತು ನೌಕರರಿಗೆ ಶಿಕ್ಷಣವನ್ನು ಮತ್ತು ತರಬೇತಿಯನ್ನು ನೀಡುತ್ತವೆ. ಹಾಗೆ ಮಾಡುವುದರಿಂದ ಅವು ತಮ್ಮ ಸಹಕಾರಿ ಸೊಸೈಟಿಗಳ ಅಭಿವೃದ್ಧಿಗೆ ಪರಿಣಾಮಕಾರಿಯಾಗಿ ಸೇವೆ ಸಲ್ಲಿಸಿದಂತಾಗುತ್ತದೆ. ಸಾರ್ವಜನಿಕರಿಗೆ, ಅದರಲ್ಲೂ ಮುಖ್ಯವಾಗಿ ಯುವ ಜನತೆಗೆ ಮತ್ತು ಮುಖಂಡರಿಗೆ ಸಹಕಾರದ ಸ್ವರೂಪ ಮತ್ತು ಪ್ರಯೋಜನಗಳ ಬಗ್ಗೆ ಅರಿವನ್ನು ಸಹ ಮೂಡಿಸುತ್ತವೆ.

**6. ಸಹಕಾರಿ ಸೊಸೈಟಿಗಳ ನಡುವೆ ಸಹಕಾರ.–** ಸಹಕಾರಿ ಸೊಸೈಟಿಗಳು ಲಭ್ಯವಿರುವ ಸ್ಥಳೀಯ, ಪ್ರಾದೇಶಿಕ, ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಸ್ವರೂಪಕ್ಕನುಗುಣವಾಗಿ ಜೊತೆಯಾಗಿ ಕೆಲಸ ಮಾಡುವ ಮೂಲಕ ಅತ್ಯಂತ ಪರಿಣಾಮಕಾರಿಯಾಗಿ ತಮ್ಮ ಸದಸ್ಯರಿಗೆ ಸೇವೆ ಸಲ್ಲಿಸುತ್ತವೆ ಮತ್ತು ಸಹಕಾರಿ ಚಳುವಳಿಯನ್ನು ಬಲಪಡಿಸುತ್ತವೆ.

**7. ಸಮುದಾಯದ ಬಗ್ಗೆ ಕಾಳಜಿ.–** ತಮ್ಮ ಸದಸ್ಯರ ಅಗತ್ಯಗಳ ಬಗ್ಗೆ ಗಮನ ಹರಿಸುವುದರ ಜೊತೆಗೆ, ತಮ್ಮ ಸದಸ್ಯರು ಅಂಗೀಕರಿಸಿದ ಕಾರ್ಯನೀತಿಗಳ ಮೂಲಕ ಸಮುದಾಯಗಳ ಸುಸ್ಥಿರ ಅಭಿವೃದ್ಧಿಗಾಗಿ ಸಹಕಾರಿ ಸೊಸೈಟಿಗಳು ಕಾರ್ಯನಿರ್ವಹಿಸುತ್ತವೆ.

## ಎರಡನೇ ಅನುಸೂಚಿ

**[3(ಆರ್) ಮತ್ತು 116ನೇ ಪ್ರಕರಣಗಳನ್ನು ನೋಡಿ]**

## ರಾಷ್ಟ್ರೀಯ ಸಹಕಾರಿ ಸೊಸೈಟಿಗಳ ಪಟ್ಟಿ

1. ರಾಷ್ಟ್ರೀಯ ಸಹಕಾರ ಭೂ ಅಭಿವೃದ್ಧಿ ಬ್ಯಾಂಕುಗಳ ಮಹಾಮಂಡಲ ನಿಯಮಿತ, ಮುಂಬಯಿ.
2. ರಾಜ್ಯ ಸಹಕಾರ ಬ್ಯಾಂಕುಗಳ ರಾಷ್ಟ್ರೀಯ ಮಹಾಮಂಡಲ ನಿಯಮಿತ, ಮುಂಬಯಿ.
3. ಭಾರತದ ರಾಷ್ಟ್ರೀಯ ಸಹಕಾರ ಮಹಾಮಂಡಲ ನಿಯಮಿತ, ನವದೆಹಲಿ.
4. ಭಾರತದ ರಾಷ್ಟ್ರೀಯ ಕೃಷಿ ಸಹಕಾರ ಮಾರುಕಟ್ಟೆ ಮಹಾಮಂಡಲ ನಿಯಮಿತ, ನವದೆಹಲಿ.
5. ಭಾರತದ ರಾಷ್ಟ್ರೀಯ ಸಹಕಾರ ಬಳಕೆದಾರರ ಮಹಾಮಂಡಲ ನಿಯಮಿತ, ನವದೆಹಲಿ.
6. ಸಹಕಾರ ಸಕ್ಕರೆ ಕಾರ್ಖಾನೆಗಳ ರಾಷ್ಟ್ರೀಯ ಮಹಾಮಂಡಲ ನಿಯಮಿತ, ನವದೆಹಲಿ.
7. ರಾಷ್ಟ್ರೀಯ ಕೈಗಾರಿಕಾ ಸಹಕಾರಿ ಮಹಾಮಂಡಲ ನಿಯಮಿತ, ನವದೆಹಲಿ.
8. ರಾಷ್ಟ್ರೀಯ ಸಹಕಾರ ವಸತಿ ಮಹಾಮಂಡಲ ನಿಯಮಿತ, ನವದೆಹಲಿ.
9. ಭಾರತೀಯ ರೈತರ ರಸಗೊಬ್ಬರ ಸಹಕಾರ ನಿಯಮಿತ. ನವದೆಹಲಿ.
10. ಅಖಿತ ಭಾರತ ಸಹಕಾರ ನೂಲು ಗಿರಣಿಗಳ ಮಹಾಮಂಡಲ ನಿಯಮಿತ, ಮುಂಬಯಿ.
11. ಅಖಿಲ ಭಾರತ ಕೈಗಾರಿಕಾ ಸಹಕಾರ ಬ್ಯಾಂಕುಗಳ ಮಹಾಮಂಡಲ ನಿಯಮಿತ, ಬೆಂಗಳೂರು.
12. ಭಾರತದ ರಾಷ್ಟ್ರೀಯ ಸಹಕಾರ ಹಾಲು ಮಹಾಮಂಡಲ ನಿಯಮಿತ, ಆನಂದ
13. ಪೆಟ್ರೋಫಿಲ್ಸ್ ಸಹಕಾರ ನಿಯಮಿತ, ವಡೋದರ.
14. ನ್ಯಾಷನಲ್ ಹೆವಿ ಇಂಜಿನಿಯರಿಂಗ್ ಕೋ – ಆಪರೇಟಿವ್ ನಿಯಮಿತ, ಪುಣೆ.
15. ಅಖಿಲ ಭಾರತ ಕೈಮಗ್ಗ ವಸ್ತ್ರಗಳ ಮಾರುಕಟ್ಟೆ ಸಹಕಾರ ಸೊಸೈಟಿ ನಿಯಮಿತ, ನವದೆಹಲಿ.
16. ಪಟ್ಟಣ ಸಹಕಾರಿ ಬ್ಯಾಂಕು ಮತ್ತು ಕ್ರೆಡಿಟ್ ಸೊಸೈಟಿಗಳ ರಾಷ್ಟ್ರೀಯ ಮಹಾ ಮಂಡಲ ನಿಯಮಿತ, ನವದೆಹಲಿ.
17. ಕೃಷಿಕ್ ಭಾರತಿ ಸಹಕಾರ ನಿಯಮಿತ, ನವದೆಹಲಿ.
18. ರಾಷ್ಟ್ರೀಯ ಮೀನುಗಾರರ ಸಹಕಾರ ಮಹಾಮಂಡಲ ನಿಯಮಿತ, ನವದೆಹಲಿ.
19. ರಾಷ್ಟ್ರೀಯ ಕಾರ್ಮಿಕ ಸಹಕಾರ ಮಹಾಮಂಡಲ ನಿಯಮಿತ, ನವದೆಹಲಿ.
20. ರಾಷ್ಟ್ರೀಯ ಸಹಕಾರ ಹೊಗೆಸೊಪ್ಪು ಬೆಳೆಗಾರರ ಮಹಾಮಂಡಲ, ಆನಂದ.
21. ಭಾರತ ಬುಡಕಟ್ಟು ಸಹಕಾರಿ ಮಾರುಕಟ್ಟೆ ಅಭಿವೃದ್ಧಿ ಮಹಾಮಂಡಲ ನಿಯಮಿತ, ನವದೆಹಲಿ.

* * * * *

ಮುದ್ರಕರು: ನಿರ್ದೇಶಕರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು. (ಕಾ.ಸೂ. ಪಿ-     - ಪಿ-3)